# ಕಾರ್ಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ-ಕಮ್ಯುನಿಸ್ಟ್ | **SUCI(C)**
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ

ಸಂಪುಟ: 37 ಸಂಚಿಕೆ: 11
ಜನವರಿ 2025
ಬೆಲೆ: ರೂ. 7/-


**ಒಳ ಪುಟಗಳಲ್ಲಿ............**


ಮಹಾರಾಷ್ಟ್ರ ಚುನಾವಣಾ ಫಲಿತಾಂಶ : ವಿಶ್ಲೇಷಣೆ........................3
ಸರ್ಕಾರ-ನ್ಯಾಯಾಂಗಗಳಲ್ಲಿ ಆಧ್ಯಾತ್ಮಿಕತೆಯ ಪ್ರವೇಶ..............5
ನಳಂದ ಮಹಾವಿಹಾರದ ಧ್ವಂಸ ವಿವಾದ.................................6
ಕೆವೈಸಿ : ಬಡ ಗ್ರಾಮೀಣ ಕಾರ್ಮಿಕರಿಗೆ ಬಾರದ ಹಣ..................7
ಬುಲ್ಡೋಜರ್ ರಾಜನೀತಿಗೆ ಬ್ರೇಕ್ ಹಾಕಿದ ಸುಪ್ರೀಂ ಕೋರ್ಟ್....8
ಚುನಾವಣೆ: ಮತದ ವ್ಯಾಪಾರಿಗಳ ಉಚಿತ ಕೊಡುಗೆಗಳ ಹಬ್ಬ.....9




ಸಮ್ಮೇಳನದಲ್ಲಿ ಭಾಗವಹಿಸಿದ ಸಹಸ್ರಾರು ಕಾರ್ಮಿಕರು

## ಎಐಯುಟಿಯುಸಿ ಅಖಿಲ ಭಾರತ ಸಮ್ಮೇಳನ

# "ಮನುಕುಲವನ್ನು ಶೋಷಣೆಯಿಂದ ವಿಮುಕ್ತಿಗೊಳಿಸುವ ಐತಿಹಾಸಿಕ ಜವಾಬ್ದಾರಿ ಕಾರ್ಮಿಕ ವರ್ಗದ ಮೇಲಿದೆ"

**- ಕಾಮ್ರೇಡ್ ಪ್ರವಾಷ್ ಘೋಷ್**

ಡಿಸೆಂಬರ್ 15, 2024 ರಂದು ಒರಿಸ್ಸಾದ ಭುವನೇಶ್ವರವು ಬೃಹತ್ ಕೆಂಪು ಸಾಗರಕ್ಕೆ ಸಾಕ್ಷಿಯಾಯಿತು. ಅಂದು ದೇಶದ ಮೂಲೆ ಮೂಲೆಗಳಿಂದ ಬಂದ 25,000ಕ್ಕೂ ಅಧಿಕ ಕಾರ್ಮಿಕರು ಕೆಂಪು ಧ್ವಜವನ್ನು ಎತ್ತಿ ಹಿಡಿಯುತ್ತಾ, ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಭುವನೇಶ್ವರದ ಪ್ರಮುಖ ರಸ್ತೆಯಲ್ಲಿ ಸಾಗಿದರು. ದೇಶದ ಏಕ ಮಾತ್ರ ಕ್ರಾಂತಿಕಾರಿ ಕಾರ್ಮಿಕ ಸಂಘಟನೆಯಾದ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್‌ನ 22ನೇ ಅಖಿಲ ಭಾರತ ಸಮ್ಮೇಳನದ ಬಹಿರಂಗ ಅಧಿವೇಶನದ ಅಂಗವಾಗಿ ರಾಜಮಹಲ್ ಚೌಕಿಯಿಂದ ಪಿಎಂಜಿ ಚೌಕಿಯವರೆಗೆ ಈ ಬೃಹತ್ ಮೆರವಣಿಗೆಯನ್ನು ಸಂಘಟಿಸಲಾಗಿತ್ತು.

ಪಿಎಂಜಿ ಚೌಕಿಯಲ್ಲಿ ಜರುಗಿದ ಬಹಿರಂಗ ಅಧಿವೇಶನದ ಅಧ್ಯಕ್ಷತೆಯನ್ನು ಅಖಿಲ ಭಾರತ ಅಧ್ಯಕ್ಷರಾದ ಕಾ॥ ಕೆ. ರಾಧಾಕೃಷ್ಣ ಅವರು ವಹಿಸಿದ್ದರು. ಗೌರವಾನ್ವಿತ ಅತಿಥಿಗಳಾಗಿ ಕಾರ್ಮಿಕ ಸಂಘಟನೆಗಳ ಜಾಗತಿಕ ಒಕ್ಕೂಟ (ವರ್ಲ್ಡ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ WFTU) ದ ಅಧ್ಯಕ್ಷರಾದ ಕಾ॥ ಸ್ವಾನ್‌ಡೈಲ್ ಮೈಕೆಲ್ ಮಕ್ವಾಯಿಬ ಅವರು ಆಗಮಿಸಿದ್ದರು. ಅವರು ಅತ್ಯಂತ ಭಾವನಾತ್ಮಕವಾಗಿ ಮಾತನಾಡುತ್ತಾ, ಬಂಡವಾಳವಾದ-ಸಾಮ್ರಾಜ್ಯವಾದದ ವಿರುದ್ಧ ಸಮರಶೀಲ ಹೋರಾಟ ತೀವ್ರಗೊಳಿಸಲು, ಭಾರತವೂ ಸೇರಿದಂತೆ ಜಗತ್ತಿನಾದ್ಯಂತ ಕಾರ್ಮಿಕರು ತಮ್ಮ ವರ್ಗ ಆಧಾರಿತ ಬಲಿಷ್ಠವಾದ ಐಕ್ಯತೆ ಹಾಗೂ ಸೌಹಾರ್ದತೆಯನ್ನು ಬೆಳೆಸಿಕೊಳ್ಳಬೇಕು ಎಂದರು. ಅಮೇರಿಕಾದ ಕುಮ್ಮಕ್ಕಿನಿಂದ ಮಕ್ಕಳು, ಮಹಿಳೆಯರನ್ನೂ ಬಿಡದೆ ಪ್ಯಾಲೆಸ್ಟೀನ್‌ನ ಲಕ್ಷಾಂತರ ಜನರನ್ನು ಕೊಲೆಗೈಯುತ್ತಿರುವ ಇಸ್ರೇಲ್‌ನ ಬರ್ಬರ ಯುದ್ಧ ದಾಳಿಯನ್ನು ತೀವ್ರವಾಗಿ ಖಂಡಿಸಿದರು. ನಿರಂತರವಾಗಿ ಕಾರ್ಮಿಕ ವರ್ಗದ ಹೋರಾಟಗಳನ್ನು ಕಟ್ಟುತ್ತಿರುವ ಭಾರತದ ಕಾರ್ಮಿಕರನ್ನು ಹಾಗೂ ಎಐಯುಟಿಯುಸಿಯನ್ನು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಪ್ಯಾಲೆಸ್ಟೀನ್, ನೇಪಾಳ, ಬಾಂಗ್ಲಾದೇಶದ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಎಐಯುಟಿಯುಸಿಯ ಅಖಿಲ ಭಾರತ ಉಪಾಧ್ಯಕ್ಷರಾದ ಕಾ॥ ಸತ್ಯವಾನ್ ಹಾಗೂ ಕಾ॥ ಸ್ವಪನ್ ಘೋಷ್, ಪ್ರಧಾನ ಕಾರ್ಯದರ್ಶಿಗಳಾದ ಕಾ॥ ಶಂಕರ್ ದಾಸ್‌ಗುಪ್ತಾ ಹಾಗೂ 10ನೇ ಪುಟಕ್ಕೆ...

# ಇತಿಹಾಸ ಸೃಷ್ಟಿಸಿದ ಆಶಾಗಳ ಧೀರೋದಾತ್ತ ಹೋರಾಟಕ್ಕೆ ಸಂದ ವಿಜಯ

## ಮಾಸಿಕ ಗೌರವಧನ 10,000 ರೂ.ಗಳು ಖಚಿತ-ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ




ಹಗಲು-ರಾತ್ರಿಯೆನ್ನದೆ, ಜನಾರೋಗ್ಯ ಸೇವೆಯಲ್ಲಿ ನಿರತರಾಗಿರುವ 'ಆಶಾ' ಸೋದರಿಯರು, ನ್ಯಾಯಬದ್ಧವಾಗಿ ತಮಗೆ ಸಲ್ಲಬೇಕಾದ ಮಾಸಿಕ ವೇತನ, ರಜೆ, ಆರೋಗ್ಯ ಸೌಲಭ್ಯ ಮುಂತಾದ ಹಕ್ಕುಗಳಿಂದ ವಂಚಿತರಾಗಿದ್ದಾರೆ. ದಶಕಗಳಿಂದ ಇದಕ್ಕಾಗಿ ಸರ್ಕಾರಗಳನ್ನು ಆಗ್ರಹಿಸಿದರೂ, ಅವರಿಗೆ ಗೌರವ-ಘನತೆಗಳಿಂದ ಬದುಕುವ ಹಕ್ಕನ್ನು ನಿರಾಕರಿಸಲಾಗಿದೆ. ಹಾಗಾಗಿ, 3ನೇ ಪುಟಕ್ಕೆ...

**ಕಾರ್ಮಿಕ ದೃಷ್ಟಿಕೋನದಿಂದ ದಿಟ್ಟ ಆಶಾ ಹೋರಾಟಗಾರ್ತಿಯರಿಗೆ ಕ್ರಾಂತಿಕಾರಿ ಅಭಿನಂದನೆಗಳು.**

## ಅದಾನಿ ಸಮೂಹದ ಮೇಲೆ ವಂಚನೆ ಆರೋಪ!

# ಅದಾನಿ ಸಾಮ್ರಾಜ್ಯದ ಕುಕೃತ್ಯಗಳಿಗೆ ಕೇಂದ್ರ ಬಿಜೆಪಿ ಸರ್ಕಾರದ ಶ್ರೀರಕ್ಷೆ!!

ಪ್ರಧಾನಿ ಮೋದಿಯವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಅದಾನಿ ಸಮೂಹದ ಮುಖ್ಯಸ್ಥ, ಗೌತಮ್ ಅದಾನಿ ಮತ್ತು ಅನೇಕ ಹಿರಿಯ ಬಿಸಿನೆಸ್ ಕಾರ್ಯ ನಿರ್ವಾಹಕರ ಮೇಲೆ ಅಮೆರಿಕಾದ ನ್ಯೂಯಾರ್ಕಿನ ಜಿಲ್ಲಾ ನ್ಯಾಯಾಲಯವು, ಸಹಸ್ರ ಬಿಲಿಯನ್ ಡಾಲರ್ ಮೌಲ್ಯದ ಲಂಚ ಮತ್ತು ಹೂಡಿಕೆಯ ವಂಚನೆಯ ಆರೋಪದಡಿ ಪ್ರಕರಣವನ್ನು ದಾಖಲು ಮಾಡಿರುವುದು ಭಾರತದ ಆರ್ಥಿಕ ಮತ್ತು ವ್ಯಾಪಾರಿ ವಲಯದಲ್ಲಿ ಬಿಗಿಯಾದ ವಾತಾವರಣನ್ನು ಸೃಷ್ಟಿಸಿದೆ. ಅಮೆರಿಕಾದ ಸೆಕ್ಯುರಿಟ್ ಮತ್ತು ಎಕ್ಸ್ಚೇಂಜ್ ಆಯೋಗದ ಕುರಿತು ತಮ್ಮ ನಿಲುವನ್ನು ಸ್ಪಷ್ಟಪಡಿಸುವಂತೆ ಗೌತಮ್ ಅದಾನಿ ಹಾಗೂ ಅವರ ಸೋದರನ ಮಗ ಸಾಗರ್ ಅದಾನಿ ಮೇಲೆ ಸಮನ್ಸ್ ಜಾರಿಗೊಳಿಸಲಾಗಿದೆ ಎಂದು ವರದಿಯಾಗಿದೆ ಮತ್ತು ರೈಟರ್ಸ್ ವರದಿಯ ಪ್ರಕಾರ ಲಂಚದ ಆಪಾದನೆ ಮೇಲೆ ಗೌತಮ್ ಅದಾನಿ ಹಾಗೂ ಅವರ ಸೋದರನ ಮಗನಿಗೆ ಬಂಧನದ ವಾರೆಂಟ್ ನೀಡಲಾಗಿದೆ.

### ಆರೋಪಗಳು:

ಗೌತಮ್ ಅದಾನಿ ಮತ್ತು ಇತರೆ ಏಳು ಜನ ಹಿರಿಯ ಅಧಿಕಾರಿಗಳು ಸೌರಶಕ್ತಿ ಗುತ್ತಿಗೆಯನ್ನು ಖಾತ್ರಿ ಪಡಿಸಿಕೊಳ್ಳಲು ಭಾರತ ಸರ್ಕಾರದ ಅಧಿಕಾರಿಗಳಿಗೆ 265 ಶತಕೋಟಿ ಡಾಲರ್ ಮೊತ್ತದ ಲಂಚದ ಆಮಿಷ ಒಡ್ಡಿದ್ದಾರೆ ಎಂದು ಅಮೆರಿಕಾದ ನ್ಯಾಯಾಂಗ ಇಲಾಖೆ ಆರೋಪಿಸಿದೆ. ಹಾಗೆಯೇ, ನ್ಯಾಯಾಂಗ ಇಲಾಖೆಯು ತಿಳಿಸಿರುವಂತೆ, ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್ ಮತ್ತು ಇನ್ನೊಂದು ಕಂಪನಿಯು ಭಾರತ ಸರ್ಕಾರಕ್ಕೆ 12 ಗಿಗಾ ವ್ಯಾಟ್ ಸೌರ ಶಕ್ತಿಯನ್ನು ಮಾರಾಟ ಮಾಡಲು ವ್ಯವಸ್ಥೆಯಾಗಿತ್ತು. ಈ ಒಪ್ಪಂದಗಳು ಸುಮಾರು 20 ವರ್ಷಗಳ ತೆರಿಗೆ ವಿನಾಯ್ತಿಯೊಂದಿಗೆ 2 ಬಿಲಿಯನ್ ಡಾಲರ್ (16,800 ಕೋಟಿ ರೂ.) ಗಿಂತ ಅಧಿಕ ಲಾಭವನ್ನು ತಂದುಕೊಡುವ ಅಂದಾಜು ಮಾಡಲಾಗಿತ್ತು. ಹಣಕಾಸು ಮತ್ತು ಲಂಚದ ಮೂಲಕ ಪಡೆದ ಸೌರಶಕ್ತಿ ಗುತ್ತಿಗೆಯ ಹಣ ಸೇರಿದಂತೆ ಈ ಯೋಜನೆಗಳನ್ನು ಅಮೆರಿಕಾದ ಹೂಡಿಕೆದಾರರಿಂದ ಮುಚ್ಚಿಟ್ಟ ಆಪಾದನೆ ಅದಾನಿ ಮತ್ತವರ ಸಹ ಪ್ರತಿವಾದಿಗಳ ಮೇಲಿದೆ. ಇದರೊಂದಿಗೆ, ಅಮೆರಿಕಾ ಸುರಕ್ಷಾ ಕಾನೂನಿನ ವಂಚನೆ ತಡೆ ಷರತ್ತುಗಳ ಉಲ್ಲಂಘನೆಗಾಗಿ ಅದಾನಿ ಮತ್ತು ಇತರೆ ಇಬ್ಬರು ಪ್ರತಿವಾದಿಗಳ ಮೇಲೆ ಅಮೆರಿಕಾ ಸೆಕ್ಯೂರಿಟಿ ಮತ್ತು ಎಕ್ಸ್ಚೇಂಜ್ ಆಯೋಗ ಮೊಕದ್ದಮೆ ಹೂಡಿದೆ, ಮತ್ತು ಅದು ಹಣಕಾಸು ದಂಡ ಹಾಗೂ ಇತರ ನಿರ್ಬಂಧಗಳಿಗೆ ಬೇಡಿಕೆ ಇಟ್ಟಿದೆ. ಗೌತಮ್ ಅದಾನಿಯ ಸೋದರನ ಮಗ ಸಾಗರ್ ಅದಾನಿ ಮತ್ತು ಅಧಿಕಾರಿ ವಿನೀತ್ ಜೈನ್, ಇವರು ಸಾಲ ಮತ್ತು ಬಾಂಡ್‌ಗಳ ಮೂಲಕ ಕಂಪನಿಗಾಗಿ ಮೂರು ಬಿಲಿಯನ್ ಡಾಲರ್ (ರೂ.25,200 ಕೋಟಿ) ಮೊತ್ತದ ಹಣವನ್ನು ಸಂಗ್ರಹಿಸಿದ್ದಾರೆ. ಸಾಲ ನೀಡಿದವರು ಮತ್ತು ಹೂಡಿಕೆದಾರರಿಂದ ಈ ವಂಚನೆಯನ್ನು ಮುಚ್ಚಿಟ್ಟು ಅವರು ಇದನ್ನು ಮಾಡಿದ್ದಾರೆ. ಗೌತಮ್ ಅದಾನಿಯು ಈ ಯೋಜನೆಯನ್ನು ಸಾಕಾರಗೊಳಿಸಲು ವೈಯಕ್ತಿಕವಾಗಿ ಭಾರತದ ಅಧಿಕಾರಿ ಒಬ್ಬರನ್ನು ಭೇಟಿಯಾಗಿದ್ದಾರೆ ಮತ್ತು ಲಂಚದ ಕುರಿತು ಚರ್ಚಿಸಲು ಮೇಲಿಂದ ಮೇಲೆ ಅವರೊಂದಿಗೆ ಸಭೆ ನಡೆಸಿದ್ದಾರೆ ಎಂದು ಸಿಎನ್‌ಎನ್ ವರದಿ ಮಾಡಿದೆ.

2021ರಲ್ಲಿ ಗೌತಮ್ ಅದಾನಿಯು ಸೋಲಾರ್ ಎನರ್ಜಿ ಕಾರ್ಪೊರೇಷನ್ ಆಫ್ ಇಂಡಿಯಾ ಮತ್ತು ಆಂಧ್ರ ಪ್ರದೇಶದ ವಿದ್ಯುತ್ ವಿತರಣಾ ಕಂಪನಿಗಳ ನಡುವೆ ಪಬ್ಲಿಕ್ ಸೇಫ್ಟಿ ಅಸೆಸ್ಮೆಂಟ್ (ವಿಚಾರಣೆಗೂ ಮುನ್ನ ನಿರ್ಧಾರ ತೆಗೆದುಕೊಳ್ಳಲು ನ್ಯಾಯಾಧೀಶರಿಗೆ ಸಹಾಯ ಮಾಡಬಲ್ಲ ಅಮೆರಿಕಾ ನ್ಯಾಯಾಂಗ ವ್ಯವಸ್ಥೆಯ ಒಂದು ಅಂಗ) ಅನ್ನು ರೂಪಿಸಲು ಉನ್ನತ ಶ್ರೇಣಿಯ ವಿದೇಶಿ ಸರ್ಕಾರಿ ಅಧಿಕಾರಿಯೊಬ್ಬರನ್ನು ಭೇಟಿ ಮಾಡಿದ್ದಾಗಿ ಅಮೆರಿಕಾದ ದಾಖಲೆ ಹೇಳುತ್ತದೆ. ಉನ್ನತ ಅಧಿಕಾರಿಗೆ ಸುಮಾರು 1,750 ಕೋಟಿ ರೂ. ಲಂಚ ನೀಡಿದ್ದರ ಫಲವಾಗಿ ಎಸ್‌ಇಸಿಐ (ಸೋಲಾರ್ ಎನರ್ಜಿ ಕಾರ್ಪೊರೇಷನ್ ಆಫ್ ಇಂಡಿಯಾ) ಇಂದ 7 ಗಿಗಾ ವ್ಯಾಟ್ ಸೌರಶಕ್ತಿಯನ್ನು ಖರೀದಿಸಲು ಆಂಧ್ರ ಪ್ರದೇಶದ ವಿದ್ಯುತ್ ವಿತರಣಾ ಕಂಪನಿಗಳು ಸಮ್ಮತಿ ನೀಡಿದವು ಎಂದು ದಾಖಲೆ ಹೇಳುತ್ತದೆ. 2022ರಷ್ಟೊತ್ತಿಗೆ ಒಡಿಶಾ, ಜಮ್ಮು ಮತ್ತು ಕಾಶ್ಮೀರ, ತಮಿಳುನಾಡು ಮತ್ತು ಛತ್ತೀಸಗಡ ಸೇರಿದಂತೆ ಹೆಚ್ಚಿನ ರಾಜ್ಯಗಳು ಈ ಯೋಜನೆಯಡಿ ಎಸ್‌ಇಸಿಐ ನೊಂದಿಗೆ ಪಬ್ಲಿಕ್ ಸೇಫ್ಟಿ ಅಸೆಸ್ಮೆಂಟ್‌ಅನ್ನು ರೂಪಿಸಿಕೊಂಡಿದ್ದವು. ಲಂಚ ನೀಡುವುದರ ಮೂಲಕ, ಜನರ ತೆರಿಗೆಯ ಮೇಲೆ ನಡೆಯುವ ಸರ್ಕಾರಿ ವಿದ್ಯುತ್ ವಿತರಣಾ ಕಂಪನಿಗಳು ಅದಾನಿ ಎನರ್ಜಿ ಇಂದ ಹೆಚ್ಚಿನ ಬೆಲೆ ತೆತ್ತು ಸೌರ ಶಕ್ತಿ ಖರೀದಿಸುವಂತೆ ಮಾಡಲಾಯಿತು.

### ಬಿಜೆಪಿ ಸರ್ಕಾರಗಳ ಪ್ರಾಯೋಜಕತ್ವ-ಅದಾನಿ ಸಮೂಹದ ಕ್ಷಿಪ್ರ ಬೆಳವಣಿಗೆ

ಕಳೆದ 20–22 ವರ್ಷಗಳಲ್ಲಿ ಅದಾನಿ ಸಮೂಹವು ಕ್ಷಿಪ್ರ ಬೆಳವಣಿಗೆಯನ್ನು ಕಂಡಿದೆ. ಪ್ರಧಾನಿ ಮೋದಿಯವರು ಗುಜರಾತಿನ ಮುಖ್ಯಮಂತ್ರಿ ಆದಾಗಿನಿಂದ ಅದಾನಿಯ ವ್ಯಾಪಾರದ ಭವಿಷ್ಯವು ಉಜ್ವಲಗೊಂಡಿದೆ. ಬಂದರು ನಿರ್ಮಾಣಕ್ಕಾಗಿ ಮತ್ತು ವಿಶೇಷ ಆರ್ಥಿಕ ವಲಯ ಯೋಜನೆಗಾಗಿ ಗೌತಮ್ ಅದಾನಿ, ಮೋದಿ ನೇತೃತ್ವದ ಬಿಜೆಪಿ ಸರ್ಕಾರದಿಂದ ಚದರ ಮೀಟರ್‌ಗೆ 1 ರೂಪಾಯಿಂದ 32 ರೂಪಾಯಿ ಮೌಲ್ಯದಂತೆ ಅತಿ ಕಡಿಮೆ ಬೆಲೆಯಲ್ಲಿ ಭೂಮಿಯನ್ನು ಪಡೆದುಕೊಂಡ ಜೊತೆಗೆ, ಸರ್ಕಾರವೇ ನೇರವಾಗಿ ಕೃಷಿಯೇತರ ಭೂಮಿಯನ್ನು ಅದಾನಿ ಬಂದರಿಗಾಗಿ ಮಂಜೂರು ಮಾಡಿತು ಮತ್ತು ದೇಶದ ಅತಿ ದೊಡ್ಡ ಬಹು ಉತ್ಪಾದಕ ವಿಶೇಷ ಆರ್ಥಿಕ ವಲಯವು ಕಚ್ ಜಿಲ್ಲೆಯ ಮುಂದ್ರಾ ಬ್ಲಾಕ್‌ನಲ್ಲಿ 15,946.32 ಎಕರೆಗಳಲ್ಲಿ (6,456 ಹೆಕ್ಟೇರ್) ಹರಡಿಕೊಂಡಿದೆ. ರಾಜ್ಯ ಸರ್ಕಾರ, ಬಂದರು ನೀತಿಯನ್ನು ಪಾಲಿಸದೆ, ಯಾವುದೇ ಹರಾಜು ಪ್ರಕ್ರಿಯೆಯನ್ನು ನಡೆಸದೆ, ಮುಂದ್ರಾ ಬಂದರಿನ ತನ್ನ ಪಾಲನ್ನು ವ್ಯವಸ್ಥಿತವಾಗಿ ಕಡಿತಗೊಳಿಸುತ್ತಾ, ಕೊನೆಗೆ ತನ್ನ ಸಂಪೂರ್ಣ ಪಾಲನ್ನು ಅದಾನಿ ಸಮೂಹಕ್ಕೆ ಬಿಟ್ಟುಕೊಟ್ಟು ಅಲ್ಲಿ ಖಾಸಗಿ ಬಂದರಿನ ಸ್ಥಾಪನೆಗೆ ದಾರಿ ಮಾಡಿ ಕೊಟ್ಟಿತು. ಅದಾನಿಗೆ ಒಂದಕ್ಕಿಂತ ಹೆಚ್ಚು ವಿಮಾನ ನಿಲ್ದಾಣಗಳನ್ನು ನೀಡಲು ಕೇಂದ್ರ ಬಿಜೆಪಿ ಸರ್ಕಾರವು ನಿಯಮಗಳನ್ನು ಕೂಡ ಬದಲು ಮಾಡಿತು. ಅದಾನಿ ಸಮೂಹವು ಸರ್ಕಾರದ ಅತ್ಯಂತ ಆಪ್ತ ಬಹುರಾಷ್ಟ್ರೀಯ ಕಂಪನಿಯಾಗಿದ್ದು, ಇವರಿಗೆ ಬೇಕಿದ್ದಲ್ಲೆಲ್ಲ ಒಂದರ ನಂತರ ಒಂದು ಗುತ್ತಿಗೆಯನ್ನು ಕೊಡಲಾಗಿದೆ; ಆದಿವಾಸಿಗಳ ಭೂಮಿಯನ್ನು ಕಬಳಿಸಿಕೊಂಡು ಗಣಿಗಾರಿಕೆಗೆ, ಬಂದರುಗಳು–ವಿಮಾನ ನಿಲ್ದಾಣಗಳ ನಿರ್ವಹಣೆ, ಶಸ್ತ್ರಾಸ್ತ್ರಗಳ ಉತ್ಪಾದನೆ, ಸಿಮೆಂಟ್ ಉತ್ಪಾದನೆ, ವಿದ್ಯುತ್ ಉತ್ಪಾದನೆ ಮತ್ತು ವಿತರಣೆ, ಕಲ್ಲಿದ್ದಲು ಮತ್ತು ಸೌರಶಕ್ತಿ ವ್ಯಾಪಾರ, ಮಾಧ್ಯಮ ಸಂಸ್ಥೆಗಳನ್ನು ನಡೆಸುವುದು, ಸೇರಿದಂತೆ ಇನ್ನೂ ಅನೇಕ ಕೊಡುಗೆಗಳನ್ನು ನೀಡಲಾಗಿದೆ.

2014ರಲ್ಲಿ ನರೇಂದ್ರ ಮೋದಿ ಪ್ರಧಾನ ಮಂತ್ರಿ ಆದಾಗ ಅದಾನಿಯ ಒಟ್ಟು ಆಸ್ತಿ 2,36,47.86 ಕೋಟಿ ರೂ. ಇತ್ತು. ಏಪ್ರಿಲ್ 2022ರಲ್ಲಿ ಗೌತಮ್ ಅದಾನಿಯು 7,47,000 ಕೋಟಿ ರೂ.ನೊಂದಿಗೆ ಜಗತ್ತಿನ ಎರಡನೆಯ ಶ್ರೀಮಂತ ವ್ಯಕ್ತಿಯಾದ. 2023ರಲ್ಲಿ ಪ್ರಧಾನಿ ಮೋದಿ ಮೂರನೇ ಬಾರಿ ಅಧಿಕಾರಕ್ಕೇರಿದಾಗ, ಅದಾನಿಯ ಅದೃಷ್ಟ ಮತ್ತಷ್ಟು ಖುಲಾಯಿಸಿತು. ಈಗ ಅವನ ಆಸ್ತಿ 8,27,475.56 ಕೋಟಿ ರೂ.ನಷ್ಟಿದೆ.

ಅದಾನಿಯ ಪ್ರಶ್ನಾರ್ಹ ಚಟುವಟಿಕೆಗಳಿಗೆ ಕೇಂದ್ರ ಸರ್ಕಾರ ಕುಮ್ಮಕ್ಕು ನೀಡುತ್ತಾ ಬಂದಿದೆ.

### ವಿದೇಶದಲ್ಲೂ ಅದಾನಿ ಪರ ಪ್ರಧಾನಿ ವಕಾಲತ್ತು!

ಕಳೆದ ಒಂದು ದಶಕ ಅಥವಾ ಅದಕ್ಕಿಂತ ಹೆಚ್ಚಿನ ಕಾಲದಿಂದ ಭಾರತದ ಆಚೆ ಅದಾನಿ ಸಮೂಹದ ಬೆಳವಣಿಗೆಯು ಪ್ರಧಾನಿಯವರ ರಾಜತಾಂತ್ರಿಕ ಪ್ರಯತ್ನದೊಂದಿಗೆ ನಿಕಟವಾಗಿ ಹೆಣೆದುಕೊಂಡಿದೆ. ಕೆಲವು ದೇಶಗಳಿಗೆ ಮೋದಿಯವರ ಅಧಿಕೃತ ಭೇಟಿಯ ನಂತರ ಅಥವಾ ಆ ದೇಶಗಳ ಮುಖ್ಯಸ್ಥರು ಭಾರತವನ್ನು ಭೇಟಿ ಮಾಡಿದ ನಂತರ ಅದಾನಿಯ ಹಲವಾರು ಅಂತರರಾಷ್ಟ್ರೀಯ ಒಪ್ಪಂದಗಳು ಕುದುರಿವೆ. ಮೋದಿ ಹೋದಲ್ಲಿ 'ಅದಾನಿ ಖಚಿತವಾಗಿ ಹೋಗುತ್ತಾನೆ' ಎಂಬಂತೆ, ಆಸ್ಟ್ರೇಲಿಯಾ, ಬಾಂಗ್ಲಾದೇಶ, ಗ್ರೀಸ್, ಇಂಡೋನೇಷ್ಯಾ, ಇಸ್ರೇಲ್, ಕೀನ್ಯಾ, ಮಯನ್ಮಾರ್, ನೇಪಾಳ, ಶ್ರೀಲಂಕಾ ಮತ್ತು ತಂಜಾನಿಯಾ ದೇಶಗಳಿಗೆ ಅದಾನಿ ತನ್ನ ಅಂತರರಾಷ್ಟ್ರೀಯ ಉದ್ಯಮವನ್ನು ವಿಸ್ತರಿಸಲು ಮೋದಿಯವರ ರಾಜತಾಂತ್ರಿಕ ನಡೆ ಸಹಾಯ ಮಾಡಿದೆ. ಶ್ರೀಲಂಕಾದ ವಾಯುಶಕ್ತಿ ಯೋಜನೆಯನ್ನು ಅದಾನಿಗೆ ನೀಡುವಂತೆ ಪ್ರಧಾನಿ, ಶ್ರೀಲಂಕಾದ ಅಧ್ಯಕ್ಷರ ಮೇಲೆ ಒತ್ತಡ ಹೇರಿದ್ದರು ಎಂದು ಶ್ರೀಲಂಕಾದ ಅಧಿಕಾರಿಗಳು ಸಂಸತ್ ಸಮಿತಿಯ ಮುಂದೆ ಬಹಿರಂಗ ಪಡಿಸಿದ್ದಾರೆ!

ಇಲ್ಲಿಯವರೆಗೂ ಯಾವುದೇ ಶಸ್ತ್ರಾಸ್ತ್ರಗಳನ್ನು ಉತ್ಪಾದಿಸದ ಅದಾನಿ ಸಮೂಹ ಇಸ್ರೇಲ್‌ನೊಂದಿಗಿನ ರಕ್ಷಣಾ ಗುತ್ತಿಗೆ ಪಡೆದಿದೆ. ಇಂಡೋನೇಷ್ಯಾದಿಂದ ಕಲ್ಲಿದ್ದಲನ್ನು ಅತಿಯಾಗಿ ಖರೀದಿ ಮಾಡಿದ ಪ್ರಕರಣ ಕೂಡ ಸಾಕಷ್ಟು ಸದ್ದು ಮಾಡಿದ್ದರೂ, ಅದರ ವಿರುದ್ಧ ಯಾವುದೇ ತನಿಖೆ ನಡೆಸಲಾಗಿಲ್ಲ. ಅದಾನಿ ಸಮೂಹದ ಯೋಜನೆಗಳಿಗೆ ಎಲ್ಲ ರೀತಿಯ ಅವಶ್ಯಕ ಸಹಾಯವನ್ನು ನೀಡಲು ಸಿದ್ಧರಿರುವುದಾಗಿ ಈಜಿಪ್ಟ್ ಅಧ್ಯಕ್ಷ ಅಬ್ದಲ್ ಫತಾಹ್ ಎಲ್–ಸಿಸಿ ಯು ಒತ್ತಿ ಹೇಳಿದ್ದಾರೆ. ಕಳೆದ ಹಲವು ವರ್ಷಗಳಿಂದ ಪ್ರಧಾನಿ ಮೋದಿ ಮತ್ತು ಅದಾನಿ ನಡುವಿನ ಬಾಂಧವ್ಯವು ಭಾರತದ ರಾಜಕೀಯ ಬೆಳವಣಿಗೆಗಳನ್ನು ಪ್ರಭಾವಿಸಿರುವಂತೆ, ಭಾರತದ ಇತಿಹಾಸದಲ್ಲಿ ಹಿಂದೆಂದೂ ಒಬ್ಬ ಪ್ರಧಾನಿ ಮತ್ತು ಉದ್ಯಮಿಯ ಸಂಬಂಧ ಇಷ್ಟು ಪ್ರಭಾವ ಬೀರಿದ್ದಿಲ್ಲ. ಮೋದಿ ಕೃಪೆಯಿಂದ ಎಲ್‌ಐಸಿ ಮತ್ತು ಎಸ್‌ಬಿಐನಿಂದ ಅದಾನಿಗೆ ಉದಾರವಾಗಿ ಸಾಲ ದೊರೆತಿದೆ. ಅದಾನಿಯ ದೊಡ್ಡ ಮೊತ್ತದ ಸಾಲಗಳನ್ನು ಕೂಡ ಉದಾರವಾಗಿ ಮನ್ನಾ ಮಾಡಲಾಗಿದೆ. ಅಖಿಲ ಭಾರತ ಬ್ಯಾಂಕ್ ಉದ್ಯೋಗಿಗಳ ಸಂಘವು ಆಪಾದಿಸಿರುವಂತೆ, ಅದಾನಿ ಸಮೂಹವು ವಶಪಡಿಸಿಕೊಂಡ ಹತ್ತು ಕಂಪನಿಗಳಿಗೆ ಇತ್ತೀಚೆಗಷ್ಟೇ ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ತೆರಿಗೆಯನ್ನು ರೂ. 62,000 ಕೋಟಿಯಿಂದ 16,000 ಕೋಟಿಗೆ ಇಳಿಸಲಾಗಿದೆ. ಇದು ಸಂಸ್ಥೆಗಳ ಆರ್ಥಿಕ ಸ್ಥಿರತೆ ಮತ್ತು ಮಿಲಿಯಾಂತರ ಭಾರತೀಯರ ಉಳಿತಾಯದ ಕುರಿತು ತೀವ್ರ ಕಳವಳವನ್ನು ಸೃಷ್ಟಿಸಿದೆ.

**ಇಲ್ಲಿಯವರೆಗೆ ದೇಶದ ಯಾವುದೇ ಪ್ರಧಾನಿಯೂ ಏಕೈಕ ಕೈಗಾರಿಕೋದ್ಯಮಿಗಾಗಿ ಇಷ್ಟೊಂದು ಅಕ್ರಮಗಳನ್ನು ಕಡೆಗಣಿಸಿರುವುದನ್ನು ಜನತೆ ಕಂಡಿಲ್ಲ**

### ಹಿಂಡನ್ ಬರ್ಗ್ ಸಂಶೋಧನೆಯ ಗಂಭೀರ ಆಪಾದನೆಗಳ ಕಡೆಗಣನೆ

ತನ್ನ ಷೇರು ಮೊತ್ತವನ್ನು ಹೆಚ್ಚಿಸಿಕೊಂಡ ಅದಾನಿ ಕಂಪನಿಗಳಲ್ಲಿ ಸೆಬಿ ಮುಖ್ಯಸ್ಥೆ ಮಾಧವಿ ಪುರಿ ಬುಚ್ ಹಾಗೂ ಅವರ ಪತಿ ಧಬಲ್ ಬುಚ್ ಅವರು ಗಣನೀಯ ಪಾಲುದಾರಿಕೆಯನ್ನು ಹೊಂದಿದ್ದಾರೆ ಎಂದು 10 ಆಗಸ್ಟ್ 2024ರಂದು ಬಿಡುಗಡೆಯಾದ ಹಿಂಡನ್ ಬರ್ಗ ಸಂಶೋಧನೆಯ ಎರಡನೇ ವರದಿ ಆಪಾದಿಸಿದೆ. ಇದು ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ. ಆದರೆ, ಹಿತಾಸಕ್ತಿಗಳ ಸಂಘರ್ಷವನ್ನು ಸೃಷ್ಟಿಸಿರುವ ಈ ಹೂಡಿಕೆ ವಿರುದ್ಧ ಕ್ರಮ ಕೈಗೊಳ್ಳುವ ಬದಲಿಗೆ, ಅಮೆರಿಕಾದ ಸುರಕ್ಷಾ ಕಾನೂನುಗಳನ್ನು ಉಲ್ಲಂಘಿಸಿದೆ ಎಂಬ ಆರೋಪದಡಿ ಹಿಂಡನ್ ಬರ್ಗ್‌ಗೆ ಷೋಕಾಸ್ ನೋಟಿಸ್ ನೀಡಲಾಗಿದೆ. ಬಿಜೆಪಿಯ ರಾಜಕೀಯ ಹಿತಾಸಕ್ತಿಯು ಅದಾನಿಯ ಕಾರ್ಪೊರೇಟ್ ಹಿತಾಸಕ್ತಿಯಿಂದ ಬೇರ್ಪಟ್ಟಿಲ್ಲ ಎಂಬ ವಾಸ್ತವವನ್ನು ಇದು ಖಚಿತಪಡಿಸುತ್ತದೆ.

### ಅಮೆರಿಕಾ ನ್ಯಾಯಾಂಗ ಇಲಾಖೆಯ ಆರೋಪಗಳ ಪರಿಣಾಮ:

ಅಮೆರಿಕಾದ ವಿದೇಶಿ ಭ್ರಷ್ಟಾಚಾರ ಚಟುವಟಿಕೆಗಳ ಅಧಿನಿಯಮ, 1977 (ಫಾರಿನ್ ಕರಪ್ಟ್ ಪ್ರಾಕ್ಟಿಸಸ್ ಆಕ್ಟ್, 1977) ಪ್ರಕಾರ ಉದ್ಯಮವನ್ನು ಉಳಿಸಿಕೊಳ್ಳಲು ಅಥವಾ ಗಳಿಸಿಕೊಳ್ಳಲು ವಿದೇಶಿ ಸರ್ಕಾರಿ ಅಧಿಕಾರಿಗಳಿಗೆ ಹಣ ನೀಡುವುದು ಕಾನೂನುಬಾಹಿರವಾಗಿದೆ. ಪ್ರಮುಖ ಕಾರ್ಪೊರೇಟ್ ಆಡಳಿತ ನಿಯಮಾವಳಿಗಳ ಕುರಿತು ಹೂಡಿಕೆದಾರರಿಗೆ ತಪ್ಪು ಮಾಹಿತಿ ನೀಡಿ ಹಣ ಸಂಗ್ರಹಿಸಿರುವುದು ವಿದೇಶಿ ಭ್ರಷ್ಟಾಚಾರ ಚಟುವಟಿಕೆಗಳ ಅಧಿನಿಯಮವನ್ನು ಹೊರತುಪಡಿಸಿದ ಕ್ರಿಮಿನಲ್ ಅಪರಾಧವಾಗಿದೆ. ಜೊತೆಗೆ, ತಪ್ಪು ಮಾಹಿತಿ ನೀಡಿ ತನಿಖೆಗೆ ಅಡ್ಡಿಪಡಿಸುವುದು ಮತ್ತು ಎಲೆಕ್ಟ್ರಾನಿಕ್ ಸಂಭಾಷಣೆಯ ದಾಖಲೆಗಳನ್ನು ನಾಶಗೊಳಿಸುವುದು ಕಾನೂನುಬಾಹಿರವಾಗಿದೆ. ಕಂಪನಿಯ ವಾರ್ಷಿಕ ವರದಿಗಳಲ್ಲಿ ಲಂಚದ ಪ್ರಕರಣಗಳನ್ನು ಅಧಿಕೃತವಾಗಿ ಮುಚ್ಚಿಟ್ಟಿರುವುದು ಕೂಡ ಪ್ರತ್ಯೇಕ ಅಪರಾಧವಾಗಿದೆ. ಅದಾನಿ ಸಮೂಹದ ಮೇಲೆ ಇವೆಲ್ಲಾ ಆಪಾದನೆಗಳು ಇವೆ.

### ಕೊನೆಯ ಮಾತು

ತೀವ್ರ ಭ್ರಷ್ಟಾಚಾರ ಪೀಡಿತ ಬಂಡವಾಳಶಾಹಿ ಮತ್ತು ಅದರ ನಿಷ್ಠಾವಂತ ಸೇವಕರ ಕೊಳಕು ಮುಖವನ್ನು ಮೇಲಿನ ಎಲ್ಲಾ ಸಂಗತಿಗಳು ಅನಾವರಣಗೊಳಿಸಿವೆ. ಜನರು ಹಸಿವೆಯಿಂದ ಸಾಯಬಹುದು, ಸುತ್ತುತ್ತಿರುವ ಬೆಲೆಗಳ ಗಾಲಿಗಳ ಕೆಳಗೆ ಸಿಕ್ಕಿಕೊಳ್ಳಬಹುದು, ಪರ್ವತಾಕಾರವಾಗಿ ಬೆಳೆಯುತ್ತಿರುವ ನಿರುದ್ಯೋಗದಡಿ ಜಜ್ಜಿ ಹೋಗಬಹುದು, ಪುಡಿಗಾಸನ್ನು ಗಳಿಸಲು ಸಾಧ್ಯವಾಗದ್ದರಿಂದ ಅವರು ಛಿದ್ರಗೊಂಡಿರಬಹುದು, ಕನಿಷ್ಠ ಆರೋಗ್ಯ ಸೌಕರ್ಯ ದೊರೆಯದೆ ಸಂಕಷ್ಟಕ್ಕೀಡಾಗಿರಬಹುದು. ಆದರೆ ಆಳುವ ಬಂಡವಾಳಶಾಹಿ ವರ್ಗ ಮತ್ತು ಅದರ ರಾಜಕೀಯ ಸೇವಕರು ಎಳ್ಳಷ್ಟು ಕೂಡ ಈ ಕುರಿತು ಯೋಚಿಸುವುದಿಲ್ಲ. ಕಣ್ಣಿಗೆ ರಾಚುವ ಕಾನೂನು ಉಲ್ಲಂಘನೆಯಿಂದಲಾದರೂ ಸರಿ, ಅಳಿದುಳಿದ ಪ್ರಜಾತಾಂತ್ರಿಕ ಮೌಲ್ಯಗಳನ್ನು ಹೊಸಕಿಹಾಕಿದರೂ ಸರಿ, ದೇಶದ ಪೀಡಿತ ಜನತೆಯ ರಕ್ತದ ಕೊನೆಯ ಹನಿಯನ್ನಾದರೂ ಹೀರಿ ಲಾಭವನ್ನು ವೃದ್ಧಿಸಿಕೊಳ್ಳುವುದರಲ್ಲಿ ಆಡಳಿತಾರೂಢ ಏಕಸ್ವಾಮ್ಯಾಧಿಪತಿಗಳು ತೊಡಗಿದ್ದಾರೆ. ಮತ್ತು ತಮ್ಮ ಆಡಳಿತವನ್ನು ಚಾಲ್ತಿಯಲ್ಲಿಡಲು, ತಮಗೆ ವಿಧೇಯರಾದ ರಾಜಕೀಯ ಏಜೆಂಟರುಗಳನ್ನು ಅವರು ನೇಮಕ ಮಾಡಿಕೊಳ್ಳುತ್ತಾರೆ. ಅಧಿಕಾರದ ಲಾಲಸೆಗಳಿಗೆ ಬಲಿಯಾದ ಅಂತಹ ಏಜೆಂಟರುಗಳು ಹಲ್ಲು ಗಿಂಜುತ್ತಾ ತಮ್ಮ ಒಡೆಯರ ಗುಲಾಮಗಿರಿ ಮಾಡುತ್ತಾರೆ. ಇದನ್ನು ದೇಶದ ಜನತೆ ಅರಿಯುವುದು, ಇದರ ವಿರುದ್ಧ ಧ್ವನಿಯೆತ್ತುವುದು ಅವಶ್ಯ.

ಈ ಕೂಡಲೇ ಅದಾನಿ ಸಮೂಹದ ವಿರುದ್ಧದ ಎಲ್ಲಾ ಆರೋಪಗಳ ಕುರಿತು ವಿಸ್ತೃತ ತನಿಖೆ ನಡೆಸಬೇಕು, ಸೆಬಿ ಮುಖ್ಯಸ್ಥರು ಮತ್ತು ಇತರ ತಪ್ಪಿತಸ್ಥರನ್ನು ಶಿಕ್ಷಿಸಬೇಕು ಮತ್ತು ಈ ಮೂಲಕ ಕೊನೆಯ ಪಕ್ಷ ಅಂತರರಾಷ್ಟ್ರೀಯ ವಲಯದಲ್ಲಿ ಹಾಳಾಗುತ್ತಿರುವ ದೇಶದ ಪ್ರತಿಷ್ಠೆಯನ್ನು ಉಳಿಸಬೇಕೆಂದು ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷ ಭಾರತ ಸರ್ಕಾರವನ್ನು ಆಗ್ರಹಿಸುತ್ತದೆ.

ಮಹಾರಾಷ್ಟ್ರ ಚುನಾವಣಾ ಫಲಿತಾಂಶ:

# ಚುನಾವಣೆಯ ನ್ಯಾಯಬದ್ಧತೆಯ ಬಗ್ಗೆ ಎದ್ದಿರುವ ಪ್ರಶ್ನೆಗಳು???

2024ರ ನವೆಂಬರ್ 20 ರಂದು ಒಂದೇ ಹಂತದಲ್ಲಿ ನಡೆದ ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ, ಶಿವಸೇನೆ(ಶಿಂಧೆ ಬಣ) ಮತ್ತು ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಪಕ್ಷಗಳನ್ನು ಒಳಗೊಂಡ ಅಧಿಕಾರರೂಢ ಮಹಾಯುತಿ ಮೈತ್ರಿ ಕೂಟ, 280 ಸ್ಥಾನಗಳಲ್ಲಿ 230 ಅನ್ನು ಗೆದ್ದು ನಿರ್ಧಾರಿತ ಜಯವನ್ನು ಪಡೆದಿದೆ. ಅದರಲ್ಲಿ ಬಿಜೆಪಿಯೊಂದೇ 132 ಸ್ಥಾನಗಳನ್ನು ಗೆದ್ದಿದೆ. ಕೇವಲ 5 ತಿಂಗಳುಗಳ ಹಿಂದೆ ನಡೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್, ಶಿವಸೇನೆ(ಉದ್ಧವ್ ಬಣ) ಮತ್ತು ಎನ್‌ಸಿಪಿ(ಶರದ್) ಪಕ್ಷಗಳ ಮೈತ್ರಿಕೂಟವಾದ ಮಹಾ ವಿಕಾಸ್ ಅಗಾಡಿ(ಎಂವಿಎ) 48 ಸ್ಥಾನಗಳಲ್ಲಿ 30 ಅನ್ನು ಗೆದ್ದು, ಮಹಾಯುತಿ ಕೇವಲ 17 ಅನ್ನು ಮಾತ್ರ ಪಡೆದಿರುವುದು, ಈಗ ಎಂವಿಎ, 32 ಲಕ್ಷದ 80000 ದಷ್ಟು ಹೆಚ್ಚಿನ ಸಂಖ್ಯೆಯ ಮತಗಳನ್ನು ಕಳೆದುಕೊಂಡಿರುವುದು, ಈಗಿನ ಫಲಿತಾಂಶದ ಬಗ್ಗೆ ಪ್ರಶ್ನೆಗಳನ್ನು ಎಬ್ಬಿಸಿದೆ. ಜನಾಭಿಪ್ರಾಯ ಇಷ್ಟು ಬೇಗ ಇಷ್ಟೊಂದು ಬದಲಾಗುವುದು ಸಾಧ್ಯವೇ ಎಂಬುದೊಂದು ಯಕ್ಷಪ್ರಶ್ನೆ!

### ಗ್ಯಾರಂಟಿಗಳ ಮಹಾಪೂರ!

ಕಳೆದೆಲ್ಲಾ ಚುನಾವಣೆಗಳಂತೆ, ಈ ಚುನಾವಣಾ ಪ್ರಚಾರದಲ್ಲೂ, ಜನರ ನೈಜ ಸಮಸ್ಯೆಗಳಾದ, ಗಗನಮುಖಿ ಬೆಲೆಗಳು, ಹೆಚ್ಚುತ್ತಿರುವ ನಿರುದ್ಯೋಗ, ಶ್ರಮಿಕ ಜನರ ಆದಾಯ ಕ್ಷೀಣಿಸುತ್ತಿರುವುದು, ಮಹಿಳೆಯರ ಮೇಲೆ ಹೆಚ್ಚುತ್ತಿರುವ ಪಾತಕಗಳು ಮುಂತಾದವುಗಳು ಮುನ್ನೆಲೆಗೆ ಬರಲೇ ಇಲ್ಲ. ಬದಲಿಗೆ, ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿರುವಂತೆ ಎಲ್ಲಾ ಪಕ್ಷಗಳೂ ಬಹಳ ಉತ್ಸಾಹದಿಂದ ಅನೇಕ ಗ್ಯಾರಂಟಿಗಳನ್ನು ಘೋಷಿಸುವಲ್ಲಿ ಸ್ಪರ್ಧೆ ನಡೆಸಿದವು. ಮಹಾಯುತಿ ಮೈತ್ರಿಕೂಟ, ಲಡ್ಕಿ ಬಹೆನ್ ಯೋಜನೆ ಮತ್ತು ಹಿರಿಯ ನಾಗರಿಕರ ನಿವೃತ್ತಿ ಯೋಜನೆಗಳ ಮೊತ್ತವನ್ನು ಏರಿಸುವ, ರೈತರಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಮತ್ತು ಅವರಿಗೆ ಈಗ ನೀಡುತ್ತಿರುವ ಸಬ್ಸಿಡಿಯನ್ನು ಹೆಚ್ಚಿಸುವ ವಾಗ್ದಾನ ಮಾಡಿತು. ಈ ಸ್ಪರ್ಧೆಯಲ್ಲಿ ಹಿಂದೆ ಬೀಳದ ಎಂವಿಎ ಮೈತ್ರಿಕೂಟ, ಮಹಿಳೆಯರಿಗೆ ಪ್ರತಿ ತಿಂಗಳೂ ಹಣವನ್ನು ನೀಡುವ, ಬಸ್‌ಗಳಲ್ಲಿ ಉಚಿತ ಪ್ರಯಾಣದ ಸೌಲಭ್ಯ ಒದಗಿಸುವ, ರೈತರ ಸಾಲ ಮನ್ನಾ ಮಾಡುವ, ಸಾಲ ತೀರಿಸುವ ರೈತರಿಗೆ ಇನ್ನಷ್ಟು ಮನ್ನಾ ಮಾಡುವ, ನಿರುದ್ಯೋಗಿ ಯುವ ಜನರಿಗೆ ನಿರುದ್ಯೋಗ ಭತ್ಯೆ ನೀಡುವ, ಬಡವರಿಗೆ ಆರೋಗ್ಯ ವಿಮೆ ನೀಡುವ, ಹೀಗೆ 'ಲೋಕಸೇವೆಯ ಪಂಚಸೂತ್ರ' ಕಾರ್ಯಕ್ರಮವನ್ನು ಘೋಷಿಸಿತು. ಈ ಗ್ಯಾರಂಟಿಗಳೇ ನಿರ್ಣಾಯಕವಾಗಿದ್ದಿದ್ದರೆ, ಅಗಾಡಿಯೇ ಮಹಾಯುತಿ ಗಿಂತ ಮೇಲೆ ಇರಬೇಕಾಗಿತ್ತು. ಆದರೆ, ಹೀಗಾಗಿಲ್ಲ.

### ಮಹಾಯುತಿ ಗೆಲುವಿನ ಕಾರಣಗಳ ವಿಶ್ಲೇಷಣೆ

ಅಗಾಡಿಯಲ್ಲಿ ಕೊನೆ ಗಳಿಗೆಯಲ್ಲಿ 25 ಸ್ಥಾನಗಳ ಬಗ್ಗೆ ನಡೆದ ವಿವಾದಗಳು, ಈ ಮೈತ್ರಿಕೂಟದಲ್ಲಿ ಬಿರುಕು ಎದ್ದಿರುವ ಸೂಚನೆಯನ್ನು ನೀಡಿದ್ದರಿಂದ, ಅದು ಅದರ ಸೋಲಿಗೆ ಕಾರಣವಾಯಿತು ಎಂದು ಕೆಲವೊಂದು ವಿಶ್ಲೇಷಣೆಗಳು ಹೇಳಿವೆ. ಆದರೆ, ಇಂತಹ ವಿವಾದಗಳು ಮಹಾಯುತಿಯಲ್ಲೂ ಇದ್ದವು ಎಂದು ವರದಿಗಳು ಹೇಳುತ್ತವೆ. ಹಾಗಾಗಿ, ಇದು ಸೋಲಿಗೆ ಕಾರಣ ಎಂದು ಹೇಳಲಾಗದು.

ಇನ್ನು, ತನ್ನ ಎಂದಿನ ಕೋಮುವಾದಿ–ಜಾತಿವಾದಿ–ಜನಾಂಗೀಯವಾದಿ ಅಜೆಂಡಾದಿಂದ ಜನರಲ್ಲಿ ಒಡಕನ್ನುಂಟು ಮಾಡಿ ಈ ಧ್ರುವೀಕರಣದ ಮೂಲಕ ತನ್ನ ಬೇಳೆ ಬೇಯಿಸಿಕೊಳ್ಳುವ ಬಿಜೆಪಿಯ ಹುನ್ನಾರ ಇದಕ್ಕೆ ಕಾರಣವಾಗಿರಬಹುದೇ? 'ಹಿಂದೂ ಐಕ್ಯತೆ ಮತ್ತು ಒಬಿಸಿ ಸದೃಢೀಕರಣ' ಎಂಬ ಬಿಜೆಪಿಯ ಘೋಷವಾಕ್ಯ, ಹಿಂದೂಗಳನ್ನು ಉದ್ದೇಶಿಸಿ ಪ್ರಧಾನಿ ಮೋದಿಯವರ 'ನಾವು ಒಟ್ಟಿಗಿದ್ದರೆ ಸುರಕ್ಷಿತರು' ಎಂಬ ಘೋಷಣೆ, ಅಲ್ಪಸಂಖ್ಯಾತರ ಬಗ್ಗೆ ಕೆಂಡಕಾರುವ ಉತ್ತರ ಪ್ರದೇಶದ ಕಾವಿಧಾರಿ ಮುಖ್ಯಮಂತ್ರಿ ಆದಿತ್ಯನಾಥ್‌ರ, ಒಬಿಸಿಗಳನ್ನು ಓಲೈಸುವ, 'ನಾವು ಒಡೆದುಹೋದರೆ, ಛಿದ್ರವಾಗುತ್ತೇವೆ' ಎಂಬ ಇನ್ನೊಂದು ಘೋಷಣೆ ಇದಕ್ಕೆ ಸ್ಪಷ್ಟ ಉದಾಹಣೆಗಳು.

ಇನ್ನೊಂದು ಗಮನಾರ್ಹ ವಿಷಯವೆಂದರೆ, ಕಳೆದ ಲೋಕಸಭಾ ಚುನಾವಣೆಯಲ್ಲಿ ಅಷ್ಟೊಂದು ಮುಂದೆ ಇರದಿದ್ದ ಆರ್‌ಎಸ್‌ಎಸ್, ಈ ಬಾರಿ, ಮಹಾರಾಷ್ಟ್ರದುದ್ದಗಲಕ್ಕೂ ಸಂಚರಿಸಿ, 'ಎಚ್ಚರದಿಂದಿರಿ' ಎಂಬ ಪ್ರಚಾರಸೂತ್ರ ಬಳಸಿ, ಬುಡಮಟ್ಟದಿಂದ ಮಹಾಯುತಿಗೆ ಬೆಂಬಲ ಗಳಿಸಲು ಶ್ರಮಿಸಿದ್ದು ಅದರ ಗೆಲುವಿನಲ್ಲಿ ಪಾತ್ರ ವಹಿಸಿತು ಎಂಬುದು. ಮರಾಠ ಜನಾಂಗದ ಮತ ಗಳಿಸಲು ಮರಾಠಾ ಮೀಸಲಾತಿ ಕಾರ್ಡ್ ಅನ್ನು ಸಹ ಬಳಸಲಾಯಿತು. ಹೀಗೆ, ಇವೆಲ್ಲವೂ ಕೇಸರಿ ಬಣದ ವಿಜಯದಲ್ಲಿ ಪ್ರಮುಖ ಪಾತ್ರ ವಹಿಸಿರಬಹುದು.

### ತಾಳೆಯಾಗದ ಮತದಾನದ ಅಂಕಿಅಂಶಗಳು!

ಮತ ಎಣಿಕೆಯಲ್ಲಿನ ವ್ಯತ್ಯಾಸಗಳು ಸಂಶಯಾಸ್ಪದವಾಗಿವೆ. ಏಕೆಂದರೆ, ಇಂತಹ ವಿವರಣೆಗೆ ಹೊರತಾದ ವ್ಯತ್ಯಾಸಗಳು ಸೋಲು–ಗೆಲುವಿನ ಲೆಕ್ಕಾಚಾರವನ್ನೇ ಬದಲಿಸಬಹುದು. ವರದಿಯಾದಂತೆ, ಮತದಾರರ ಡಾಟಾಗಳಲ್ಲಿನ ತಿದ್ದುಪಡಿಗಳು, ಇವಿಎಂನಲ್ಲಿನ ಹಸ್ತಕ್ಷೇಪ ಮತ್ತು ಚುನಾವಣಾ ಪ್ರಕ್ರಿಯೆಯಲ್ಲಿನ ಲೋಪದೋಷಗಳು ಈ ಚುನಾವಣೆಯನ್ನು ಆವರಿಸಿಕೊಂಡಿದ್ದವು. ಇವಿಷ್ಟು ಸಾಲದೆಂಬಂತೆ, ಬಿಜೆಪಿ ಮತ್ತು ಅದರ ಸಂಗಾತಿಗಳು ವಿರೋಧಿ ಮೈತ್ರಿಕೂಟದವರ ಬೆಂಬಲಿಗರ ಮತಗಳನ್ನು ತೆಗೆದು ಹಾಕಿ ತಮ್ಮ ನಕಲಿ ಮತಗಳನ್ನು ಸೇರಿಸಿದ್ದಾರೆ ಎಂದು ವಿರೋಧ ಪಕ್ಷದವರು ಆರೋಪಿಸಿದ್ದಾರೆ. ಕಳೆದ ಅಕ್ಟೋಬರ್ 19ರಂದು ಎಂವಿಎ ಮೈತ್ರಿಕೂಟವು, ಆಳುವ ಬಿಜೆಪಿಯು, ಅಧಿಕಾರಶಾಹಿ ಮತ್ತು ಕಣ್ಣಿದ್ದೂ ಕುರುಡಾಗಿರುವ ಚುನಾವಣಾ ಆಯೋಗ, ಇವೆರಡರ ಬೆಂಬಲದಿಂದ ಮತದಾರರ ಪಟ್ಟಿಯನ್ನು ತಿರುಚುತ್ತಿದೆ ಎಂದು ಭಾರತದ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿತ್ತು. ಹಲವಾರು ಕೇತ್ರಗಳಲ್ಲಿ ಎಂವಿಎ ಬೆಂಬಲಿಗರೆಂದು ಗುರುತಿಸಲಾದ ಸುಮಾರು 10000 ಮತದಾರರ ಹೆಸರುಗಳನ್ನು ತೆಗೆದುಹಾಕಿ, ಬದಲಿಗೆ ಅಷ್ಟೇ ನಕಲಿ ಮತದಾರರ ಹೆಸರುಗಳನ್ನು ಸೇರಿಸಲಾಗಿದೆ ಎಂಬುದು ಅವರ ಆರೋಪವಾಗಿತ್ತು. ಲೋಕಸಭಾ ಚುನಾವಣೆಯ ಬಳಿಕ ರಾಜ್ಯದಲ್ಲಿ ಮತದಾರರ ಪಟ್ಟಿಯಿಂದ ತೆಗೆದು ಹಾಕಲಾದ ಎಂವಿಎ ಬೆಂಬಲಿಗರ ಸಂಖ್ಯೆ ಸುಮಾರು 30 ಲಕ್ಷದಷ್ಟು ಎಂಬ ಗುಮಾನಿ ಇದೆ. ಅಲ್ಲದೆ, ಕೇಳಿಬಂದ ಇನ್ನೊಂದು ಆರೋಪವೆಂದರೆ, ಲೋಕಸಭಾ ಚುನಾವಣೆಯ 5 ತಿಂಗಳ ಬಳಿಕ ರಾಜ್ಯದ ಮತದಾರರ ಪಟ್ಟಿಗೆ 47 ಲಕ್ಷ 'ಹೊಸ' ಮತದಾರರ ಸೇರ್ಪಡೆಯಾಗಿದೆ ಎಂಬುದು. ಈ 'ಹೊಸ' ಮತದಾರರೇ ಬಿಜೆಪಿಯ ಮತಗಳ ಗಮನಾರ್ಹ ಹೆಚ್ಚಳಕ್ಕೆ ಕಾರಣರಾಗಿರಬಹುದು ಎಂದು ಎಂವಿಎ ಸಂಶಯ ವ್ಯಕ್ತ ಪಡಿಸಿದೆ.

ಸಂಶಯಕ್ಕೆ ಎಡೆ ಮಾಡಿಕೊಡುವ ಇನ್ನೊಂದು ಅಂಶವೆಂದರೆ, ಚುನಾವಣಾ ಆಯೋಗದ ವರದಿಯಂತೆ, ಮತದಾನ ಮುಗಿಯುವ ಒಂದು ಗಂಟೆಯ ಮೊದಲು ಆಗಿದ್ದ ಮತದಾನವು 58.22%. ಆದರೆ, ಅದೇ ರಾತ್ರಿ 11.30ರ ಲೆಕ್ಕದಲ್ಲಿ ಅದು 65.02% ದಾಟಿ, ಮರುದಿನ, ಅಂದರೆ ನವೆಂಬರ್ 21ರಂದು ಅದನ್ನು 66.05% ಎಂದು ಬದಲಾಯಿಸಲಾಗಿತ್ತು. ಈ 8% ರಷ್ಟು ಹೆಚ್ಚಳ ಅಂದರೆ 76ಲಕ್ಷ ಮತಗಳು! ಹಾಗಾದರೆ, ಚುನಾವಣಾ ಆಯೋಗ ನೀಡಿರುವ ಡಾಟಾ ಪ್ರಕಾರ, ಕೊನೆಯ ಒಂದು ಗಂಟೆಯ ಅವಧಿಯಲ್ಲಿ ಸುಮಾರು 76 ಲಕ್ಷ ಮತಗಳು ಸೇರ್ಪಡೆ ಆಗಿವೆ ಎಂದಾಯಿತು. ಮತ್ತೆ, 23.11.2024 ರಂದು, ಮತಗಳ ಎಣಿಕೆ ನಡೆಯುವ ಕೆಲವೇ ಗಂಟೆಗಳ ಮೊದಲು, ಇನ್ನಷ್ಟು ಅಂದರೆ, ಸುಮಾರು 10ಲಕ್ಷಗಳಷ್ಟು ಮತಗಳು ಸೇರ್ಪಡೆಯಾದವು. ಮತದಾನದ ಕೊನೆಯ ಒಂದು ಗಂಟೆಯಲ್ಲೇ 76 ಲಕ್ಷ ಮತಗಳು ಸೇರ್ಪಡೆಯಾಗಿದ್ದರೆ, ಚುನಾವಣಾ ಆಯೋಗಕ್ಕೆ, ರಾತ್ರಿ 11.30 ಗಂಟೆ ಒಳಗೆ ಅಂತಿಮ ಡಾಟಾ ಕೊಡುವುದು ಸಾಧ್ಯವಾಗುತ್ತದೆಯೇ? ಮಾಜಿ ಮುಖ್ಯ ಚುನಾವಣಾ ಆಯುಕ್ತರಾದ ಶ್ರೀ. ಎಸ್. ವೈ. ಖುರೇಶಿಯವರು, ಮತದಾನವನ್ನು ಸರಿಯಾಗಿಯೇ ದಾಖಲಿಸಲಾಗುತ್ತಿದ್ದು, ಕಳೆದ ಕೆಲವು ಚುನಾವಣೆಗಳಲ್ಲಿ ಮತದಾರರ ಸಂಖ್ಯೆಯ ಬಾರಿ ಹೆಚ್ಚಳಕ್ಕೆ ಯಾವುದೇ ತರ್ಕಬದ್ಧ ಕಾರಣಗಳಿಲ್ಲ ಎಂದು ಈ ಹಿಂದೆ ಹೇಳಿದ್ದರು. ಅಂದರೆ, ಇಷ್ಟೆಲ್ಲಾ ಆಧುನಿಕ ತಂತ್ರಜ್ಞಾನದ ಬಳಕೆ ಮತ್ತು ಕಣ್ಗಾವಲು ಇದ್ದಾಗಲೂ ಸರಿಯಾದ ಡಾಟಾ ನೀಡುವಲ್ಲಿ ಚುನಾವಣಾ ಆಯೋಗ ವಿಫಲವಾಗುತ್ತಿದೆ ಎಂದರೆ, ಅದು ಅಷ್ಟು ಅಸಮರ್ಥವೇ? ಅಥವಾ, ಚುನಾವಣಾ ಫಲಿತಾಂಶವನ್ನು ತಿರುಚುವ ಸಲುವಾಗಿಯೇ ಘೋಷಿತ ಅಂಕಿಅಂಶಗಳನ್ನು ಬದಲಾಯಿಸಲು ಆಯೋಗವನ್ನು ಸೂತ್ರದ ಗೊಂಬೆಯಂತೆ ನಡೆಸಿಕೊಳ್ಳಲಾಗುತ್ತಿದೆಯೇ? ಇತ್ತೀಚಿನ ದಿನಗಳಲ್ಲಿ ಆಳುವ ಬಂಡವಾಳಶಾಹಿ ವರ್ಗ ತಾನು ಬಯಸುವಂತಹ ಫಲಿತಾಂಶವನ್ನು ತರಿಸಲು ಹಣಬಲ–ಬಾಹುಬಲ–ಮಾಧ್ಯಮ ಬಲ–ಆಡಳಿತಾಂಗವನ್ನು ಬಳಸುತ್ತಿರುವ ಸಂದರ್ಭದಲ್ಲಿ ಇವು ಯಕ್ಷಪ್ರಶ್ನೆಯಾಗಿಯೇ ಉಳಿಯುತ್ತವೆ!

## ತತ್ತರಿಸುವ ಚಳಿಯಲ್ಲಿ ಪ್ರತಿಭಟನಾ ನಿರತ 'ಆಶಾ' ಸೋದರಿಯರು!



...1ನೇ ಪುಟದಿಂದ

ನಮ್ಮ ಕಾರ್ಮಿಕ ಸಂಘಟನೆ, ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ)ಗೆ ಸೇರ್ಪಡೆಯಾಗಿರುವ ಆಶಾ ಸಂಘಟನೆಯ ನೇತೃತ್ವದಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ಸಾವಿರಾರು ಆಶಾ ಕಾರ್ಯಕರ್ತರು ಸಾಗರದಂತೆ ಹರಿದು ಬಂದು ಅನಿರ್ದಿಷ್ಟ ಹೋರಾಟವನ್ನು ಪ್ರಾರಂಭಿಸಿದರು. 4 ದಿನಗಳ ಕಾಲ ಬೆಂಗಳೂರಿನ ತೀವ್ರ ಚಳಿಗೆ ತಮ್ಮನ್ನು ಒಡ್ಡಿಕೊಂಡು ಫುಟ್‌ಪಾತಿನ ಮೇಲೆಯೇ ಹಗಲು–ರಾತ್ರಿ ಕಳೆದು, ತಮ್ಮ ಹೋರಾಟದಲ್ಲಿ ಅಭೂತಪೂರ್ವ ಜಯ ಸಾಧಿಸಿರುವ ಈ ಹೋರಾಟಗಾರ್ತಿಯರಿಗೆ ಕಾರ್ಮಿಕ ದೃಷ್ಟಿಕೋನ ಕ್ರಾಂತಿಕಾರಿ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ನಮ್ಮ ಮುಖಪತ್ರಿಕೆ ಅಚ್ಚಿಗೆ ಹೋಗುವ ಹೊತ್ತಿಗೆ ಅವರ ಪ್ರತಿಭಟನೆ ಯಶಸ್ವಿಯಾದ ಸುದ್ದಿ ತಲುಪಿದ್ದು, ಪ್ರತಿಭಟನೆಯ ಸಂಪೂರ್ಣ ವರದಿಯನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ಟ್ರಂಪ್ ಮರು ಆಯ್ಕೆ :

# ಅಮೆರಿಕಾ ಮತ್ತು ಜಗತ್ತಿನ ಮುಂದಿರುವ ಸವಾಲುಗಳು!

ಅಮೆರಿಕಾದ ಚುನಾವಣೆಯ ಕಾವು ಇಳಿದು ರಿಪಬ್ಲಿಕನ್ ಪಕ್ಷದ ಡೊನಾಲ್ಡ್ ಟ್ರಂಪ್ ಮತ್ತೆ ಶ್ವೇತಭವನವನ್ನು ಪ್ರವೇಶಿಸಿದ್ದಾರೆ. ಇದು, ಪೆಂಟಗನ್ನಿನ ಆಕ್ರಮಣಕಾರಿ ಸಾಮ್ರಾಜ್ಯಶಾಹಿ ನೀತಿಗಳ ಕುರಿತು ಜಾಗತಿಕವಾಗಿ ಜನರ ಆತಂಕ ಮಡುಗಟ್ಟಿರುವ ಕಾಲ. ಟ್ರಂಪ್ ಎರಡನೇ ಬಾರಿ ಅಧಿಕಾರದ ಗದ್ದುಗೆಗೆ ಏರುವುದನ್ನು ಹಲವಾರು ಮಂದಿ ನಿರೀಕ್ಷಿಸಿರಲಿಲ್ಲ. ಆದರೆ ಜನರ ಜ್ವಲಂತ ಸಮಸ್ಯೆಗಳನ್ನು ಬದಿಗೊತ್ತಿ, ನಾಟಕೀಯ ವಾಗ್ವಾದಗಳ ಮೂಲಕ ಮತದಾರರ ದಿಕ್ಕು ತಪ್ಪಿಸಿ ಟ್ರಂಪ್ ಈ ಚುನಾವಣೆ ಗೆದ್ದಿದ್ದಾರೆ.

### ದ್ವಿಪಕ್ಷೀಯ ವ್ಯವಸ್ಥೆ

ಅಮೆರಿಕಾದಲ್ಲಿ ಸಾಕಷ್ಟು ಹಿಂದೆಯೇ ದ್ವಿಪಕ್ಷೀಯ ಅಧ್ಯಕ್ಷೀಯ ವ್ಯವಸ್ಥೆ ಸ್ಥಾಪನೆಯಾಗಿದೆ. ಆ ಮೂಲಕ ಚುನಾವಣಾ ವಿಜಯವು ಅಮೆರಿಕಾದ ಆಳುವ ಏಕಸ್ವಾಮ್ಯ ಬಂಡವಾಳಶಾಹಿ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಸೇವಕರಾದ ಡೆಮಾಕ್ರೆಟಿಕ್ ಮತ್ತು ರಿಪಬ್ಲಿಕನ್ ಪಕ್ಷಗಳಿಗೆ ಮಾತ್ರವೇ ಸೀಮಿತಗೊಂಡಿದೆ. ಹಾಗಾಗಿ ಅಮೆರಿಕಾದ ಆಳುವ ವರ್ಗದ ಇಬ್ಬರು ರಾಜಕೀಯ ಮ್ಯಾನೇಜರ್‌ಗಳಲ್ಲಿ ಒಬ್ಬರನ್ನು ಆಯ್ಕೆ ಮಾಡುವ ಪರಿಸ್ಥಿತಿ ಅಲ್ಲಿಯ ಜನರಿಗೆ ಬಂದಿದೆ. ಅದರಂತೆ ಈ ಬಾರಿ ಡೆಮಾಕ್ರೆಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್ ಮತ್ತು ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ನಡುವೆ ಸ್ಪರ್ಧೆ ಏರ್ಪಟ್ಟಿತ್ತು.

### ಟ್ರಂಪ್ 1.0 - 2016ರಿಂದ 2020ರ ವರೆಗೆ

2016ರಿಂದ 2020ರ ಅವಧಿಯಲ್ಲಿ ಅವರು ಮೊದಲ ಬಾರಿಗೆ ಅಧ್ಯಕ್ಷರಾಗಿದ್ದಾಗ, ಅವರೊಬ್ಬ ತತ್ವಹೀನ ವ್ಯವಹಾರಸ್ಥ, ಒಬ್ಬ ರಿಯಾಲಿಟಿ ಶೋ ಮನುಷ್ಯ, ಜನಗಳ ಭಾವನೆಗಳನ್ನು ಬೇಕಾದಂತೆ ಬಳಸಲು ತನ್ನ ನಾಲಿಗೆಯನ್ನು ಹರಿಬಿಡಲು ಹೇಸದ ವ್ಯಕ್ತಿ ಎಂಬುದನ್ನು ಸಾಬೀತು ಮಾಡಿದ್ದರು. ಜಾಗತೀಕರಣ ಮತ್ತು ಏಕಸ್ವಾಮ್ಯ ಕಾರ್ಪೋರೇಟ್ ಬಂಡವಾಳದ ಆಳ್ವಿಕೆ ಅಮೆರಿಕನ್ನರ ಬದುಕಿನಲ್ಲಿ ತಂದಿರುವ ಆರ್ಥಿಕ ಅಭದ್ರತೆ, ಅಸಂತೃಪ್ತಿಯ ಭಾವನೆಗಳನ್ನು ಜನಾಂಗೀಯವಾದಿ ದ್ವೇಷವನ್ನಾಗಿ ವಲಸೆಗಾರರ ವಿರುದ್ಧ ತಿರುಚಲು ಅವರಿಗೆ ಸಾಧ್ಯವಾಯಿತು. ಮೆಕ್ಸಿಕೋದ ವಲಸೆಗಾರರನ್ನು ಕ್ರಿಮಿನಲ್‌ಗಳು, ಅತ್ಯಾಚಾರಿಗಳು, ಡ್ರಗ್ ವ್ಯಾಪಾರಿಗಳು ಎಂದು ದೂಷಿಸಿದ್ದ ಟ್ರಂಪ್, ಅಮೆರಿಕಾ ಗಡಿಯುದ್ದಕ್ಕೂ ಮೆಕ್ಸಿಕೋ ಖರ್ಚಿನಲ್ಲೇ ಗೋಡೆ ಕಟ್ಟಲು ಆದೇಶಿಸಿದರು. ವಲಸೆಗಾರರು ಅಮೆರಿಕನ್ನರ ಉದ್ಯೋಗಗಳನ್ನು ಕಸಿದುಕೊಂಡಿದ್ದೇ ಅಲ್ಲದೆ ದೇಶದ ತೆರಿಗೆಯಿಂದ ಅವರ ಅವಶ್ಯಕತೆಗಳನ್ನು ಪೂರೈಸಬೇಕಾಗಿದೆ ಎಂದು ಪ್ರಚಾರ ಮಾಡಲಾಯಿತು. ಮುಸ್ಲಿಮರೆಲ್ಲರು ಭಯೋತ್ಪಾದಕರು ಎಂಬಂತೆ ಚಿತ್ರಿಸಿ ಅವರನ್ನು ದೇಶದೊಳಕ್ಕೆ ಬರುವುದನ್ನು ತಡೆಯಲಾಯಿತು. ಭಾರತೀಯರು ಸೇರಿದಂತೆ ಎಚ್ 1 ಬಿ ವೀಸಾ ಪಡೆದು ಅಮೆರಿಕಾಗೆ ಬರುವ ಉದ್ಯೋಗಿಗಳನ್ನು ತಡೆಯಲಾಗುವುದು ಎಂದು ಕೂಡ ಅವರು ಘೋಷಿಸಿದ್ದರು. ಜಾಗತೀಕರಣದ ನಂತರ ಉದ್ದಿಮೆಗಳು ಹಾಗೂ ಉದ್ಯೋಗಗಳು ಬೇರೆ ದೇಶಗಳಿಗೆ ರವಾನೆಯಾಗಿ, ಅಮೆರಿಕನ್ನರ ಒಂದು ವಿಭಾಗ ತೀವ್ರ ಸಂಕಷ್ಟಕ್ಕೆ ಈಡಾಗಿರುವುದು ಸುಳ್ಳಲ್ಲ. ಆದರೆ ಜನರ ಈ ನೈಜ ಸಮಸ್ಯೆಗಳ ಪರಿಹಾರಕ್ಕೆ ಅವರ ಆಡಳಿತದಲ್ಲಿ ಯಾವುದೇ ಮಹತ್ವ ದೊರಕಲಿಲ್ಲ. ಹವಾಮಾನ ಬದಲಾವಣೆಯ ಬಿಕ್ಕಟ್ಟನ್ನು ಟ್ರಂಪ್ ಅಲ್ಲಗಳೆಯುತ್ತಾ ಬಂದಿದ್ದು, ವಿಜ್ಞಾನಕ್ಕೆ ಸವಾಲೊಡ್ಡುವ ರೀತಿ ಅವೈಜ್ಞಾನಿಕ ವಿಚಾರಗಳನ್ನು ಯಾವುದೇ ಹಿಂಜರಿಕೆಯಿಲ್ಲದೆ ಹೇಳುತ್ತಾ ಬಂದಿದ್ದಾರೆ. ಹವಾಮಾನ ಬದಲಾವಣೆ ನಿಜವೆಂದು ಒಪ್ಪಿಕೊಂಡರೆ, ಅಮೆರಿಕಾ ಸಾವಿರಾರು ಕೋಟಿ ಹಣವನ್ನು ಸಮಸ್ಯೆಯ ಪರಿಹಾರಕ್ಕಾಗಿ ಬಡ ದೇಶಗಳಿಗೆ ಸಹಾಯದ ರೂಪದಲ್ಲಿ ನೀಡಬೇಕಾಗುತ್ತದೆ. ಅದಕ್ಕಾಗಿ ಇಂತಹ ಕಳ್ಳಾಟದ ದಾರಿಯನ್ನು ಹಿಡಿದಿದ್ದಾರೆ.

ಇನ್ನೊಂದೆಡೆ, ಕರಿಯರ ಮೇಲಿನ ದಬ್ಬಾಳಿಕೆ ಈ ಅವಧಿಯಲ್ಲಿ ಹೆಚ್ಚಾಯಿತು. ಜಾರ್ಜ್ ಫ್ಲಾಯ್ಡ್ ಎಂಬ ಕರಿಯ ಜನಾಂಗದ ವ್ಯಕ್ತಿಯನ್ನು ಬಿಳಿಯ ಪೊಲೀಸ್ ಒಬ್ಬಾತ ಕತ್ತಿನ ಮೇಲೆ ಕಾಲಿಟ್ಟು ಸಾಯಿಸಿದ ನಂತರ 'ಬ್ಲಾಕ್ ಲೈವ್ಸ್ ಮ್ಯಾಟರ್'('ಕರಿಯರ ಜೀವಕ್ಕೂ ಬೆಲೆಯಿದೆ') ಚಳವಳಿ ಕಾವು ಪಡೆಯಿತು. ಇಂತಹ ಜನಾಂಗೀಯ ಹಿಂಸೆ ಅಮೆರಿಕಾದ ಏಕತೆಗೆ ಧಕ್ಕೆ ತರುತ್ತಿದೆ. ಬಿಳಿಯರು ಶ್ರೇಷ್ಠರೆಂಬ ಅಂಧಾಭಿಮಾನದ ಬೆಂಕಿಗೆ ಟ್ರಂಪ್ ತುಪ್ಪ ಸುರಿಯುತ್ತಲೇ ಇದ್ದಾರೆ(ಜರ್ಮನರು ಮಾತ್ರ ಶ್ರೇಷ್ಠ ಎಂದು ಪ್ರಸಾರಮಾಡಿ ಯಹೂದಿಗಳ ಮಾರಣಹೋಮಕ್ಕೆ ಕಾರಣನಾದ ಫ್ಯಾಸೀವಾದಿ ಹಿಟ್ಲರನನ್ನು ನೆನಪಿಸಿಕೊಳ್ಳಿ). ಒಡೆದು ಆಳುವ ಬಂಡವಾಳಶಾಹಿ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಟ್ರಂಪ್ ಸಮರ್ಥ ಎಂಬುದು ಸಾಬೀತಾಗಿದೆ.

ಜೋ ಬಿಡೆನ್ ಅವರ ನಾಲ್ಕು ವರ್ಷಗಳ ಆಡಳಿತವು ಮಾತಿನಲ್ಲಿ ಬಿಟ್ಟರೆ, ನೀತಿಗಳ ವಿಷಯದಲ್ಲಿ ಮೂಲಭೂತ ಬದಲಾವಣೆಯನ್ನು ಕಾಣಲಿಲ್ಲ. ವಲಸೆಗಾರರ ಮೇಲಿನ ದ್ವೇಷ, ಜನಾಂಗೀಯವಾದಿ ಮಾತುಗಳು ಸ್ವಲ್ಪ ಕಡಿಮೆಯಾಗಿರಬಹುದು ಅಷ್ಟೇ. ನಿರುದ್ಯೋಗ, ಆರ್ಥಿಕ ಬಿಕ್ಕಟ್ಟು, ಸಾಮಾಜಿಕ ಭದ್ರತೆಯ ಕೊರತೆ, ದುಬಾರಿ ಆರೋಗ್ಯ ವೆಚ್ಚ, ಅತಿಯಾದ ಸಾಲ ಇವೆಲ್ಲ ಸಮಸ್ಯೆಗಳು ಹಾಗೆಯೇ ಉಳಿದವು. ಜೊತೆಗೆ ಪ್ಯಾಲೇಸ್ಟೀನ್ ಮೇಲೆ ದಾಳಿ ನಡೆಸಲು ಇಸ್ರೇಲಿಗೆ, ಅದೇ ರೀತಿ ರಷ್ಯಾ ಜೊತೆಗಿನ ಯುದ್ಧದಲ್ಲಿ ಉಕ್ರೇನಿಗೆ ತೆರಿಗೆಯ ಹಣದಲ್ಲಿ ನೆರವು ನೀಡುತ್ತಿರುವ ಬಗ್ಗೆ ಅಮೆರಿಕದಲ್ಲಿ ವಿರೋಧವೂ ಇದೆ. ಇಂತಹ ಪರಿಸ್ಥಿತಿಯಲ್ಲಿ ಅಮೆರಿಕಾ ಮತ್ತೆ ಚುನಾವಣೆ ಎದುರಿಸಿದೆ. ತಮ್ಮ ವೃದ್ಧಾಪ್ಯದ ಕಾರಣದಿಂದ ದಕ್ಷತೆಯನ್ನು ಕಳೆದುಕೊಂಡ ಬಿಡೆನ್ ಅವರನ್ನು ಕೊನೆಯ ಗಳಿಗೆಯಲ್ಲಿ ಅಧ್ಯಕ್ಷೀಯ ಸ್ಪರ್ಧೆಯಿಂದ ಹಿಂದೆ ಸರಿಸಿ ಭಾರತೀಯ ಮೂಲದ ಕಮಲಾ ಹ್ಯಾರಿಸ್ ಅವರನ್ನು ನಾಮ ನಿರ್ದೇಶನ ಮಾಡಲಾಯಿತು. ಇವೆಲ್ಲವೂ ಡೆಮಾಕ್ರೆಟಿಕ್ ಪಕ್ಷಕ್ಕೆ ತೊಡಕಾಗಿ ಪರಿಣಮಿಸಿದವು.

### ಅಂಧಾಭಿಮಾನ ಕೆರಳಿಸುವ ಪ್ರಚಾರ

ಪ್ರಪಂಚದ ಅತಿ ಶ್ರೀಮಂತ ವ್ಯಕ್ತಿ ಎಲೆನ್ ಮಸ್ಕ್, ಟ್ರಂಪ್ ಪರವಾಗಿ ಪ್ರಚಾರ ಮಾಡಿದ್ದಾರೆ. ಆತ ಸ್ಥಾಪಿಸಿದ ರಾಜಕೀಯ ಕ್ರಿಯಾ ಸಮಿತಿ (ಪಿಎಸಿ)ಯ ಮನವಿ ಪತ್ರಕ್ಕೆ ಸಹಿ ಮಾಡಿದವರಿಗೆ ಪ್ರತಿ ದಿನ ಲಾಟರಿ ಎತ್ತಿ ದಿನಕ್ಕೆ 1 ಮಿಲಿಯನ್ ಡಾಲರ್ ಬಹುಮಾನ ನೀಡುವುದಾಗಿ ಘೋಷಿಸಿದರು. ಟ್ರಂಪ್‌ನ 26 ಮಂದಿ ದಶ ಕೋಟ್ಯಧಿಪತಿ ಬೆಂಬಲಿಗರು ಚುನಾವಣಾ ಪ್ರಚಾರಕ್ಕಾಗಿ 162 ದಶ ಕೋಟಿ ಡಾಲರ್ (ಸುಮಾರು ರೂ. 1,375 ಕೋಟಿ) ದೇಣಿಗೆ ನೀಡಿದ್ದಾರೆ. ಇವರು ಸಹಜವಾಗಿ ತಮಗೆ ಬೇಕಾದವರನ್ನು ಅಧಿಕಾರದಲ್ಲಿ ಕೂರಿಸಿ, ತಮಗೆ ಲಾಭ ತರುವಂತಹ ನೀತಿಗಳನ್ನು, ಯೋಜನೆಗಳನ್ನು ಜಾರಿಗೆ ತರಲು ಲಾಬಿ ಮಾಡುವ ಉದ್ದೇಶ ಹೊಂದಿದ್ದಾರೆ ಎಂಬುದರಲ್ಲಿ ಸಂಶಯವಿಲ್ಲ. ಚುನಾವಣಾ ಪ್ರಚಾರದ ಸಂದರ್ಭದಲ್ಲಿ ವಲಸೆಗಾರರ ವಿರುದ್ಧ ಕೆಂಡ ಕಾರಿದ ಟ್ರಂಪ್, ಗೆದ್ದ ನಂತರ ಎಚ್ 1 ಬಿ ವೀಸಾ ಪರವಾಗಿ ಮಾತನಾಡಿದ್ದಾರೆ. ಏಕೆಂದರೆ, ಎಲೆನ್ ಮಸ್ಕ್‌ರಂತಹ ತಂತ್ರಜ್ಞಾನ ಕುಳಗಳಿಗೆ ವಿದೇಶಗಳ ಅಗ್ಗದ ಕುಶಲ ಶ್ರಮಶಕ್ತಿ ಹೆಚ್ಚು ಲಾಭದಾಯಕ. ತಮ್ಮ ದೇಶದ ಜನರ ಕಷ್ಟ ನಷ್ಟ ಅವರಿಗೆ ಬೇಕಾಗಿಲ್ಲ.

ಅದೇ ರೀತಿ, ಫೇಸ್‌ಬುಕ್, ಎಕ್ಸ್ (ಮಸ್ಕ್ ಒಡೆತನ), ಟಿಕ್‌ಟಾಕ್ ಮುಂತಾದ ಸಾಮಾಜಿಕ ಜಾಲತಾಣಗಳ ಮೂಲಕ ವ್ಯವಸ್ಥಿತ ಪಕ್ಷಪಾತಿ ಪ್ರಚಾರ ಮಾಡಲಾಯಿತು. ಜನಾಂಗೀಯ ದ್ವೇಷ, ಗರ್ಭಪಾತ ನಿಷೇಧಿಸುವ ಮಹಿಳಾ ವಿರೋಧಿ, ವಲಸೆಗಾರ ಕಾರ್ಮಿಕ ವಿರೋಧಿ ಪೋಸ್ಟ್‌ಗಳಿಗೆ ಈ ಜಾಲತಾಣಗಳಲ್ಲಿ ಹೆಚ್ಚಿನ ರೀಚ್ ನೀಡಿ ಮತದಾರರನ್ನು ಪ್ರಭಾವಿಸಲಾಯಿತು. ಕಮಲಾ ಹ್ಯಾರಿಸ್ ಗೆದ್ದರೆ ಅಮೆರಿಕಾದ ಅಸ್ತಿತ್ವವೇ ನಾಶವಾಗಲಿದೆ ಎಂದು ಮತದಾರರನ್ನು ನಂಬಿಸಲಾಯಿತು.

### ಟ್ರಂಪ್ 2.0 ಮತ್ತೆ ಅಮೆರಿಕಾ ಫಸ್ಟ್ ಘೋಷಣೆ

ಅಮೆರಿಕಾ ಫಸ್ಟ್, ಮೇಕ್ ಅಮೆರಿಕಾ ಗ್ರೇಟ್ ಅಗೈನ್ (ಎಂಎಜಿಎ–ಮಗಾ–ಅಮೆರಿಕಾವನ್ನು ಮತ್ತೆ ಮಹಾನ್ ಮಾಡಿ) ಇವೆಲ್ಲವೂ ಅಮೆರಿಕಾದ ಬಂಡವಾಳಶಾಹಿ–ಸಾಮ್ರಾಜ್ಯಶಾಹಿ ಆಳ್ವಿಕರ ಉಗ್ರ ರಾಷ್ಟ್ರೀಯವಾದದ ಸಂಕೇತ. ತಮ್ಮ ಹಿತಾಸಕ್ತಿಗಾಗಿ ಯಾರನ್ನು ಬೇಕಾದರೂ ಶೋಷಣೆ ಮಾಡುವುದನ್ನು, ಯಾವ ದೇಶದ ಮೇಲೆ ಬೇಕಾದರೂ ಯುದ್ಧ ಹೂಡುವುದನ್ನು ಸಮರ್ಥಿಸಿಕೊಳ್ಳಲು ಈ ಘೋಷಣೆಗಳನ್ನು ಆಳುವ ವರ್ಗವು ಬಳಸಿಕೊಳ್ಳುತ್ತದೆ. ಫ್ಯಾಸೀವಾದವನ್ನು ಬೆಳೆಸಲು ಮತ್ತು ಹರಡಲು ಇವೆಲ್ಲ ಬೇಕಾಗಿವೆ. ಆದರೆ ಇವು ಕಾರ್ಮಿಕ ವರ್ಗ ಹೋರಾಟಗಳಿಗೆ ಮಾರಕವಾಗಿ ಪರಿಣಮಿಸುತ್ತವೆ. ಜಾಗತೀಕರಣದ ಆರಂಭದ ವರ್ಷಗಳಲ್ಲಿ ಮುಂದುವರಿದ ದೇಶಗಳಿಗೆ ಲಭಿಸಿದ ಅಲ್ಪ ಸ್ವಲ್ಪ ಮಾರುಕಟ್ಟೆ ಕೂಡ ಈಗ ಬರಿದಾಗಿ ಹೋಗಿರುವುದರಿಂದ ಪ್ರತಿಯೊಂದು ದೇಶದ ಬಂಡವಾಳಶಾಹಿ ವರ್ಗವು ತನ್ನ ಮಾರುಕಟ್ಟೆಯನ್ನು ರಕ್ಷಿಸುವ ಧೋರಣೆಗೆ ಬೇಕಾದ ರಾಜಕೀಯವನ್ನು ಪೋಷಿಸುತ್ತಿದೆ. ಇದು ಉಗ್ರ ರಾಷ್ಟ್ರವಾದಿ ನಾಯಕರನ್ನು ಹುಟ್ಟುಹಾಕಿದೆ. ಇತ್ತೀಚೆಗೆ ಟ್ರಂಪ್ ಬೆಂಬಲಿಗರು ಸಂಘಟಿಸಿದ ಎಂಎಜಿಎ–ಮಗಾ ಸಭೆಯಲ್ಲಿ ಭಾರತೀಯರ ಮೇಲೆ ಮೂರನೇ ಜಗತ್ತಿನ ನುಸುಳುಕೋರರು ಎಂದು ಗೂಬೆ ಕೂರಿಸಲಾಯಿತು. ನಮ್ಮ ದೇಶದಲ್ಲಿ ಶ್ರೀಮಾನ್ ಮೋದಿಯಂತೆ, ಡೊನಾಲ್ಡ್ ಟ್ರಂಪ್ ಕೂಡ ಬಂಡವಾಳಶಾಹಿ ವರ್ಗದ ರಾಜಕೀಯ ಮ್ಯಾನೇಜರ್.

### ಕ್ರಾಂತಿಕಾರಿ ಪರ್ಯಾಯವನ್ನು ಕಟ್ಟುವುದೇ ಇಂದಿನ ಅಗತ್ಯ

ಮಾರ್ಕ್ಸ್‌ವಾದ–ಲೆನಿನ್‌ವಾದದ ಅನುಯಾಯಿಗಳಾಗಿ ನಾವು ಫ್ಯಾಸೀವಾದವನ್ನು ಕೇವಲ ಚುನಾವಣೆಯ ಗೆಲುವಿನ ಮೂಲಕ ನಿರ್ಮೂಲನೆ ಮಾಡಲು ಸಾಧ್ಯವೆಂದು ಭಾವಿಸುವುದು ಅಸಾಧ್ಯ. ಅದಕ್ಕಾಗಿ ಸರಿಯಾದ ಸಿದ್ಧಾಂತವನ್ನು ಆಧರಿಸಿದ ಸಂಘಟಿತ ಕಾರ್ಮಿಕ ವರ್ಗದ ಹೋರಾಟ ಅನಿವಾರ್ಯ. ಇಂದಿನ ಕಾಲಘಟ್ಟದಲ್ಲಿ ನಮ್ಮ ಪಕ್ಷದ ಸಂಸ್ಥಾಪಕರು, ಓರ್ವ ಮಹಾನ್ ಮಾರ್ಕ್ಸ್‌ವಾದಿ ಚಿಂತಕರು ಆದ ಕಾ. ಶಿವದಾಸ್ ಘೋಷ್ ಅವರ ಚಿಂತನೆಗಳನ್ನು ಗ್ರಹಿಸದೆ ನೈಜ ಕ್ರಾಂತಿಕಾರಿ ಹೋರಾಟಗಳನ್ನು ಕಟ್ಟುವುದು ಸಾಧ್ಯವಿಲ್ಲ. ಅಮೆರಿಕಾದಲ್ಲಿ ಕೂಡ ಫ್ಯಾಸೀವಾದ, ಜನಾಂಗೀಯ ಹಿಂಸೆ, ಮಹಿಳಾ ಶೋಷಣೆ, ಕಾರ್ಮಿಕರ ಮೇಲಿನ ಶೋಷಣೆ ಮತ್ತು ಸಾಮ್ರಾಜ್ಯಶಾಹಿ ಯುದ್ಧಗಳನ್ನು ಕೊನೆಗೊಳಿಸಬೇಕೆಂದರೆ ಅದು ಸಮಾಜವಾದಿ ಅಮೆರಿಕಾವನ್ನು ಕಟ್ಟುವ ಮೂಲಕ ಮಾತ್ರ ಸಾಧ್ಯ. ಅದೊಂದೇ ಸಮಾನತೆ, ಸೌಹಾರ್ದತೆ ಮತ್ತು ಸಾಮುದಾಯಿಕತೆ ಆಧಾರಿತ ಸಮಾಜವನ್ನು ರೂಪಿಸಲಿದೆ.

# ರಾಮ್‌ಪ್ರಸಾದ್ ಬಿಸ್ಮಿಲ್–ಅಶ್ಫಾಕುಲ್ಲಾ ಖಾನ್‌ರ 97ನೇ ಹುತಾತ್ಮ ದಿನಾಚರಣೆ

ಡಿಸೆಂಬರ್ 19 ರಂದು ಎಐಡಿವೈಒ ವತಿಯಿಂದ ಶಹಾಬಾದ್ ನಗರದ ಬಸವೇಶ್ವರ ವೃತ್ತದಲ್ಲಿ ರಾಮ್‌ಪ್ರಸಾದ್ ಬಿಸ್ಮಿಲ್ ಹಾಗೂ ಅಶ್ಫಾಕುಲ್ಲಾ ಖಾನ್ ಅವರ 97ನೇ ಹುತಾತ್ಮ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಮಾತನಾಡಿದ ಎಐಡಿವೈಒ ರಾಜ್ಯ ಉಪಾಧ್ಯಕ್ಷರಾದ ಕಾ॥ ಎಸ್. ಎಚ್. ಜಗನ್ನಾಥ್ ಅವರು "ಅಶ್ಫಾಕುಲ್ಲಾ ಖಾನ್ ಮತ್ತು ರಾಮ್‌ಪ್ರಸಾದ್ ಬಿಸ್ಮಿಲ್ ಅವರು ಜನೈಕ್ಯತೆಯ ಸಂಕೇತ" ಎಂದರು. ಅಶ್ಫಾಕುಲ್ಲಾ ಅವರು ಚಿಕ್ಕ ವಯಸ್ಸಿನಲ್ಲೇ ದೇಶಪ್ರೇಮ ಬೆಳೆಸಿಕೊಂಡು, ಸ್ವಾತಂತ್ರ್ಯಕ್ಕಾಗಿ ಹೋರಾಡುವುದೇ ನನ್ನ ಗುರಿ ಎಂದು ನಿರ್ಧರಿಸಿದ್ದರು. ತಮ್ಮುಸಿರಿನ ಕೊನೆಯ ಘಳಿಗೆಯವರೆಗೂ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. "ಧೀರರು ಸಾವಿಗೆ ಹೆದರುವುದನ್ನು ನಾನೆಂದೂ ಕಂಡಿಲ್ಲ" ಎಂಬುದು ಅಶ್ವಾಕುಲ್ಲಾರ ಮರೆಯಲಾಗದ ಹೇಳಿಕೆಯಾಗಿದೆ. ಆಳ್ವಿಕರು ಜನರನ್ನು ಜಾತಿ, ಭಾಷೆ, ಧರ್ಮದ ಹೆಸರಿನಲ್ಲಿ ಒಡೆಯಲು ಪ್ರಯತ್ನಿಸುತ್ತಾರೆ. ಇಂತಹ ಸಮಯದಲ್ಲಿ ಅಶ್ಫಾಕುಲ್ಲಾ ಖಾನ್ ಮತ್ತು ರಾಮ್‌ಪ್ರಸಾದ್ ಬಿಸ್ಮಿಲ್ಲಾರ ಜೀವನವು ಐಕ್ಯತೆಯ ನಿದರ್ಶನವಾಗಿದೆ. ಯಾವುದೇ ಭೇದಭಾವ ಇಲ್ಲದೆ ನಾವೆಲ್ಲರೂ ಸಮಾನರು ಎಂದು ಹೇಳಿದ ಇಂತಹ ಮಹಾನ್ ಕ್ರಾಂತಿಕಾರಿಗಳ ವಿಚಾರಗಳನ್ನು ಯುವಜನರು ಅರಿಯಬೇಕಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಎಐಡಿವೈಓ ರಾಜ್ಯ ಸಮಿತಿ ವತಿಯಿಂದ ಅಶ್ಫಾಕುಲ್ಲಾ ಖಾನ್ ಮತ್ತು ರಾಮ್‌ಪ್ರಸಾದ್ ಬಿಸ್ಮಿಲ್ಲಾರ ಜೀವನ–ಹೋರಾಟವನ್ನು ಕುರಿತ ರಾಜ್ಯಮಟ್ಟದ ಆನ್‌ಲೈನ್ ಚರ್ಚೆ ಹಮ್ಮಿಕೊಳ್ಳಲಾಗಿತ್ತು. ಎಸ್‌ಯುಸಿಐ(ಸಿ)ನ ರಾಜ್ಯ ಸಮಿತಿ ಸದಸ್ಯರಾದ ಕಾ॥ ಬಿ. ಆರ್. ಅಪರ್ಣಾ ಅವರು ಚರ್ಚೆ ನಡೆಸಿಕೊಟ್ಟರು.



## ಸರ್ಕಾರ-ನ್ಯಾಯಾಂಗಗಳಲ್ಲಿ ಆಧ್ಯಾತ್ಮಿಕತೆಯ ಪ್ರವೇಶ:

# ನೈಜ ಧರ್ಮನಿರಪೇಕ್ಷತೆಯ ಮೇಲಿನ ಪ್ರಹಾರ!

ನಮ್ಮ ಪ್ರಜಾಪ್ರಭುತ್ವದಲ್ಲಿ ಧರ್ಮನಿರಪೇಕ್ಷತೆಯನ್ನು ಹೆಸರಿಗೆ ಮಾತ್ರ ಪ್ರತಿಪಾದಿಸಿದರೂ, ಧರ್ಮವನ್ನು ವೈಯಕ್ತಿಕ ನಂಬಿಕೆಗೆ ಸೀಮಿತಪಡಿಸಿ ಅದು ಪ್ರಭುತ್ವದ ಮತ್ತು ಸಾಮಾಜಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಬಾರದು ಎಂಬುದೊಂದು ಅನುಲ್ಲಂಘನೀಯ ಅಂಶ. ಆದರೂ, ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಮಾಜಿ ಮುಖ್ಯ ನ್ಯಾಯಮೂರ್ತಿ ಡಿ. ವೈ. ಚಂದ್ರಚೂಡ್ ಈ ಮೂಲ ತತ್ವಕ್ಕೆ ಸವಾಲು ಎಸೆದು ನಿರೂಪಣೆಗಳನ್ನು ಹೆಣೆಯುತ್ತಿರುವುದು ಕಂಡುಬರುತ್ತಿದೆ. ಅದು ಅಧ್ಯಾತ್ಮಕ್ಕೆ ಶರಣು ಹೋಗುತ್ತಾ, ಅರಿವು, ತರ್ಕಬದ್ಧ–ಆಡಳಿತ ಮತ್ತು ಸಂವಿಧಾನಾತ್ಮಕವಾಗಿ ಪ್ರತಿಷ್ಠಾಪಿಸಲಾದ ಭಾರತದ ಧರ್ಮನಿರಪೇಕ್ಷತೆ ಇವನ್ನು ಧಿಕ್ಕರಿಸುವಂತಿದೆ.

ಗೌರವಾನ್ವಿತ ನ್ಯಾಯಮೂರ್ತಿ ಚಂದ್ರಚೂಡ್‌ರವರು ರಾಮ ಜನ್ಮಭೂಮಿ – ಬಾಬರಿ ಮಸೀದಿ ವಿವಾದದ ಪರಿಹಾರಕ್ಕೆ ದೇವರಲ್ಲಿ ಪ್ರಾರ್ಥಿಸಿದ್ದೇನೆ ಎಂದು 24 ಅಕ್ಟೋಬರ್ 2024 ರಂದು ಹೇಳಿದರು ಮತ್ತು ನಂಬಿಕೆಯಿದ್ದಲ್ಲಿ ದೇವರು ದಾರಿ ತೋರಿಸುತ್ತಾನೆ ಎಂದು ಒತ್ತಿ ಹೇಳಿದರು. ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ತಾವು ನಿವೃತ್ತಿ ಹೊಂದಿದ ಸಂದರ್ಭದಲ್ಲಿ ಕಳೆದ ನವೆಂಬರ್ 10 ರಂದು ಅವರ ಹುಟ್ಟೂರಾದ ಖೇಡ್ ತಾಲೂಕಿನ ಕನ್ಹರ್ಸ್ ಹಳ್ಳಿಯ ನಿವಾಸಿಗಳು ನೀಡಿದ ಸನ್ಮಾನ ಸಮಾರಂಭದಲ್ಲಿ ಮಾತನಾಡುತ್ತಿದ್ದರು. "ಹಲವು ಬಾರಿ ಪ್ರಕರಣಗಳ ಅಂತಿಮ ತೀರ್ಮಗೆ ಬರಲು ಸಾಧ್ಯವಾಗುವುದಿಲ್ಲ. ಅಂತಹದ್ದೇ ಮೂರು ತಿಂಗಳ ಕಾಲ ನನ್ನ ಮುಂದೆ ಇದ್ದ ಅಯೋಧ್ಯೆಯ ವಿಷಯದಲ್ಲಿ ಸಂಭವಿಸಿದೆ [ರಾಮ ಜನ್ಮಭೂಮಿ – ಬಾಬರಿ ಮಸೀದಿ ವಿವಾದ]. ನಾನು ದೇವರ ಮುಂದೆ ಕುಳಿತು ಹೇಳಿದೆ – ನೀನು (ದೇವರು) ಪರಿಹಾರ ನೀಡುವ ಅಗತ್ಯವಿದೆ," ಎಂದು.

ಸಿಜೆಐ ಆಗಿ ಅವರು ಬಾಬರಿ ಮಸೀದಿ ವಿವಾದದ ಕುರಿತು ದೇವರನ್ನು ಪ್ರಾರ್ಥಿಸಿದ ನಂತರ 'ಹಿಂದೂಗಳ' ಪರವಾಗಿ ನಿರ್ಧರಿಸಿರುವುದಾಗಿ ಒಪ್ಪಿಕೊಂಡರು. ಅವರು ನೀಡಿದ ತೀರ್ಪಿನ ನ್ಯಾಯಪರತೆಯ ಕುರಿತು ಸೂಕ್ಷ್ಮ ಪ್ರಶ್ನೆಗಳು ಎದ್ದಿವೆ. ಪ್ರಧಾನಿ ನರೇಂದ್ರ ಮೋದಿ ಅವರನ್ನು ತಮ್ಮ ನಿವಾಸಕ್ಕೆ ಗಣೇಶ ಪೂಜೆಗೆ ಆಹ್ವಾನಿಸಿರುವುದು, ಅದನ್ನು ಸಾರ್ವಜನಿಕ ಮಾಡಿರುವ ನಡೆ, ನ್ಯಾಯಾಲಯದ ಮತ್ತು ವಕೀಲ ವೃತ್ತಿಯ ಮಾಜಿ ಸಹೋದ್ಯೋಗಿಗಳಿಂದ ಕಟು ಟೀಕೆಗೆ ಒಳಪಟ್ಟಿದೆ.

ಕಳೆದ ಮೇ14 ರಂದು ಪ್ರಧಾನಿ ಮೋದಿಯವರು ತಮ್ಮ ವಾರಣಾಸಿ ಲೋಕಸಭಾ ಕ್ಷೇತ್ರದ ನಾಮಪತ್ರವನ್ನು ಸಲ್ಲಿಸುವ ಮುನ್ನ ಮಾಧ್ಯಮ ಸಂದರ್ಶನದ ಸಂದರ್ಭದಲ್ಲಿ ಅವರಿಗೇಕೆ ಸುಸ್ತಾಗುವುದಿಲ್ಲ ಎಂದು ಕೇಳಲಾಯಿತು. ಅದಕ್ಕೆ ಉತ್ತರವಾಗಿ ಅವರು ಹೇಳಿದರು: "ನನ್ನ ತಾಯಿ ಜೀವಂತವಾಗಿದ್ದಾಗ, ನಾನು ಜೈವಿಕವಾಗಿ ಹುಟ್ಟಿದ್ದೇನೆ ಎಂದು ನಂಬಿದ್ದೆ. ಅವಳು ತೀರಿಹೋದ ನಂತರ, ನನ್ನ ಎಲ್ಲಾ ಅನುಭವಗಳನ್ನೂ ಪರ್ಯಾಲೋಚಿಸಿದ ಮೇಲೆ ನನಗೆ ಮನವರಿಕೆಯಾಗಿದ್ದು ದೇವರು ನನ್ನನ್ನು ಕಳುಹಿಸಿದ್ದಾನೆ. ಈ ಶಕ್ತಿ ನನ್ನ ಜೈವಿಕ ದೇಹದಿಂದ ಸಾಧ್ಯವಾಗದು, ಅದು ದೇವರಿಂದ ನನಗೆ ದಯಪಾಲಿಸಲಾಗಿದೆ. ದೇವರು ನನಗೆ ಸಾಮರ್ಥ್ಯ, ಸ್ಫೂರ್ತಿ ಮತ್ತು ಒಳ್ಳೆಯ ಆಶಯಗಳನ್ನು ಒಂದು ಉದ್ದೇಶಕ್ಕಾಗಿ ಕೊಟ್ಟಿದ್ದಾನೆ ಎಂದು ನಂಬಿದ್ದೇನೆ. ನಾನು ಕೇವಲ ಒಂದು ಸಾಧನ ಮಾತ್ರ. ಅದಕ್ಕೇ, ನಾನು ಏನನ್ನಾದರೂ ಮಾಡಿದಾಗ, ದೇವರು ನನಗೆ ಮಾರ್ಗದರ್ಶನ ನೀಡುತ್ತಿದ್ದಾನೆ ಎಂದು ನಾನು ನಂಬುತ್ತೇನೆ."

ಉತ್ತರ ಪ್ರದೇಶದ ಬಸ್ತಿಯಲ್ಲಿ ಬಿಜೆಪಿ ಅಭ್ಯರ್ಥಿ ಪರವಾಗಿ ಮೇ 22 ರಂದು ನಡೆದ ಚುನಾವಣಾ ಪ್ರಚಾರದಲ್ಲಿ ಮೋದಿಯವರು ಸ್ವತಃ ತಮ್ಮನ್ನು ಹೊಗಳಿಕೊಳ್ಳಲು ಪ್ರಯತ್ನಿಸಿದರು ಮತ್ತು ಮತ್ತೊಮ್ಮೆ ಅವರ ದೈವಿಕ ಸಂಪರ್ಕದ ಕುರಿತು ಹೇಳುತ್ತಾ, "ಬಿಜೆಪಿಗೆ ಮತ ಹಾಕುವವರಿಗೆ ನಾನು ಮಾಡುವ ಒಳ್ಳೆಯ ಕಾರ್ಯಗಳ ಪುಣ್ಯ ದೊರೆಯುತ್ತದೆ" ಎಂದರು. ಪ್ರಧಾನಿ ಮೋದಿಯವರ ಮಾತು, ಅವರು "ಜೈವಿಕವಾಗಿ ಹುಟ್ಟಿಲ್ಲ" ಮತ್ತು ಅವರು "2040ರವರೆಗೆ ಆಳಲು ಪೂರ್ವನಿಯಂತ್ರಿತ ದೈವಿಕ ಇಚ್ಛೆಯ ವ್ಯಕ್ತಿ" ಎಂಬುದು ಒಂದು ಪುರಾಣದ ಮಾತಿನಂತೆ ಕೇಳಿಸುತ್ತದೆ. ನಂಬಿಕೆಯನ್ನು ಬೆರೆಸಿ, ದೇವರ ಹೆಸರಿನಲ್ಲಿ ಮತ ಕೇಳುತ್ತಾ ದೇವರ ಅವತಾರವೇ ಎಂಬಂತೆ ಕೊಚ್ಚಿಕೊಳ್ಳುವುದು ನಿಜವಾಗಿಯೂ ಪ್ರಧಾನಿ ಮೋದಿ ಎಲ್ಲಾ ಮಿತಿಗಳನ್ನು ದಾಟಿದಂತೆಯೇ!

ಮತ್ತು ಈಗ ಸಿಜೆಐ ಕೂಡ ಅವರ ತೀರ್ಪು ದೈವ ಸಂಕಲ್ಪ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಹೇಳಿಕೆಗಳು ಗಂಭೀರ ಪ್ರಶ್ನೆಗಳನ್ನು ಎಬ್ಬಿಸುತ್ತವೆ: ಭಾರತದ ರಾಜಕೀಯ ನಾಯಕರು ಮತ್ತು ನ್ಯಾಯಾಂಗದ ಮುಖ್ಯಸ್ಥರು ತಮ್ಮ ಧಾರ್ಮಿಕತೆಯನ್ನು ಆಡಳಿತದ ಅವಶ್ಯಕತೆಗೆ ಹೊಂದಾಣಿಕೆ ಮಾಡಿಕೊಳ್ಳುವುದು ಸರಿಯೇ? ಇದರಿಂದ ಸಾರ್ವಜನಿಕ ಕರ್ತವ್ಯದಿಂದ ವೈಯಕ್ತಿಕ ನಂಬಿಕೆಯನ್ನು ಪ್ರತ್ಯೇಕಿಸುವ ತೆಳುವಾದ ರೇಖೆ ಕರಗುವುದಿಲ್ಲವೆ?

### ಮೋದಿಯವರ ಅತೀಂದ್ರಿಯ ಜನಾದೇಶ

ಪ್ರಧಾನಿ ಮೋದಿಯವರ ದಿವ್ಯ ವಾಕ್ಚಾತುರ್ಯ ಬರಿಯ ವೈಯಕ್ತಿಕ ನಂಬಿಕೆಯನ್ನು ಮೀರಿ ವಿಸ್ತರಿಸುತ್ತದೆ, ಇದು ಹಿಂದೂ ರಾಷ್ಟ್ರೀಯ ಅಂಧಾಭಿಮಾನವನ್ನು ಗಟ್ಟಿಗೊಳಿಸುವ ಗುರಿಯನ್ನು ಹೊಂದಿರುವ ಆಳವಾದ ನಿರೂಪಣೆಯಾಗಿದೆ. ತನ್ನನ್ನು ತಾನು ದೈವಿಕ ಮೂಲದ ವ್ಯಕ್ತಿ ಎನ್ನುತ್ತಾ ಮೋದಿ ತನ್ನ ನಾಯಕತ್ವವನ್ನು ಬ್ರಹ್ಮಾಂಡದ ಆದೇಶದೊಂದಿಗೆ ಜೋಡಿಸುತ್ತಾರೆ. ಆದ್ದರಿಂದ ಭಾರತವನ್ನು 'ಹಿಂದೂಕರಣ'ಗೊಳಿಸುತ್ತಾ, ಆ ಮೂಲಕ ಒಂದು ಧರ್ಮನಿರಪೇಕ್ಷ, ಪ್ರಜಾತಾಂತ್ರಿಕ ಪ್ರಭುತ್ವವನ್ನು ದೈವ ಪ್ರಭುತ್ವಕ್ಕೆ ಬದಲಾಯಿಸುವ ಪ್ರಯತ್ನದಂತೆ ಇದು ಕಾಣುತ್ತದೆ.

ಪ್ರಜಾತಂತ್ರದಲ್ಲಿ ರಾಜಕೀಯ ನಾಯಕರು ಸರ್ಕಾರದ ವ್ಯವಹಾರ ಮತ್ತು ಆಡಳಿತ ನಿಯಮಗಳಲ್ಲಿ ಯಾವುದೇ ಧರ್ಮದ ಪ್ರಾಬಲ್ಯವನ್ನು ತಿರಸ್ಕರಿಸಿ ಪ್ರಜಾಪ್ರಭುತ್ವದ ತತ್ವಗಳಿಗೆ ಬದ್ಧವಾಗಿರಬೇಕು. ಸಂಸತ್ತಿನ ಸಾರ್ವಭೌಮತ್ವವು ತಮ್ಮ ಶಾಸಕರನ್ನು ಚುನಾಯಿಸುವ ಜನರ ಸಾರ್ವಭೌಮತ್ವದ ಮೇಲೆ ನಿಂತಿದೆ. ಭಾರತವು ಬಹು–ಧರ್ಮೀಯ ಬಹು–ರಾಷ್ಟ್ರೀಯ ದೇಶವಾಗಿದೆ. ಆದ್ದರಿಂದ ಇಲ್ಲಿನ ಸರ್ಕಾರದ ಕಾರ್ಯವೈಖರಿ ನಿರ್ದಿಷ್ಟ ಧರ್ಮದ ಅಧಿಪತ್ಯವನ್ನು ತಡೆಯುತ್ತದೆ. ಆದರೆ ಅಧಿಕಾರವು ಉನ್ನತ, ಅಜ್ಞಾತ, ವಿವರಿಸಲಾಗದ, ಅಲೌಕಿಕ ಬಲದಿಂದ ಬರುತ್ತದೆಯೆಂಬ ಪ್ರಧಾನಿ ಮೋದಿಯ ಉದ್ಗಾರವು ಪ್ರಜಾಪ್ರಭುತ್ವ ವ್ಯವಸ್ಥೆಯ ಪರಿಶೀಲನೆ ಮತ್ತು ಸಮತೋಲನಗಳ ವ್ಯಾಪ್ತಿಯನ್ನು ಮೀರಿದೆ. ಅದು ಸಮಾನತೆ ಮತ್ತು ಹೊಣೆಗಾರಿಕೆಯನ್ನು ಖಾತ್ರಿ ಪಡಿಸುವ ಜನತಾಂತ್ರಿಕ ಸಂಹಿತೆಗಳನ್ನು ನಿರಾಕರಿಸುತ್ತದೆ. ಆದ್ದರಿಂದ, ಯಾವಾಗ ಸರ್ಕಾರದ ಮುಖ್ಯಸ್ಥರು ದೈವಿಕ ಆದೇಶದ ಸುಳಿವು ನೀಡುತ್ತಾರೋ, ಅದು ದೇಶದ ನಾಯಕತ್ವವು ಪ್ರಜಾಪ್ರಭುತ್ವ ವ್ಯವಸ್ಥೆಯ ಕೊಡುಗೆ ಅಲ್ಲ, ಬದಲಿಗೆ ಪ್ರಶ್ನಿಸಲು ಸಾಧ್ಯವಿಲ್ಲ ಎನ್ನುವಂತಹ ದೈವಿಕ ಹಕ್ಕು ಎಂದು ಸಾರುತ್ತದೆ.

### ನ್ಯಾಯಾಂಗಕ್ಕೆ ದೈವಿಕ ನಿರ್ದೇಶನ(!)

ಪ್ರಧಾನಿ ಮೋದಿಯವರ ಪ್ರತಿಪಾದನೆಗಳು ಯಾವ ರೀತಿ ಆತಂಕಕಾರಿಯೋ, ಹಾಗೆಯೇ ಮಾಜಿ ಸಿಜೆಐ ಗೌರವಾನ್ವಿತ ಡಿ. ವೈ. ಚಂದ್ರಚೂಡ್ ಹೇಳಿರುವಂತಹ ಅವರ ಆಧ್ಯಾತ್ಮಿಕತೆ ಸಹ ಭಾರತದ ನ್ಯಾಯಾಂಗಕ್ಕೆ ಸಮಾನವಾಗಿ ಸಂಕೀರ್ಣ ಸಂದಿಗ್ಧತೆ ಒಡ್ಡುತ್ತದೆ. ಸಿಜೆಐ ಅಲಂಕರಿಸಿರುವ ಅತ್ಯುನ್ನತ ಸ್ಥಾನವು ಸಾಂವಿಧಾನಿಕ ಚೌಕಟ್ಟು ಮತ್ತು ಕಾನೂನು ತತ್ವಗಳಿಗೆ ಬದ್ಧವಾಗಿದೆ. ಸಂಸತ್ತಿನ ಚುನಾಯಿತ ಪ್ರತಿನಿಧಿಗಳಿಂದ ಕಾನೂನುಗಳನ್ನು ರಚಿಸಲಾಗುವುದು. ಈ ಪ್ರತಿನಿಧಿಗಳು ದೇವ ಪ್ರವರ್ತಕರಲ್ಲ ಅಥವಾ ಶಾಸನಗಳನ್ನು ರೂಪಿಸುವ ಮೊದಲು ದೇವರೊಂದಿಗೆ ಸಂವಹನ ಮಾಡುವುದಿಲ್ಲ. ಎರಡನೆಯದಾಗಿ, ಎಲ್ಲಾ ಶಾಸಕರು ಹಿಂದೂ ಧರ್ಮವನ್ನು ಪ್ರತಿಪಾದಿಸುವುದಿಲ್ಲ. ಆದ್ದರಿಂದ, ಮುಸ್ಲಿಂ ಸಂಸದರೊಬ್ಬರು ಕಾನೂನುಗಳು ಷರಿಯಾ ಅಥವಾ ಇಸ್ಲಾಮಿಕ್ ಸಂಹಿತೆಗೆ ಅನುಗುಣವಾಗಿ ಇರಬೇಕು ಎಂದರೆ, ಅದು ಸ್ವೀಕಾರಾರ್ಹವೇ? ಅದೇ ರೀತಿ, ಗೌರವಾನ್ವಿತ ನ್ಯಾಯಾಧೀಶರು ಕ್ರಿಶ್ಚಿಯನ್ ಆದರೆ ಮತ್ತು ಅವರ ತೀರ್ಪು ಬೈಬಲ್‌ನ ಸುವಾರ್ತೆಗಳ ಪ್ರಕಾರ ರಚಿಸಲಾಗಿದೆ ಎಂದು ಹೇಳಿದರೆ ಅದು ಸ್ವೀಕಾರಾರ್ಹವೇ?

ಸಿಜೆಐ ಚಂದ್ರಚೂಡ್ ಅವರ ಅಯೋಧ್ಯೆ ತೀರ್ಪು ಆಧ್ಯಾತ್ಮಿಕ ಸಮಾಲೋಚನೆಯ ಸಾಧನೆ ಎಂದಿರುವುದು, ವ್ಯಾಜ್ಯದಲ್ಲಿರುವ ಧಾರ್ಮಿಕ ಸ್ಥಳವನ್ನು ಹಿಂದೂ ಧಾರ್ಮಿಕ ದಾವೇದಾರರಿಗೆ ನಿಗದಿಪಡಿಸಿರುವ ನಿರ್ಧಾರವು ನ್ಯಾಯಾಂಗ ನಿಷ್ಪಕ್ಷಪಾತದ ಮೇಲೆ ಕರಿ ನೆರಳು ಹಾಸಿದೆ.

ದೇವರು 'ಸರ್ವಜ್ಞ' ಮತ್ತು 'ನಿಷ್ಪಕ್ಷಪಾತ'ನಾದರೆ 5 ಸದಸ್ಯರಿರುವ ಸರ್ವೋಚ್ಚ ನ್ಯಾಯಾಲಯದ ಪೀಠ (ನ್ಯಾಯಮೂರ್ತಿ ಚಂದ್ರಚೂಡ್ ಸೇರಿದಂತೆ) ಅಪರಾಧ ಎಂದು ಕರೆದಿರುವ ಮಸೀದಿಯ ಉರುಳಿಸುವಿಕೆಯನ್ನು ಹೇಗೆ ಮಾನ್ಯ ಮಾಡಿತು? ಸರ್ವೋಚ್ಚ ನ್ಯಾಯ ಪೀಠವು 1934ರಲ್ಲಿ ಬಾಬರಿ ಮಸೀದಿಗೆ ಆದ ಹಾನಿ, 1949ರಲ್ಲಿ ಮುಸ್ಲಿಮರನ್ನು ಹೊರಹಾಕಲು ಕಾರಣವಾದ ಮಸೀದಿಯ ಅಪವಿತ್ರಗೊಳಿಸುವಿಕೆ ಮತ್ತು ಅಂತಿಮವಾಗಿ 1992 ಡಿಸೆಂಬರ್ 6 ರಂದು ಮಸೀದಿಯ ನೆಲಸಮ ಮಾಡಿ ಕಾನೂನಿನ ಘೋರ ಉಲ್ಲಂಘನೆಯಾಗಿದ್ದು, ಇವೆಲ್ಲಾ ತಪ್ಪುಗಳನ್ನು ನಿವಾರಿಸಬೇಕು ಎಂದು ಹೇಳಿತು. ಆದರೆ ನಂತರ ದೇವಾಲಯವನ್ನು, ನಾಶವಾದ ಮಸೀದಿಯ ಸ್ಥಳದ ಮೇಲೆ ನಿರ್ಮಿಸಲಾಗುವುದು ಎಂದು ತೀರ್ಪು ನೀಡಿತು. ಏಕೆ? ಏಕೆಂದರೆ, ಪೀಠವು ಅದರ ತೀರ್ಪಿನಲ್ಲಿ ಗಮನಿಸಿದಂತೆ: "ದಾಖಲಿಸಿರುವ ಸಾಕ್ಷ್ಯಾಧಾರಗಳ ಪ್ರಕಾರ, ಹಿಂದೂಗಳ ನಂಬಿಕೆ ಮತ್ತು ಶ್ರದ್ಧೆ, ಇವು ಭಗವಾನ್ ರಾಮನ ಜನ್ಮಭೂಮಿಯಲ್ಲೇ ಮಸೀದಿಯನ್ನು ಕಟ್ಟಿದ್ದು, ಮೂರು ಗುಮ್ಮಟದ ರಚನಾ ಸ್ಥಳದಲ್ಲೇ ರಾಮನ ಜನ್ಮವಾಗಿದ್ದು ಎಂಬ ಹಿಂದೂಗಳ ನಂಬಿಕೆಯನ್ನು ಸ್ಪಷ್ಟವಾಗಿ ಸಾಬೀತುಪಡಿಸುತ್ತದೆ" ಸ್ವಾಭಾವಿಕವಾಗಿ ಈ ತೀರ್ಪು ಬಿಜೆಪಿ ಮತ್ತು ಸಂಘ ಪರಿವಾರದವರನ್ನು ಕುಣಿದು ಕುಪ್ಪಳಿಸುವಂತೆ ಮಾಡಿದೆ. ಐತಿಹಾಸಿಕ ಸ್ಮಾರಕವನ್ನು ನಾಶಪಡಿಸಿದ ಅಪರಾಧಿ ಕೃತ್ಯಕ್ಕೆ ನ್ಯಾಯಾಂಗದ ಸಮರ್ಥನೆ ದೊರೆಯಿತು. ಆದರೆ ಇದು ದೇಶದ ಪ್ರಜಾಸತ್ತಾತ್ಮಕ, ಧರ್ಮನಿರಪೇಕ್ಷ ಮನೋಭಾವದ, ವಿವೇಕಯುತ ಜನರಲ್ಲಿ ಗಂಭೀರ ಕಾಳಜಿ ಮತ್ತು ಸಂಕಟಕ್ಕೆ ಕಾರಣವಾಗಿದೆ ಮತ್ತು ನ್ಯಾಯಾಂಗದ ತಟಸ್ಥತೆ ಮತ್ತು ನಿಷ್ಪಕ್ಷಪಾತದ ಬಗ್ಗೆ ಅನುಮಾನವನ್ನು ಸೃಷ್ಟಿಸಿದೆ. ಪ್ರಜಾಸತ್ತಾತ್ಮಕ ನ್ಯಾಯಶಾಸ್ತ್ರದ ಇತಿಹಾಸದಲ್ಲೇ ಎಲ್ಲಿಯೂ ಧಾರ್ಮಿಕ ನಂಬಿಕೆಯನ್ನು ಕಾನೂನು ಮತ್ತು ಐತಿಹಾಸಿಕ ಪುರಾವೆಗಳ ಮೇಲೆ ಇರಿಸಲಾಗಿಲ್ಲ.

ಸರ್ಕಾರದ ಹಾಗೆಯೇ ನ್ಯಾಯಾಂಗವೂ, ವಿಶೇಷವಾಗಿ ಧಾರ್ಮಿಕ ವೈವಿಧ್ಯತೆ ಇರುವ ಭಾರತದಂತಹ ದೇಶದಲ್ಲಿ ನ್ಯಾಯವು ನ್ಯಾಯೋಚಿತವಾಗಿಯೂ, ಪಕ್ಷಪಾತರಹಿತವೂ ಆಗಿರುವುದನ್ನು ಖಚಿತಪಡಿಸಲು ಅದು ಧಾರ್ಮಿಕ ಪ್ರಭಾವಗಳಿಂದ ಸ್ವತಂತ್ರವಾಗಿರಬೇಕು. ತಮ್ಮ ಕಾನೂನು ತೀರ್ಪುಗಳು ದೈವಿಕ ಒಳನೋಟಗಳ ಪ್ರಭಾವಕ್ಕೆ ಒಳಪಡಬಹುದು ಎನ್ನುವ ಮುಖ್ಯನ್ಯಾಯಾಧೀಶರ ಹೇಳಿಕೆ, ನಂಬಿಕೆಯ ಪ್ರಭಾವಕ್ಕೆ ಒಳಗಾಗಿ ಕಾನೂನನ್ನು ವ್ಯಾಖ್ಯಾನಿಸಬಹುದು ಎಂಬ ಅಪಾಯದೆಡೆಗೆ ಬೊಟ್ಟು ಮಾಡುತ್ತದೆ. ಇದು ನ್ಯಾಯಾಂಗದ ಕಾರ್ಯನಿರ್ವಹಣೆಯು ಧಾರ್ಮಿಕ ನಂಬಿಕೆಯಿಂದ ಪ್ರತ್ಯೇಕವಾಗಿರಬೇಕೆಂಬ ನ್ಯಾಯಾಂಗದ ವಸ್ತುನಿಷ್ಠತೆಯ ತಿರುಳಿಗೆ ಪೆಟ್ಟು ಕೊಡುತ್ತದೆ. ಅಯೋಧ್ಯೆಯ ತೀರ್ಪನ್ನು ಗೌರವಾನ್ವಿತ ನ್ಯಾಯಮೂರ್ತಿ ಚಂದ್ರಚೂಡ್‌ರವರು ಬರೆದದ್ದು ಎಂದು ಅನೇಕರು ಅಭಿಪ್ರಾಯ ಪಟ್ಟಿದ್ದು, ಈಗ ಇದು ದೈವ ನಿರ್ಣಯ ಎಂಬ ಅವರ ಹೇಳಿಕೆ ಈ 'ಪ್ರಶ್ನಾರ್ಹ' ತೀರ್ಪಿಗೆ ಪುರಾವೆಯಾಗಿದೆ.

### ಪ್ರಜಾಸತ್ತಾತ್ಮಕ ಚೌಕಟ್ಟಿನಲ್ಲಿ ನ್ಯಾಯಾಂಗದ ಪಾತ್ರ

ಒಂದು ಸಂಸ್ಥೆಯಾಗಿ, ನ್ಯಾಯಾಂಗವು ಪ್ರಜಾಪ್ರಭುತ್ವ ಸಮಾಜದಲ್ಲಿ ವಿಚಾರಶೀಲತೆ ಮತ್ತು ವಸ್ತುನಿಷ್ಠತೆಯ ಸ್ತಂಭವನ್ನು ಪ್ರತಿನಿಧಿಸುತ್ತದೆ. ನ್ಯಾಯಾಧೀಶರು ತಮ್ಮ ವೈಯಕ್ತಿಕ ನಂಬಿಕೆಗಳು ಮತ್ತು ನಿಗೂಢತೆಯನ್ನು ತಮ್ಮ ತೀರ್ಪುಗಳ ಮೇಲೆ ಪ್ರಭಾವ ಬೀರಲು ಬಿಟ್ಟಾಗ, ವಸ್ತು ನಿಷ್ಠತೆ ರಾಜಿಗೊಳಗಾಗುತ್ತದೆ ಮತ್ತು ಅದರಿಂದ ಸಾರ್ವಜನಿಕ ನಂಬಿಕೆಯು ನಾಶಗೊಳ್ಳುತ್ತದೆ. ಅಯೋಧ್ಯೆ ತೀರ್ಪಿನ ಮೊದಲು ಚಂದ್ರಚೂಡ್ ಅವರು ಮಾಡಿದ್ದಾರೆ ಎನ್ನಲಾಗುವ ಆಧ್ಯಾತ್ಮಿಕ ಸಮಾಲೋಚನೆ ಇದಕ್ಕೆ ಸಾಕ್ಷಿ. ದೇವರ ಕೃಪೆಯನ್ನು ಕೋರುವ ಮೂಲಕ, ಸಾಂಕೇತಿಕವಾಗಿಯಾದರೂ, ಅವರು ಕೇವಲ ಕಾನೂನು ತತ್ವಗಳ ಮತ್ತು ಧರ್ಮಾತೀತ ನ್ಯಾಯದ ಆಧಾರದ ಮೇಲಿರಬೇಕಾದ ನಿರ್ಧಾರದ ಒಳಗೆ ಧಾರ್ಮಿಕತೆ ಅಥವಾ ಅತೀಂದ್ರಿಯತೆ ನುಗ್ಗುವ ಅಪಾಯಕ್ಕೆ ಎಡೆ ಮಾಡಿಕೊಟ್ಟಿದ್ದಾರೆ. ಅತೀಂದ್ರಿಯ ನಂಬಿಕೆಗಳನ್ನು ನ್ಯಾಯಾಂಗದ ತಾರ್ಕಿಕತೆಯೊಳಗೆ ಸೇರಿಸಿದರೆ ಅದು ಕೆಲವೊಂದು ಧಾರ್ಮಿಕತೆಯ ಪರವಾಗಿ ಬಿಡುತ್ತದೆ. ಅಂದರೆ, ಇದು ಎಲ್ಲಾ ಧರ್ಮಗಳ ನಾಗರಿಕರಿಗೆ ಸಮಾನವಾಗಿ ಇರಬೇಕಾದ ಧರ್ಮನಿರಪೇಕ್ಷ ರಾಜ್ಯಕ್ಕೆ ಮೂಲಭೂತವಾಗಿ ಹೊಂದಿಕೆಯಾಗುವುದಿಲ್ಲ .

### ಕುರುಡು ಆಧ್ಯಾತ್ಮಿಕತೆಯ ಅಡಿಯಲ್ಲಿ ಕಾರ್ಯಾಂಗದ ಕಾರ್ಯನಿರ್ವಹಣೆ

ಅಂತೆಯೇ, ನಿಗೂಢವಾದವನ್ನು ಎತ್ತಿಹಿಡಿಯುವವರು ದೇಶದ ಪ್ರಧಾನ ಮಂತ್ರಿಯೇ ಆಗಿರುವುದರಿಂದ ಅದರಿಂದ ಎರಡು ಅಪಾಯಗಳಿವೆ: 1. ವಿಚಾರ ಹೀನತೆಗೆ ಪ್ರೋತ್ಸಾಹ 2. ಧಾರ್ಮಿಕ ಕುರುಡುತನ ಮತ್ತು ಧರ್ಮಾಂಧತೆಗಳಿಗೆ ಪುಷ್ಟಿ. ಇದು ವಸ್ತು ನಿಷ್ಠತೆಯಿಂದ ಪರಿಶೀಲಿಸಲಾದ ಸತ್ಯವನ್ನು ಆಧರಿಸಿದ ವೈಜ್ಞಾನಿಕ ಚಿಂತನಾ ಪ್ರಕ್ರಿಯೆಗೆ ವಿರುದ್ಧವಾಗಿದೆ. ಹಾಗೂ ಇದು ಸರ್ಕಾರದ ವೈಫಲ್ಯಗಳು ಮತ್ತು ಆಳುವ ಬಂಡವಾಳಶಾಹಿ ಹುಟ್ಟು ಹಾಕುವ ಎಲ್ಲಾ ಕೆಡುಕುಗಳು ಮತ್ತು ವಿಪತ್ತುಗಳಿಂದ ಜನರನ್ನು ದಿಕ್ಕುತಪ್ಪಿಗೊಳಿಸುತ್ತದೆ.

ಭಾರತವನ್ನು ಕಾರ್ಮಿಕ ವರ್ಗ ಮತ್ತು ತಳ ಸಮುದಾಯದವರ ನೈಜ ಮತ್ತು ತುರ್ತು ಸಮಸ್ಯೆಗಳಾದ ಆರ್ಥಿಕ ಅಸಮಾನತೆ, ಕೃಷಿ ಬಿಕ್ಕಟ್ಟು ಮತ್ತು ಉಲ್ಬಣಿಸುತ್ತಿರುವ ನಿರುದ್ಯೋಗ ಇತ್ಯಾದಿಗಳು ಕಾಡುತ್ತಿವೆ. ಪ್ರಧಾನಿ ಮೋದಿಯವರ ಅಧ್ಯಾತ್ಮ ಜನರಿಗೆ ಯಾವುದೇ ಪರಿಹಾರ ನೀಡಿಲ್ಲ, ಬದಲಿಗೆ ಪ್ರಸ್ತುತ ಸಂಕಷ್ಟಗಳು ಪೂರ್ವ ನಿರ್ಧಾರಿತವಾಗಿದ್ದು, ಅದು 'ದೈವಿಕ ಯೋಜನೆ'ಯ ಭಾಗವಾಗಿದೆ ಎಂಬ ಭ್ರಮೆ ಹುಟ್ಟಿಸುತ್ತದೆ. ತನ್ನನ್ನು ತಾನು ದೈವಿಕ ಎಂದು ಬಿಂಬಿಸುವ ಪ್ರಧಾನಿ ಮೋದಿ, ಆಳುವ ಬಂಡವಾಳಶಾಹಿಯ ವಿಧೇಯ ರಾಜಕೀಯ ವ್ಯವಸ್ಥಾಪಕರಾಗಿ ಜನಸಾಮಾನ್ಯರನ್ನು ಅಸಮಾನತೆ, ಪ್ರಜಾತಾಂತ್ರಿಕ ಸಂಸ್ಥೆಗಳ ನಿಷ್ಕ್ರಿಯತೆ, ದಾರಿದ್ರ್ಯ ಇತ್ಯಾದಿಗಳ ಮೂಲಕಾರಣಗಳನ್ನು ಹುಡುಕದಂತೆ ಮಾಡಲು ಅತೀಂದ್ರಿಯತೆಯನ್ನು ಬಳಸಿದ್ದಾರೆ. ಅಂತೆಯೇ, ಈ ದುರದೃಷ್ಟಕರ

9ನೇ ಪುಟಕ್ಕೆ...

# ನಳಂದಾ ಮಹಾವಿಹಾರದ ಧ್ವಂಸ ವಿವಾದ

ಸತತವಾಗಿ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ತನ್ನ ಕೋಮುವಾದಿ ನೆಲೆಯ ಒಡೆದು ಆಳುವ ರಾಜಕೀಯದಾಟವನ್ನು ಮುಂದುವರೆಸಿದೆ. ಕೆಲವು ತಥಾಕಥಿತ ಕಲಸುಮೇಲೋಗರದ 'ಆಧಾರ'ಗಳನ್ನು ಪೋಣಿಸಿ ತನ್ನ ವಾದಸರಣಿಗೆ ಪೂರಕವಾದ ಇತಿಹಾಸವನ್ನು ಬರೆಯುತ್ತಿದೆ. ಇತ್ತೀಚೆಗೆ, ಪ್ರಾಚೀನ ನಳಂದಾ ಮಹಾವಿಹಾರದ ಅವಶೇಷವಿರುವ ಸ್ಥಳದ ಸಮೀಪದಲ್ಲೇ ನಳಂದಾ ವಿಶ್ವವಿದ್ಯಾಲಯದ ನೂತನ ಕಟ್ಟಡವನ್ನು ಉದ್ಘಾಟಿಸುವ ಸಂದರ್ಭದಲ್ಲಿ ವಿದೇಶಿ ಆಕ್ರಮಣಕೋರರು 12ನೇ ಶತಮಾನದಲ್ಲಿ ದಾಳಿ ನಡೆಸಿ ಆ ಮಹಾವಿಹಾರವನ್ನು ಸುಟ್ಟು ಹಾಕಿದರು ಎಂದು ಪ್ರಧಾನಿ ಮೋದಿ ಹೇಳಿದರು. ವಸಾಹತುಶಾಹಿ ಕಾಲದ ಇತಿಹಾಸಕಾರರು ಹೊಸೆದಿದ್ದ 'ಮೊಹಮ್ಮದ್ ಘೋರಿಯ ಭಟನಾಗಿದ್ದ ಭಕ್ತಿಯಾರ್ ಖಿಲ್ಜಿ ಎಂಬಾತನೇ ಈ ವಿಶ್ವವಿಖ್ಯಾತ ಪ್ರಾಚೀನ ನಳಂದಾ ಮಹಾವಿಹಾರವನ್ನು ಧ್ವಂಸ ಮಾಡಿದ' ಎಂಬ ಕಥೆಯನ್ನೇ ಪ್ರಧಾನಿ ಪುನ: ಅರುಹಿದರು. ಇದು ಸತ್ಯವೇ?

### ನಳಂದಾ: ಜ್ಞಾನ ಮತ್ತು ಕಲಿಕೆಯ ಪೀಠ

ಮೋದಿಯವರ ಹೇಳಿಕೆಯ ಅಸಲಿಯತ್ತನ್ನು ಪರಿಶೀಲಿಸುವ ಮುನ್ನ 'ನಳಂದಾ ವಿಶ್ವವಿದ್ಯಾಲಯ' ಕುರಿತ ವಾಸ್ತವಾಂಶದ ಆಧಾರದಲ್ಲಿ ರಚಿಸಲಾದ ಇತಿಹಾಸದ ಮೇಲೆ ಒಮ್ಮೆ ಕಣ್ಣಾಡಿಸೋಣ. ಪುರಾತತ್ವ ಇಲಾಖೆಯ ಉತ್ಖನನ, ಕಾರ್ಬನ್ ಡೇಟಿಂಗ್‌ನಂತಹ ವೈಜ್ಞಾನಿಕ ಪರಿಶೀಲನೆಗಳ ಮೂಲಕ ಕಾಲಾವಧಿಯನ್ನು ಲೆಕ್ಕ ಹಾಕಿದಾಗ ಗುಪ್ತರ ಸಾಮ್ರಾಜ್ಯದ ದೊರೆ ಒಂದನೇ ಕುಮಾರಗುಪ್ತ (ಶಕ್ರಾದಿತ್ಯ) ಎಂಬಾತನು ಕ್ರಿ.ಶ. 427ರಲ್ಲಿ ನಳಂದಾ ವಿಶ್ವವಿದ್ಯಾಲಯವನ್ನು ಆರಂಭಿಸಿದನು ಎಂದು ತಿಳಿದು ಬರುತ್ತದೆ. ಇದನ್ನು ಆ ಕಾಲದಲ್ಲಿದ್ದ ಹಲವು ಭಾರತೀಯ ಹಾಗೂ ಜಪಾನಿನ ಪ್ರಾಜ್ಞರು, ಬುದ್ಧನ ಅನುಯಾಯಿಗಳು ಹಾಗೂ ಇತರ ಧರ್ಮಾನುಯಾಯಿಗಳು ದಾಖಲಿಸಿದ್ದಾರೆ. ಹಲವು ಇತಿಹಾಸಕಾರರು ಸಹ 5ರಿಂದ 6ನೇ ಶತಮಾನದ ಗುಪ್ತರ ಕಾಲದಲ್ಲಿ ಈ ವಿಶ್ವವಿದ್ಯಾಲಯ ಪ್ರವರ್ಧಮಾನಕ್ಕೆ ಬಂದಿತ್ತು ಎಂದು ಗುರುತಿಸಿದ್ದಾರೆ.

ಗುಪ್ತರ ವಂಶದ ಅವನತಿಯ ನಂತರ 7ನೇ ಶತಮಾನದಲ್ಲಿ ಆ ನಳಂದಾ ಮಹಾವಿಹಾರದ ಪೋಷಕನಾಗಿ ಹರ್ಷ(ಕೆಲ ಬೌದ್ಧ ದಾಖಲೆಗಳಲ್ಲಿ ಆತನನ್ನು 'ಸಿಲಾದಿತ್ಯ' ಎಂದೂ ಕರೆಯಲಾಗಿದೆ) ಎಂಬ ದೊರೆ ಇದ್ದನೆಂಬ ಪ್ರತೀತಿ ಇದೆ. 8ನೇ ಶತಮಾನದಿಂದ 12ನೇ ಶತಮಾನದವರೆಗೆ ಪಾಳರು (ಬೌದ್ಧರ ಒಂದು ವಂಶ) ಭಾರತದ ಪೂರ್ವಭಾಗವನ್ನು ಆಳತೊಡಗಿದರು. ಪಾಳರ ಅವಸಾನದ ನಂತರ ನಳಂದಾದ ಸನ್ಯಾಸಿಗಳು ಬೋಧಗಯಾವನ್ನು ಆಳುತ್ತಿದ್ದ ಪೀಠಿಪತೀಸ್ ಎಂಬ ಪಾಳೆಯಗಾರರ ವಂಶದ ಆಸರೆಯನ್ನು ಪಡೆದುಕೊಂಡರು. 13ನೇ ಶತಮಾನದ ಆರಂಭದ ದಶಕಗಳಲ್ಲಿ ನಳಂದಾ ಮಹಾವಿಹಾರವು ಅಗ್ನಿಗೆ ಆಹುತಿಯಾಯಿತು. ಅದಾದ ನಂತರವೂ ವೈಜ್ಞಾನಿಕ ಆಧಾರದಲ್ಲಿ ಹೇಳುವುದಾದರೆ ನಳಂದಾ ವಿಶ್ವವಿದ್ಯಾಲಯವು ಸುಮಾರು ಒಂದು ಶತಮಾನದವರೆಗೆ ಶಿಕ್ಷಣ ನೀಡುವುದನ್ನು ನಡೆಸಿತ್ತು. ನಂತರದ ವರ್ಷಗಳಲ್ಲಿ ಸಾಮಾಜಿಕ, ರಾಜಕೀಯ ರಂಗಗಳಲ್ಲಿ ಆದ ಬದಲಾವಣೆಗಳಿಂದ ಹಾಗೂ ವಿಶ್ವವಿದ್ಯಾಲಯಕ್ಕೆ ಪೋಷಕರು, ಪ್ರಾಯೋಜಕರ ಕೊರತೆಯಿಂದಾಗಿ ಸಾವಿರ ವರ್ಷಗಳ ಬಳಿಕ ಅಂದರೆ 13, 14ನೇ ಶತಮಾನದಲ್ಲಿ ಅದು ಅವಸಾನದ ಅಂಚಿಗೆ ಸರಿಯಿತು.

ಸುಮಾರು 11ಕ್ಕೂ ಅಧಿಕ ವಿದೇಶಿ ಯಾತ್ರಿಗಳು, ಅದರಲ್ಲೂ ಪ್ರಮುಖವಾಗಿ ಹ್ಯುಯೆನ್ ತ್ಸಾಂಗ್ ಮತ್ತು ಯಿಜಿಂಗ್ (ಐ–ತ್ಸಿಂಗ್) ಎಂಬುವವರು ನಳಂದಾ ಮಹಾವಿಹಾರಕ್ಕೆ ಭೇಟಿ ನೀಡಿದ್ದರು. ಹ್ಯುಯೆನ್ ತ್ಸಾಂಗ್ ಕ್ರಿ.ಶ. 637 ಹಾಗೂ ಕ್ರಿ.ಶ. 642ರಲ್ಲಿ ಭೇಟಿ ನೀಡಿದ್ದ. ಯಿಜಿಂಗ್ ಎಂಬ ಪ್ರವಾಸಿ ಕ್ರಿ.ಶ. 673ಯಲ್ಲಿ ನಳಂದಾಕ್ಕೆ ಬಂದಿದ್ದನು. ನಂತರ 14 ವರ್ಷಗಳ ಕಾಲ ಇಲ್ಲಿಯೇ ಕಳೆದನು. ಯಿಜಿಂಗ್ ದಾಖಲಿಸಿರುವ ಪ್ರಕಾರ ಹರ್ಷ ದೊರೆಯಾಗಿದ್ದ ಅವಧಿಯಲ್ಲಿ (ಕ್ರಿ. ಶ. 606–647) 1,500 ಬೋಧಕ ಸಿಬ್ಬಂದಿ ಹಾಗೂ 10 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ನಳಂದಾದಲ್ಲಿ ಶಿಕ್ಷಣ ಪಡೆಯುತ್ತಿದ್ದರಂತೆ. ಪ್ರಾಚೀನ ಭಾರತದಲ್ಲಿ ನಳಂದಾ ಹೆಮ್ಮೆಯ ಇತಿಹಾಸವನ್ನು ಹೊಂದಿತ್ತು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

### ಪ್ರಾಚೀನ ನಳಂದಾ ಮಹಾವಿಹಾರದ ಅವಶೇಷದ ಅನ್ವೇಷಣೆ

ನಳಂದಾ ವಿಶ್ವವಿದ್ಯಾಲಯ(ಮಹಾವಿಹಾರ)ವು ಸುಮಾರು 700 ವರ್ಷಗಳ ಹಿಂದೆ ಅಸ್ತಿತ್ವದಲ್ಲಿತ್ತು. ಅದು ಅವಸಾನವಾದ ನಂತರ ಕೆಲವು ಸ್ಥಳೀಯ ಜನರು ಬೌದ್ಧ ಮತ್ತು ಹಿಂದೂ ಧರ್ಮೀಯರ ಕುರುಹುಗಳು ಅಲ್ಲಿರುವುದರ ಬಗ್ಗೆ ಬ್ರಿಟಿಷ್ ಅಧಿಕಾರಿಗಳ ಗಮನ ಸೆಳೆಯುವವರೆಗೂ ಅದು ಮರೆತೇ ಹೋಗಿತ್ತು. ನಂತರ ಫ್ರಾನ್ಸಿಸ್ ಬುಖನನ್–ಹ್ಯಾಮಿಲ್ಟನ್ (1811–1812) ಎಂಬಾತ, ಮೇಜರ್ ಮರ್ಖಮ್ ಕಿಟ್ಟೊ (1847), ಅಲೆಕ್ಸಾಂಡರ್ ಕನ್ನಿಂಗ್‌ಹ್ಯಾಮ್ ಆ ಪ್ರದೇಶದ ಸಮೀಕ್ಷೆಗಳನ್ನು ನಡೆಸಿದರು. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ(ಎಎಸ್‌ಐ) 1861–62ರಲ್ಲಿ ತಮ್ಮ ಸರ್ವೆ ಮಾಡಿದರೂ ಸಹ, ಅತ್ಯಂತ ವ್ಯವಸ್ಥಿತವಾದ ಉತ್ಖನನ ಕಾರ್ಯವನ್ನು 1915ರಲ್ಲಿ ಆರಂಭಿಸಿ 1937ರಲ್ಲಿ ಮುಕ್ತಾಯಗೊಳಿಸಿತು. ಅಂದರೆ, ಈ ನೆಲವನ್ನು ಸೂಕ್ತವಾಗಿ ಉತ್ಖನನ ಮಾಡಿ ಪರಿಶೀಲಿಸಿ ಖಚಿತ ಇತಿಹಾಸದೊಂದಿಗೆ ಹೋಲಿಕೆ ಮಾಡಿ ಹಲವು ಶತಮಾನಗಳ ಹಿಂದೆ ನಳಂದಾ ವಿಶ್ವವಿದ್ಯಾಲಯವು ಅಸ್ತಿತ್ವದಲ್ಲಿತ್ತು ಎಂಬುದನ್ನು ಸಾದರಪಡಿಸಲಾಯಿತು ಎಂಬುದನ್ನು ಗುರುತಿಸಬಹುದು.

### ಹೊಸ ನಳಂದಾ ಹಳೆಯದರ ಪ್ರತಿರೂಪವಲ್ಲ

ಹೊಸದಾಗಿ ನಿರ್ಮಿಸಲಾಗಿರುವ ನಳಂದಾ ವಿಶ್ವವಿದ್ಯಾಲಯವು ಹಳೆಯ ಮಹಾವಿಹಾರದ ಪ್ರತಿರೂಪವೇ ಸರಿ ಎಂದು ಬಿಜೆಪಿ ಸರ್ಕಾರ ಹೇಳಿಕೊಳ್ಳುತ್ತಿರುವುದು ಏಮಾರಿಸುವ ತಂತ್ರವಾಗಿದೆ. ಯಾವ ಕಾರಣಕ್ಕೂ ಇದು ಹಳೆಯ ನಳಂದಾ ಮಹಾವಿಹಾರದಂತೆ ಇಲ್ಲವೇ ಇಲ್ಲ. ಎರಡೂ ವಿಶ್ವವಿದ್ಯಾಲಯಗಳ ಅಸ್ತಿತ್ವದ ಕಾಲವೇ ಬೇರೆಬೇರೆಯಾಗಿದೆ. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಗಳು ಸಂಪೂರ್ಣ ಬದಲಾಗಿವೆ. ಕಲಿಕಾ ವಿಧಾನ, ಕೋರ್ಸುಗಳು ಹಾಗೂ ಪಠ್ಯಕ್ರಮ ಎಲ್ಲವೂ ಭಿನ್ನವಾಗಿವೆ. ಹಾಗಿದ್ದರೂ, ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರ ಹಿಂಬಾಲಕರು ಹೊಸ ಕಟ್ಟಡಕ್ಕೆ ನಳಂದಾ ವಿಶ್ವವಿದ್ಯಾಲಯ ಎಂದೇಕೆ ಹೆಸರಿಟ್ಟಿದ್ದಾರೆ ಎಂಬ ಪ್ರಶ್ನೆ ಎದುರಾಗಬಹುದು. ಇದರ ಹಿಂದಿನ ಕಪಟ ಉದ್ದೇಶ ಇಷ್ಟೇ. ಜನಸಾಮಾನ್ಯರಿಗೆ ಪ್ರಾಚೀನ ಪರಂಪರೆಯ ಬಗ್ಗೆ ಗೌರವವಿರುತ್ತದೆ. ನಳಂದಾ ಅಷ್ಟೇ ಅಲ್ಲದೇ ತಕ್ಷಶಿಲಾ, ವಿಕ್ರಮಶೀಲಾಗಳ ಬಗ್ಗೆಯೂ ಜನರಿಗೆ ಆದರವಿದೆ. ಅದನ್ನು 'ತಮ್ಮ ಲಾಭಕ್ಕೆ' ಬಳಸಿಕೊಳ್ಳಲು ಅದೇ ಹೆಸರನ್ನು ಇಡಲಾಗಿದೆ.

ಹಾಗೆ ನೋಡಿದರೆ ನಳಂದಾ ವಿಶ್ವವಿದ್ಯಾಲಯವನ್ನು ಮರು ನಿರ್ಮಾಣ ಮಾಡುವ ಬಗ್ಗೆ ಮೊದಲು ಪ್ರಸ್ತಾಪ ಮಾಡಿದ್ದು ಮಾಜಿ ರಾಷ್ಟ್ರಪತಿ, ದಿವಂಗತ ಡಾ.ಎ ಪಿ ಜೆ ಅಬ್ದುಲ್ ಕಲಾಂ. ನಳಂದಾ ವಿಶ್ವವಿದ್ಯಾಲಯ ಕಾಯ್ದೆಯನ್ನು 2014ರಲ್ಲಿ ಸಂಸತ್ತು ಅಂಗೀಕರಿಸಿತು. 2014ರಲ್ಲಿಯೇ ನಳಂದಾ ವಿ.ವಿಯು ತಾತ್ಕಾಲಿಕ ಸ್ಥಳದಲ್ಲಿ ಕಾರ್ಯಾರಂಭ ಮಾಡಿತು. ಸುಮಾರು 10 ವರ್ಷಗಳ ಬಳಿಕ ಇದೀಗ ಹೊಸ ಕಟ್ಟಡವು ಎದ್ದಿದೆ.

### ನಳಂದಾ ಮಹಾವಿಹಾರದ ಅವಸಾನ

ಬೌದ್ಧ ಧರ್ಮದ ಅವಸಾನದೊಂದಿಗೆ ನಳಂದಾ ಮಹಾವಿಹಾರದ ಅಂತ್ಯದ ಕಥನವೂ ಶುರುವಾಗುತ್ತದೆ. ಕ್ರಿ.ಶ. 7ನೇ ಶತಮಾನದಿಂದಲೇ ಬೌದ್ಧ ಧರ್ಮವು ಅವಸಾನದ ಅಂಚಿಗೆ ಸಾಗುವುದನ್ನು ಚೀನಾ ಪ್ರವಾಸಿ ಹ್ಯುಯೆನ್ ತ್ಸಾಂಗ್ ಗುರುತಿಸುತ್ತಾನೆ. ಮುಂದೆ ಇದು ಹಲವು ಶತಮಾನಗಳವರೆಗೆ ಮುಂದುವರೆಯುತ್ತದೆ. ಬ್ರಾಹ್ಮಣಶಾಹಿ ಮತ್ತು ಬೌದ್ಧಧರ್ಮದ ಮಧ್ಯೆ ಮೂರು ವಿಚಾರಗಳಲ್ಲಿ ಸ್ಪರ್ಧೆ ಏರ್ಪಡುತ್ತದೆ. ಅವು, ಹಣಕಾಸು, ಅನುಯಾಯಿಗಳು ಹಾಗೂ ಸಿದ್ಧಾಂತಗಳು! ಎರಡನೆಯದಾಗಿ, ಬೌದ್ಧ ಧರ್ಮವು ಆರಂಭ ಕಾಲದಲ್ಲಿ ಜನಸಾಮಾನ್ಯರ ಮೇಲೆಯೇ ಅವಲಂಬಿತವಾಗಿ ಬೆಳೆಯುತ್ತಿತ್ತು. ಧಾರ್ಮಿಕ ಕೆಲಸಕಾರ್ಯಗಳಿಗೆ ಪ್ರತಿಯಾಗಿ ಕಾಣಿಕೆ ರೂಪದಲ್ಲಿ ಆಹಾರ, ಬಟ್ಟೆ ಅಥವಾ ಹಣವನ್ನು ಭಿಕ್ಷುಗಳು ಪಡೆಯುತ್ತಿದ್ದರು. ಆದರೆ, ನಂತರದ ಕಾಲಘಟ್ಟದಲ್ಲಿ ಬೌದ್ಧ ಧರ್ಮಕ್ಕೆ ರಾಜಾಶ್ರಯವು ದೊರಕಿದ್ದರಿಂದ ಜನರ ಮೇಲಿನ ಅದರ ಅವಲಂಬನೆ ಕಡಿಮೆಯಾಗಿತ್ತು. ಮೂರನೆಯದಾಗಿ, 7ರಿಂದ 10ನೇ ಶತಮಾನದ ಕಾಲದಲ್ಲಿ ತಲೆ ಎತ್ತಿದ ಆದಿ ಶಂಕರಾಚಾರ್ಯರ ನೇತೃತ್ವದ ಕಠೋರ ಬ್ರಾಹ್ಮಣವಾದಿ ಆಚರಣೆಗಳು, ಮುಂದೆ ಬಂದ ಭಕ್ತಿ ಚಳುವಳಿ ದಕ್ಷಿಣ ಭಾರತದಲ್ಲಿ ಪ್ರವರ್ಧಮಾನಕ್ಕೆ ಬರುವುದರೊಂದಿಗೆ ಪ್ರಚಂಡ ಬದಲಾವಣೆಗಳು ಆದವು. ನಾಲ್ಕನೇಯದಾಗಿ, ರಾಜಮನೆತನಗಳು ಕ್ರಮೇಣ ಬ್ರಾಹ್ಮಣಶಾಹಿಯನ್ನು ಅನುಸರಿಸಲು ಶುರು ಮಾಡಿದ್ದರಿಂದ ಬೌದ್ಧ ಧರ್ಮಕ್ಕೆ ಭಾರಿ ಪೆಟ್ಟು ಬಂದೆರಗಿತು. ಬೌದ್ಧ ವಿಹಾರಗಳಿಗೆ ಹಣಕಾಸಿನ ನೆರವು ಕ್ರಮೇಣ ನಿಂತು ಹೋಯಿತು. ಬೌದ್ಧ ಧರ್ಮಕ್ಕೆ ರಾಜಾಶ್ರಯ ನೀಡಿದ ಕೊನೆಯ ರಾಜಮನೆತನವೆಂದರೆ ಬಂಗಾಳದ ಪಾಳರು. ಇವರು 12ನೇ ಶತಮಾನದ ಸೇನ್ ರಾಜವಂಶಕ್ಕೆ ಸೇರಿದ್ದವರು. ಅದೇ ಸಂದರ್ಭದಲ್ಲಿ ಬ್ರಾಹ್ಮಣಶಾಹಿಯ ರಾಜರು ಬೌದ್ಧ ಸನ್ಯಾಸಿಗಳ ಮೇಲೆ ದಬ್ಬಾಳಿಕೆಯನ್ನು ನಡೆಸಿದ್ದರಿಂದ ಭೀತಿಗೊಂಡ ಅವರು, ದಕ್ಷಿಣ ಭಾರತಕ್ಕೆ ವಲಸೆ ಬರಲಾರಂಭಿಸಿದರು. 12ನೇ ಶತಮಾನದಲ್ಲಿ ತುರ್ಕಿಯ ದಾಳಿಕೋರರು ದೇಶದ ಮೇಲೆ ದಂಡೆತ್ತಿ ಬಂದಾಗ ಪೂರ್ವ ಭಾರತ, ದಕ್ಷಿಣ ಭಾರತ ಹಾಗೂ ಪಶ್ಚಿಮ ಹಿಮಾಲಯದ ಕೆಲ ಪ್ರದೇಶಗಳನ್ನು ಹೊರತುಪಡಿಸಿ ಬೌದ್ಧ ಧರ್ಮವು ಉಳಿದ ಕಡೆ ನಾಮಾವಶೇಷವಾಯಿತು.

### ಇತಿಹಾಸದ ತಿರುಚುವಿಕೆಯ ಹಿಂದಿರುವ ದುರುದ್ದೇಶ

ಇತಿಹಾಸವನ್ನು ತಮ್ಮ ಹಿಂದುತ್ವದ ಅಜೆಂಡಾದೊಂದಿಗೆ ಸಮೀಕರಿಸಿಕೊಂಡು ತಿರುಚಿದ ಘಟನೆಗಳನ್ನು ಆರ್‌ಎಸ್‌ಎಸ್–ಬಿಜೆಪಿ ಪ್ರಚಾರ ಮಾಡುತ್ತವೆ. 'ಪ್ರಾಚೀನ ಭಾರತವು ಎಲ್ಲರೂ ಹೆಮ್ಮೆಪಡುವಂತೆ ಇತ್ತು. ಆದರೆ, ಮೊಘಲ್ ಮತ್ತು ಇತರ ಮುಸ್ಲಿಂ ಒಳನುಸುಳುಕೋರರು ಬಂದು ಇದನ್ನೆಲ್ಲ ಹಾಳು ಮಾಡಿದರು. ಆರ್ಯನ್ನರು ಇಲ್ಲಿನ ಮೂಲನಿವಾಸಿಗಳು, ಸಿಂಧು ನದಿ ಕಣಿವೆ ನಾಗರಿಕತೆ ಆರ್ಯನ್ನರ ನಾಗರಿಕತೆ. ಎಲ್ಲ ಪ್ರಾಚೀನ ಹಿಂದೂ ದಾಖಲೆಗಳು ಪವಿತ್ರ. ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳು ಐತಿಹಾಸಿಕ ಸಂಕಥನಗಳು. ವಿಜ್ಞಾನದ ಎಲ್ಲ ಶಾಖೆಗಳು ಭಾರತದಲ್ಲಿಯೇ ಬೆಳೆದಿವೆ. ವೇದ ಕಾಲದಲ್ಲಿಯೇ ಹಲವಾರು ಆವಿಷ್ಕಾರಗಳಾಗಿದ್ದವು' ಎಂಬ ವಾದ ಸರಣಿಯನ್ನು ಅವರು ಮುಂದಿಡುತ್ತಾರೆ. ಹೀಗೆಯೇ, 'ಮೊಘಲ್ ಸಾಮ್ರಾಜ್ಯದ ಸ್ಥಾಪಕ ಬಾಬರ್ ರಾಮಮಂದಿರವನ್ನು ಕೆಡವಿದ. ಮೊಘಲ್ ದೊರೆಗಳಾದ ಅಕ್ಬರ್ ಅಥವಾ ಔರಂಗಜೇಬನಂಥವರು ತಮ್ಮ ತಾಯ್ನಾಡಿಗಾಗಿ ಹೋರಾಡುತ್ತಿದ್ದ ರಾಣಾ ಪ್ರತಾಪಸಿಂಗ್ ಅಥವಾ ಶಿವಾಜಿ ಮಹಾರಾಜರಂತಹ ದೊರೆಗಳಿಗೆ ಕಿರುಕುಳ ನೀಡಿದರು. ಹಿಂದೂಗಳನ್ನು ಮುಸ್ಲಿಮರನ್ನಾಗಿ ಮತಾಂತರಿಸಿದರು' ಎಂದು ಅವರ ಹುಸಿಪ್ರಚಾರ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಆರ್‌ಎಸ್‌ಎಸ್–ಬಿಜೆಪಿ ಆರೋಪಿಸುವಂತೆ ಮೊಹಮ್ಮದ್ ಘೋರಿಯ ಸೇನಾಧಿಪತಿಯಾಗಿದ್ದ ಬಕ್ತಿಯಾರ್ ಖಿಲ್ಜಿ ಎಂಬ ವ್ಯಕ್ತಿಯು ನಳಂದಾ ಮಹಾವಿಹಾರಕ್ಕೆ ಭೇಟಿ ನೀಡಲೇ ಇಲ್ಲ ಎಂಬ ಅಧಿಕೃತ ಐತಿಹಾಸಿಕ ಮಾಹಿತಿ ಲಭ್ಯವಿದೆ. ಬಂಗಾಳದ ಖಿಲ್ಜಿ ವಂಶದ ಬಗ್ಗೆ ದಾಖಲಿಸುವ "ತಬಕತ್ ಈ ನಸೀರಿ" ಎಂಬ ಪುಸ್ತಕವನ್ನು 13ನೇ ಶತಮಾನದಲ್ಲಿ ಬರೆದ ಮಿನ್ಹಾಜ್ ಇ ಶಿರಾಜ್ ಎಂಬ ಪರ್ಷಿಯನ್ ಕೃತಿಕಾರನೂ ಸಹ ಈ ನಳಂದಾ ಧ್ವಂಸ ಪ್ರಕರಣವನ್ನು ದಾಖಲಿಸಿಲ್ಲ. ಬೌದ್ಧ ಧರ್ಮವನ್ನು ಆಳವಾಗಿ ಅಧ್ಯಯನ ಮಾಡಿದ ಧರ್ಮಸ್ವಾಮಿ ಹಾಗೂ ಸುಂಪಾ ಎಂಬುವ ಇಬ್ಬರು ಟಿಬೆಟಿಯನ್ ಇತಿಹಾಸತಜ್ಞರು ಖಿಲ್ಜಿಯು ನಳಂದಾ ಮಹಾವಿಹಾರವನ್ನು ನಾಶ ಮಾಡಿದ ಎಂಬ ಮಾತನ್ನು ಒಪ್ಪುವುದಿಲ್ಲ. ಅಲ್ಲದೇ, ಬೌದ್ಧ ಧರ್ಮದ ಬಗ್ಗೆ ಉಲ್ಲೇಖವಿರುವ ಅಜಂತಾ, ಎಲ್ಲೋರಾ ಅಥವಾ ಸಾಂಚಿಯ ಸ್ತೂಪಗಳು ಇಂದಿಗೂ ವಿದೇಶಿ ಮುಸ್ಲಿಂ ದಾಳಿಕೋರರ 'ಒಳಉರಿಗೆ' ಬಲಿಯಾಗಿಲ್ಲ ಎಂಬುದನ್ನು ಗಮನಿಸಬೇಕು. ಪ್ರಖ್ಯಾತ ಇತಿಹಾಸಜ್ಞರಾದ ಜದುನಾಥ್ ಸರ್ಕಾರ್ ಹಾಗೂ ಆರ್.ಸಿ. ಮಜುಂದಾರ್‌ರೂ ಸಹ ಖಿಲ್ಜಿ ದಾಳಿಯಿಂದಲೇ ನಳಂದಾ ವಿ.ವಿ. ಧ್ವಂಸವಾಯಿತು ಎಂಬ ವಾದವನ್ನು ಒಪ್ಪುವುದಿಲ್ಲ. ಹೀಗಾಗಿ, ಹಿಂದೂ–ಮುಸ್ಲಿಮರ ಮಧ್ಯೆ ದ್ವೇಷ ಬಿತ್ತುವ ಬಿಜೆಪಿಯವರ ಸುಳ್ಳುಗಳನ್ನು ನಂಬುವ ಅಗತ್ಯವಿಲ್ಲ ಎಂದು ಘಂಟಾಘೋಷವಾಗಿ ಸಾರಬಹುದು ಅಲ್ಲವೇ!

## 'ಬಗರ್ ಹುಕುಂ ರೈತರ ಹಕ್ಕುಪತ್ರಕ್ಕಾಗಿ ಒತ್ತಾಯಿಸಿ ಬೆಳಗಾವಿ ಚಲೋ'




'ಬಗರ್ ಹುಕುಂ ರೈತರ ಹಕ್ಕುಪತ್ರಕ್ಕಾಗಿ' ಎಐಕೆಕೆಎಮ್‌ಎಸ್ ಸಂಘಟಿಸಿದ್ದ 'ಬೆಳಗಾವಿ ಚಲೋ' ಪ್ರತಿಭಟನೆಯಲ್ಲಿ ಸ್ಥಳಕ್ಕೆ ಆಗಮಿಸಿದ ಮುಖ್ಯಮಂತ್ರಿಗಳ ರಾಜಕೀಯ ಸಲಹಾಗಾರರಾದ ಶ್ರೀಯುತ ಬಿ.ಆರ್.ಪಾಟೀಲ್ ಮನವಿಪತ್ರ ಸ್ವೀಕರಿಸಿ, ಹಕ್ಕೊತ್ತಾಯಗಳ ಬಗ್ಗೆ ಸರ್ಕಾರದೊಂದಿಗೆ ಮಾತನಾಡುತ್ತೇನೆಂದು ಭರವಸೆ ನೀಡಿದರು.

## ಕೆವೈಸಿ ದಾಖಲೆ ನೀಡದ ಕಾರಣ

# ಬಡ ಗ್ರಾಮೀಣ ಕಾರ್ಮಿಕರಿಗೆ ಬಾರದ ಹಣ

ಜಾರ್ಖಂಡ್ ನಿವಾಸಿ ಅಶೋಕ್ ಪರ್ಹಾಯ್ಯ ಬಹಳ ಸಂತೋಷದಲ್ಲಿದ್ದನು. ಆತನ ಮೂವರು ಮಕ್ಕಳಿಗೆ ವಿದ್ಯಾರ್ಥಿ ವೇತನ ಸಿಕ್ಕಿತ್ತು. ಆದರೆ ಕೆವೈಸಿ ದಾಖಲೆಗಳನ್ನು (ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಮೊಬೈಲ್ ಸಂಖ್ಯೆಗಳನ್ನು) ಜೋಡಿಸಿರದ ಕಾರಣ ತನ್ನ ಮಕ್ಕಳ ಬ್ಯಾಂಕ್ ಖಾತೆಯನ್ನು ತಡೆಹಿಡಿದಿದೆಯೆಂದು ತಿಳಿದು ಸಂತೋಷವೆಲ್ಲಾ ಕರಗಿಹೋಯಿತು. ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಕಚೇರಿಗಳನ್ನೆಲ್ಲಾ ಸುತ್ತಿ ಸುತ್ತಿ ಹಣ ಖರ್ಚು ಮಾಡಿದರೂ ಸಮಸ್ಯೆ ಬಗೆಹರಿಯಲಿಲ್ಲ. ತನ್ನ ಖಾತೆಯನ್ನು ತಡೆಹಿಡಿಯಲಾಗಿದೆಯೆಂದು ತಿಳಿದ ಸೋಮವತಿ ದೇವಿ ಎರಡು ವರ್ಷ ಬ್ಯಾಂಕ್ ಶಾಖೆಯನ್ನು ಸುತ್ತಬೇಕಾಯಿತು. ಇನ್ನೊಂದು ಕಡೆ, ಸಂಗೀತಾ ದೇವಿಗೆ ಲಂಚ ಕೊಡಲು ಹಣವಿರದ ಕಾರಣ ಆಕೆಯ ಮಕ್ಕಳ ಆಧಾರ್ ಕಾರ್ಡ್ ಮಾಡಿಸಲು ಸಾಧ್ಯವಾಗಲಿಲ್ಲ. ಆಕೆಯ ಗಂಡನ ಖಾತೆಯನ್ನು ಕೆವೈಸಿ ದಾಖಲೆಗಳನ್ನು ಕೊಟ್ಟಿರದ ಕಾರಣ ತಡೆಹಿಡಿಯಲಾಗಿತ್ತು. ಬ್ಯಾಂಕ್ ಖಾತೆಗೆ ಕೆವೈಸಿ ದಾಖಲೆಗಳನ್ನು ಜೋಡಿಸಿಲ್ಲ ಎನ್ನುವ ಏಕೈಕ ಕಾರಣ ಬದುಕನ್ನೇ ತಲ್ಲಣಗೊಳಿಸುವ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತದೆ.

ಕಳೆದ ಕೆಲವು ತಿಂಗಳುಗಳಿಂದ ಭಾರತದಲ್ಲಿ ಬಡ ಜನತೆಯ ಮಧ್ಯೆ ಕೆಲಸ ಮಾಡುತ್ತಿರುವ ಸಾಮಾಜಿಕ ಕಾರ್ಯಕರ್ತರಾದ ಜಾನ್ ಡ್ರೆಜ಼ೆ ತಮ್ಮ 'ಎಕ್ಸ್–ಹ್ಯಾಂಡಲ್' (ಟ್ವಿಟ್ಟರ್) ಖಾತೆಯಲ್ಲಿ ಮೇಲಿನ ಉದಾಹರಣೆಗಳನ್ನು ಹಂಚಿಕೊಂಡಿದ್ದಾರೆ. ಅವರು ಕಳೆದ ಒಂದು ವರ್ಷದಿಂದ ತನ್ನ ಪಿಂಚಣಿ ಖಾತೆಯಿಂದ ಹಣ ತೆಗೆಯಲು ಹೆಣಗಾಡುತ್ತಿರುವ ಹಿರಿಯ ನಾಗರಿಕರಾದ ಶ್ರೀಮತಿ ಇಂಜೋರಿಯಾ ಕೋರ್ಟಿನಲ್ಲಿ ಹೇಳಿದ್ದನ್ನು ಹಂಚಿಕೊಳ್ಳುತ್ತಾ "ಛತ್ತೀಸ್‌ಗಢಕ್ಕೆ ಒಮ್ಮೆ ಭೇಟಿ ನೀಡಿ, ಅಲ್ಲಿಯೂ ಅದೇ ಪರಿಸ್ಥಿತಿಯಿದೆ" ಎನ್ನುತ್ತಾರೆ. ನರೆಗಾದಲ್ಲಿ ದುಡಿದು ಮತ್ತು ಬೀಡಿಗೆ ಬಳಸುವ ಟೆಂಡು ಎಲೆಗಳನ್ನು ಮಾರಿ ಹಣ ಕೂಡಿಟ್ಟಿದ್ದ ಶಾಂತಿ ಬ್ಯಾಂಕಿಗೆ ಸುತ್ತಲು ತುಂಬಾ ಹಣ ಖರ್ಚಾಗಿ ಕೊನೆಗೆ ಹಣ ನೋಡುವ 'ಆಸೆ ಕಳೆದುಕೊಂಡಿದ್ದಾಳೆ.' ಮೂಕಿ ಹಾಗೂ ಕುರುಡಿಯಾದ ರಾಣಿ ಕೊಂಡಿಗೆ ಕೆವೈಸಿ ಸಂಬಂಧಿತ ಸಮಸ್ಯೆಯಿಂದಾಗಿ ತನ್ನ ಜನಧನ್ ಖಾತೆಯಿಂದ ಪಿಂಚಣಿ ಹಣ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಗ್ರಾಮೀಣ ಬ್ಯಾಂಕುಗಳಲ್ಲಿ ಜನ ತುಂಬಿಕೊಂಡಿರುವುದು ಮತ್ತಷ್ಟು ಸಮಸ್ಯೆಯನ್ನು ತಂದೊಡ್ಡಿದೆ. ಸ್ಥಳೀಯ ಬ್ಯಾಂಕುಗಳಲ್ಲಿ ಕೆವೈಸಿ ದಾಖಲೆಗಳನ್ನು ನೀಡಲು ಬಂದಿರುವ ಜನರಿಂದ ತುಂಬಿ ಉದ್ದುದ್ದ ಸಾಲುಗಳಿರುತ್ತವೆ. ಕೆಲವೊಮ್ಮೆ ಲಿಂಕ್‌ಗಳು ಸಿಕ್ಕುವುದಿಲ್ಲ. ತುಂಬಾ ಹೊತ್ತು ಸಾಲಲ್ಲಿ ನಿಂತು ಗ್ರಾಹಕನು ಕೌಂಟರ್ ಬಳಿಗೆ ಬರುವಷ್ಟರಲ್ಲಿ ಕೌಂಟರ್ ಮುಚ್ಚಲಾಗುತ್ತದೆ. ಇದು ಗ್ರಾಮೀಣ ಹಾಗೂ ನಗರ ಪ್ರದೇಶಗಳ ಬ್ಯಾಂಕುಗಳ ಹೆಚ್ಚಿನ ಗ್ರಾಹಕರ ಅನುಭವ.

"ಲಾತೆಹಾರ್ ಜಿಲ್ಲೆಯ ಮೂರು ಸಣ್ಣ ಹಳ್ಳಿಗಳಲ್ಲಿ ಮಾಡಿದ ಸಮೀಕ್ಷೆಯಿಂದ ಕಂಡುಬಂದುದೇನೆಂದರೆ, ಶೇ.40ರಷ್ಟು ಜನರಲ್ಲಿ ಕಡೆಪಕ್ಷ ಒಂದು ತಡೆಹಿಡಿದ ಖಾತೆಯಿತ್ತು. ಅವುಗಳಲ್ಲಿ ಹೆಚ್ಚು ಕೆವೈಸಿ ಸಮಸ್ಯೆಗಳೇ ಕಾರಣ. ಈ ಸಾಂಕ್ರಾಮಿಕ ಸಮಸ್ಯೆಗೆ ಕೊಡಬಹುದಾದ ಒಂದು ವಿವರಣೆ – ಹತ್ತು ವರ್ಷಗಳಾದ ಪ್ರಧಾನ ಮಂತ್ರಿ ಜನ್ ಧನ್ ಯೋಜನೆಯಡಿ (PMJDY) ತೆರೆದ ಎಲ್ಲಾ ಖಾತೆಗಳಿಗೂ ಕೆವೈಸಿ ಜೋಡಿಸಬೇಕಾಗಿದೆ. ಈ ಸಮೂಹ ಖಾತಾ ತಡೆಗೆ ಬಲಿಯಾದವರಲ್ಲಿ ಹೆಚ್ಚಿನವರು ತಮ್ಮ ಅಲ್ಪ ಪಿಂಚಣಿ ಹಣದ ಮೇಲೆ ಅವಲಂಬಿತರಾದ ಹಿರಿಯ ಪಿಂಚಣಿದಾರರು, ವಿದ್ಯಾರ್ಥಿ ವೇತನ ಪಡೆಯುವ ಮಕ್ಕಳು ಮತ್ತು ಜಾರ್ಖಂಡ್‌ನ ಹೊಸ ಮೈಯಾ ಸಮ್ಮಾನ್ ಯೋಜನಾ ಅಡಿಯಲ್ಲಿ ಮಾಸಿಕ ರೂ.1,000 ಪಡೆಯುವ ಮಹಿಳೆಯರು" ಎಂದು ಡ್ರೆಜ಼ೆ ಆನ್‌ಲೈನ್ ಫೈನಾನ್ಷಿಯಲ್ ಪತ್ರಿಕೆಯಾದ ಮನಿ ಲೈಫ್ ಗೆ ತಿಳಿಸಿದ್ದಾರೆ.

ಜೀವನ ಮಾಡಲೂ ಕಷ್ಟಪಡುತ್ತಿರುವ ದಮನಿತ ಜನರು ಸರ್ಕಾರಿ ಯೋಜನೆಗಳಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಅವರ ತೃಣಸಮಾನ ವೇತನವನ್ನೂ ತಿಂಗಳುಗಟ್ಟಲೆ ಕೊಡುವುದಿಲ್ಲ; ಕಾರಣವಿಷ್ಟೇ, ಸರ್ಕಾರ ಕೆಲವು ನಿಯಮಗಳನ್ನು ಪೂರೈಸಬೇಕು ಎನ್ನುತ್ತದೆ. ಆದರೆ ಅವರು ಹತ್ತಾರು ಅಡೆತಡೆಗಳು ಹಾಗೂ ಕಷ್ಟಗಳಿಂದ ಅದನ್ನು ಪೂರೈಸಲಾಗುವುದಿಲ್ಲ. ಇಲ್ಲಿ ಚುನಾಯಿತ ಸರ್ಕಾರದ ಕೆಲಸವೇನಾಗಿದೆ? ಕೇವಲ ಆಡಳಿತಶಾಹಿಯ ನಿಯಮಾವಳಿಗಳನ್ನು ಪೂರೈಸದ ಕಾರಣ ಬಡಜನರಿಗೆ ಬರಬೇಕಾದ ಹಣವನ್ನು ತಡೆಹಿಡಿಯುವುದು. ಕೆವೈಸಿ ದಾಖಲೆಗಳನ್ನು ನೀಡಿರದಿದ್ದರೆ ಮೊದಲಿಗೇ ಈ ಖಾತೆಗಳನ್ನು ಹೇಗೆ ತೆರೆಯಲಾಯಿತು? ಪ್ರಧಾನಿಗಳು ಶೂನ್ಯ ಬಾಕಿಯ ಖಾತೆಗಳನ್ನು ತೆಗೆಯುವ ಬಗ್ಗೆ ಮಾತನಾಡಿದಾಗ, ಈ ಬಡ, ಅನಕ್ಷರಸ್ಥ, ಅಷ್ಟೊಂದು ತಿಳುವಳಿಕೆಯಿಲ್ಲದ ಜನರಿಗೆ ಕಾಲಕಾಲಕ್ಕೆ ಕೆವೈಸಿ ದಾಖಲೆಗಳನ್ನು ನೀಡುವುದು ಕಷ್ಟವಾಗುತ್ತದೆಯೆಂದು ಅರಿವಿರಲಿಲ್ಲವೇ? ಹಲವಾರು ಶ್ರೀಮಂತರು ಮತ್ತು ವ್ಯಾಪಾರಸ್ಥರು ನೋಟು ಅಮಾನ್ಯೀಕರಣದ ಸಮಯದಲ್ಲಿ ಕಪ್ಪುಹಣವನ್ನು ಬಿಳಿಯನ್ನಾಗಿ ಮಾಡಿಕೊಳ್ಳಲು ಗರೀಬರ ಹೆಸರಿನಲ್ಲಿ ಶೂನ್ಯ ಖಾತೆಗಳನ್ನು ತೆರೆದರು. ಅದರಿಂದ ಸಕಲ ಸೌಲಭ್ಯಗಳನ್ನು ಅನುಭವಿಸುತ್ತಿರುವುದು ವರದಿಯಾಗಿದೆ. ಅದು ಹೇಗೆ ಸಾಧ್ಯವಾಯಿತು? ಬಡ ದಿನಗೂಲಿ ಕಾರ್ಮಿಕ ದೊಡ್ಡ ಮೊತ್ತದ ಹಣದ ವ್ಯವಹಾರ ಮಾಡಲು ಸಾಧ್ಯವಿಲ್ಲದಿರುವಾಗ, ಅಂತಹ ವ್ಯವಹಾರಗಳು ನಡೆದಾಗ ಕೆವೈಸಿ ದಾಖಲೆಗಳನ್ನು ಪರಿಶೀಲಿಸಲಿಲ್ಲವೇ? ಈಗ ಬ್ಯಾಂಕುಗಳು ಸರ್ಕಾರಗಳ ಕೃಪಾಕಟಾಕ್ಷದಿಂದ ಕೆವೈಸಿ ದಾಖಲೆಗಳ ಜೋಡಣೆಯಾಗದಿರುವ ಹೊರೆಯನ್ನು ಬಡ ಕಾರ್ಮಿಕರ ಹೆಗಲಿಗೆ ವರ್ಗಾಯಿಸುತ್ತಿವೆ. ಅವರಿಗೆ ನ್ಯಾಯವಾಗಿ ಬರಬೇಕಾದ ಬಾಕಿಯನ್ನು ತಡೆಹಿಡಿದಿವೆ. ಇದೇ ಬ್ಯಾಂಕುಗಳೇ ದೊಡ್ಡ ದೊಡ್ಡ ಕಾರ್ಪೊರೆಟ್ ಕಂಪೆನಿಗಳ ಮತ್ತು ಕೈಗಾರಿಕೋದ್ಯಮಿಗಳ ಲಕ್ಷಾಂತರ ಕೋಟಿ ರೂ.ಗಳ ಸಾಲವನ್ನು ಮನ್ನಾ ಮಾಡುತ್ತಿವೆ.

ಬ್ಯಾಂಕ್ ಪಾಸ್‌ಬುಕ್, ಆಧಾರ್ ಕಾರ್ಡ್ ಮತ್ತು ಉದ್ಯೋಗ ದಾಖಲೆಗಳಲ್ಲಿ ಸಾಮಾನ್ಯವಾಗಿ ಹೆಸರಿನಲ್ಲಾಗುವ ಸಣ್ಣ ಕಾಗುಣಿತದ ತಪ್ಪುಗಳಿಂದಾಗಿ ಅವರಿಗೆ ಕೊಡಬೇಕಾದ ಹಣವನ್ನು ಕೊಡುವುದಿಲ್ಲ. ಜೊತೆಗೆ, ವಯಸ್ಸಾದಂತೆಲ್ಲಾ ಬೆರಳಚ್ಚು ಅಸ್ಪಷ್ಟವಾಗುವುದರಿಂದ ಆಧಾರ ಕಾರ್ಡ್ ನವೀಕರಣದಲ್ಲಿ ಬೆರಳಚ್ಚು ಹೊಂದಾಣಿಕೆಯಾಗುವುದಿಲ್ಲ. ಆದರೆ ಈ ಸಮಸ್ಯೆಗಳನ್ನೆಲ್ಲಾ ಬಗೆಹರಿಸುವ ಪ್ರಕ್ರಿಯೆ ಗ್ರಾಮೀಣ ಪ್ರದೇಶಗಳೆಲ್ಲೆಲ್ಲಿದೆ? ಲಾತ್‌ಚರ್‌ನಲ್ಲಿರುವ ನರೆಗಾ ಸಹಾಯತಾ ಕೇಂದ್ರದ ಪ್ರಚತಿ ಸಿಂಗ್ ದಿ ಹಿಂದೂ ಪತ್ರಿಕೆಗೆ ಮಾತನಾಡುತ್ತಿರುವಾಗ ಹೇಳಿದರು: "ಈ ಬಿಕ್ಕಟ್ಟಿಗೆ ಬ್ಯಾಂಕುಗಳು ಕಾಲಕಾಲಕ್ಕೆ ಕೆವೈಸಿ ದಾಖಲೆಗಳಿಗೆ ಒತ್ತಾಯಿಸುವುದೇ ಕಾರಣ... ಸ್ಥಳೀಯ ಬ್ಯಾಂಕಿನ ಮ್ಯಾನೇಜರ್ ಪ್ರಕಾರ, ದಿನಕ್ಕೆ 30 ಕೆವೈಸಿ ದಾಖಲೆಗಳ ಪ್ರಕ್ರಿಯೆ ನಡೆಸಬಹುದಾದ ಸಾಮರ್ಥ್ಯವಿರುವ ಕಡೆ 1,500 ಕೆವೈಸಿ ಅರ್ಜಿಗಳಿವೆ." (ದಿ ಹಿಂದೂ, 26 ಅಕ್ಟೋಬರ್ 2024) ಜನರು, ಅದರಲ್ಲೂ ಗ್ರಾಮೀಣ ಭಾಗದ ದುಡಿಯುವ ಜನರು ತಮ್ಮದಲ್ಲದ ತಪ್ಪಿಗೆ ಎಂತಹ ಸಂಕಟ, ಸಹಿಸಲಾಸಾಧ್ಯವಾದ ಹಿಂಸೆಯನ್ನು ಅನುಭವಿಸಬೇಕು!

ಇಷ್ಟೆಲ್ಲಾ ನಡೆಯುತ್ತಿರುವಾಗ, ಬ್ಯಾಂಕುಗಳು ಏಕಸ್ವಾಮ್ಯಾಧಿಪತಿಗಳಿಗೆ ಉದಾರವಾಗಿ ಸಾಲಗಳನ್ನು ಕೊಡುತ್ತಿವೆ. ಸ್ವಲ್ಪ ದಿನದ ಹಿಂದೆ ಅದಾನಿ ಮುಂಬೈ ನೇವಿ ಏರ್‌ಪೋರ್ಟ್‌ಗೆ ಎಸ್‌ಬಿಐ ರೂ. 12,770 ಕೋಟಿ ಸಾಲಕ್ಕೆ ಜಾಮೀನು ಕೊಟ್ಟಿದೆ; ಅದರರ್ಥ ಅದಾನಿ ಕಂಪೆನಿ ಹಣ ಕೊಡದಿದ್ದರೆ ಎಸ್‌ಬಿಐ ನಷ್ಟ ತುಂಬಬೇಕು. ಅಖಿಲ ಭಾರತ ಬ್ಯಾಂಕ್ ಉದ್ಯೋಗಿಗಳ ಸಂಘಟನೆಯ (AIBEA) ಪ್ರಕಾರ, ಹಣಕಾಸು ಬಿಕ್ಕಟ್ಟಿನಲ್ಲಿದ್ದ 10 ಕಂಪೆನಿಗಳನ್ನು ಅದಾನಿ ಗ್ರೂಪ್ ಕೊಂಡುಕೊಂಡ ಮೇಲೆ, ಸಾರ್ವಜನಿಕ ಬ್ಯಾಂಕುಗಳು ಅವುಗಳ 62,000 ಕೋಟಿ ರೂ. ಬಾಕಿಯಿದ್ದ ಸಾಲವನ್ನು ಕೇವಲ 16,000 ಕೋಟಿಗೆ ಸಾಲ ಚುಕ್ತಾ ಮಾಡಲು ತೀರ್ಮಾನ ಮಾಡಿಕೊಂಡಿವೆ. ಬೆರಳೆಣಿಕೆಯಷ್ಟು ಕಾರ್ಪೊರೆಟ್ ದೈತ್ಯರಿಗೆ ಉದಾರವಾಗಿ ದಯೆ ತೋರುತ್ತಿದ್ದರೆ, ಸಾವಿರಾರು ಅಲ್ಲ, ಲಕ್ಷಾಂತರ ಅರೆಹೊಟ್ಟೆಯ, ಕೈಗೂ ಬಾಯಿಗೂ ನೇರವಾಗಿರುವ ಜನರ ಮೇಲೆ ಅತ್ಯಂತ ಕಟ್ಟುನಿಟ್ಟಿನ ನಿಯಮಾವಳಿಗಳನ್ನು ಪಾಲಿಸಲಾಗುತ್ತಿದೆ.

ಸಾಕಷ್ಟು ಬಾರಿ ತಮ್ಮ ಹೇಳಿಕೆಗಳಿಂದ ನಗೆಪಾಟಲಿಗೆ ಈಡಾಗಿರುವ ಹಣಕಾಸು ಸಚಿವೆ, ಸಾಮಾನ್ಯವಾಗಿ ಸಾಲ ತೀರಿಸದವರಿರುವ ಕಾರ್ಪೊರೆಟ್ ಕಂಪೆನಿಗಳಿಗೆ ಹೊಸದಾಗಿ ಸಾಲ ತೆಗೆದುಕೊಳ್ಳಲು ಸಾಧ್ಯವಾಗುವಂತೆ ಮಾಡಲು ಬಡ್ಡಿ ದರವನ್ನು ಇಳಿಸಬೇಕೆಂದು ಬೇಡಿಕೊಂಡಿದ್ದರು. ಆದರೆ ಕೆವೈಸಿ ದಾಖಲೆಗಳನ್ನೇ ದೊಡ್ಡದಾಗಿ ಮಾಡಿಕೊಂಡು ಅಸಹಾಯ, ನಿರ್ಗತಿಕ ಜನರಿಗೆ ಬರಬೇಕಾದ ಹಣವನ್ನು ತಡೆಹಿಡಿಯುವಾಗ ಸಚಿವರಿಗೆ ಬಡಜನರ ಬಗ್ಗೆ ಕಾಳಜಿಯೆಲ್ಲಿತ್ತು? ಇದರಲ್ಲಿ ಮಧ್ಯೆ ಪ್ರವೇಶಿಸಿ ಬಡಜನರಿಗೆ ಹಣ ಸಿಗುವಂತೆ ಮಾಡಲಿಲ್ಲವೇಕೆ? ಜನರಿಗೆ ಬಾಕಿಯಿರುವ ಹಣ – ಅದು ಪಿಂಚಣಿಯಾಗಲೀ, ವಿದ್ಯಾರ್ಥಿ ವೇತನವಾಗಲೀ, ಸರ್ಕಾರಿ ಯೋಜನೆಯಡಿ ಮಾಡಿದ ಕೆಲಸದ ವೇತನವಾಗಲೀ – ಪಡೆದುಕೊಳ್ಳಲು ನಿಯಮಗಳನ್ನೇಕೆ ಸಡಿಲಗೊಳಿಸಲಿಲ್ಲ? ಈ ವಿಷಯದಲ್ಲಿ ಸರ್ಕಾರ ಜನಸಾಮಾನ್ಯರಿಗೆ ಉತ್ತರ ಕೊಡಬೇಕು.

# ಸಾರಿಗೆ ದರ ಏರಿಕೆಯನ್ನು ಹಿಂಪಡೆಯಲು ಎಸ್‌ಯುಸಿಐ(ಸಿ) ಒತ್ತಾಯ

## ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಕೆ. ಉಮಾ ಅವರು ನೀಡಿರುವ ಪತ್ರಿಕಾ ಹೇಳಿಕೆ

ರಾಜ್ಯದಲ್ಲಿ ರಸ್ತೆ ಸಾರಿಗೆ ನಿಗಮಗಳ ಬಸ್ ದರವನ್ನು ಶೇ. 15ರಷ್ಟು ಏರಿಕೆ ಮಾಡಿರುವುದನ್ನು ಮತ್ತು ಬೆಂಗಳೂರು ಮೆಟ್ರೋ ದರ ಏರಿಕೆಯ ಪ್ರಸ್ತಾಪವನ್ನು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವು ತೀವ್ರವಾಗಿ ಖಂಡಿಸುತ್ತದೆ.

ಈಗಾಗಲೇ ಆಹಾರ ಪದಾರ್ಥಗಳು ಮತ್ತು ಇಂಧನ ಹಣದುಬ್ಬರದ ಬಿಸಿಯಿಂದ ರಾಜ್ಯದ ಜನತೆ ಬಸವಳಿದಿದ್ದಾರೆ. ಇಂದಿನ ಆಧುನಿಕ ಬದುಕಿನಲ್ಲಿ ಪ್ರಯಾಣವು ಮೂಲಭೂತ ಅವಶ್ಯಕತೆಯಾಗಿದೆ. ಹಾಗಾಗಿ ಬಸ್ ಮತ್ತು ಮೆಟ್ರೋ ದರ ಏರಿಕೆಗಳು ಜನರಿಗೆ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ. ಸರ್ಕಾರವು ರಾಜ್ಯದ ಜನರಿಗೆ ಹೊಸ ವರ್ಷಕ್ಕೆ ಇಂತಹ ಉಡುಗೊರೆ ನೀಡಲು ಮುಂದಾಗಿರುವುದು ವಿಪರ್ಯಾಸ.

ರಾಜ್ಯ ಸರ್ಕಾರದ ಶಕ್ತಿ ಯೋಜನೆಯ ಬಾಕಿ ಹಣವನ್ನು ತಡ ಮಾಡದೆ ಸಾರಿಗೆ ನಿಗಮಗಳಿಗೆ ಪಾವತಿ ಮಾಡಬೇಕು. ರಾಜ್ಯ ರಸ್ತೆ ಸಾರಿಗೆ ನಿಗಮಗಳಲ್ಲಿರುವ ಭ್ರಷ್ಟಾಚಾರ, ದುಂದುವೆಚ್ಚಗಳಿಗೆ ಕಡಿವಾಣ ಹಾಕಬೇಕು. ಕೇಂದ್ರ ಸರ್ಕಾರವು ರಾಜ್ಯಕ್ಕೆ ನೀಡಬೇಕಾದ ನ್ಯಾಯಸಮ್ಮತ ತೆರಿಗೆ ಬಾಕಿಯನ್ನು ಪಾವತಿಸಬೇಕು. ಆ ಮೂಲಕ ಸಾರಿಗೆ ಸಂಸ್ಥೆಗಳ ಆದಾಯ ಕೊರತೆಯನ್ನು ತುಂಬಬೇಕೇ ಹೊರತು ಯಾವುದೇ ಕಾರಣಕ್ಕೂ ದರ ಏರಿಕೆ ಮಾಡಕೂಡದು ಎಂದು ಎಸ್‌ಯುಸಿಐ (ಸಿ) ಒತ್ತಾಯಿಸುತ್ತದೆ.









# ಬಿಜೆಪಿಯ 'ಬುಲ್ಡೋಜರ್ ರಾಜನೀತಿಗೆ' ಬ್ರೇಕ್ ಹಾಕಿದ ಸುಪ್ರೀಂ ಕೋರ್ಟ್

ನೂರು ವರ್ಷಗಳ ಹಿಂದೆ ಕಂಡುಹಿಡಿಯಲ್ಪಟ್ಟ ಬುಲ್ಡೋಜರ್ ಎಂಬ ಯಂತ್ರವು, ಪ್ರಪಂಚದಾದ್ಯಂತ ಮನೆ, ಕಛೇರಿ, ರಸ್ತೆ ಮತ್ತು ಇತರ ಮೂಲಸೌಕರ್ಯಗಳ ನಿರ್ಮಾಣಕ್ಕೆ ಬಳಕೆಯಾಗುತ್ತಾ ಬಂದಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ, ಅದು, ಒಂದಲ್ಲ ಒಂದು ಕಾರಣಕ್ಕೆ ಹಿಂದೂ ಕೋಮುವಾದಿಗಳ ಕೈಯಲ್ಲಿ ಸಿಕ್ಕ ಅಲ್ಪಸಂಖ್ಯಾತ ಮುಸ್ಲಿಮ್ ಸಮುದಾಯದವರ ಮನೆ ಮತ್ತು ಜೀವನೋಪಾಯಗಳನ್ನು ಧ್ವಂಸಗೊಳಿಸುವ ಅಸ್ತ್ರವಾಗುತ್ತಿದೆ. ಮೇ 2022ರಲ್ಲಿ, ಪ್ರಯಾಗ್‌ರಾಜ್ (ಅಲಹಾಬಾದ್) ನಿವಾಸಿ ಜಾವೆದ್ ಮೊಹಮ್ಮದ್ ಎಂಬ ರಾಜಕೀಯ ಕಾರ್ಯಕರ್ತನ ಮನೆ 'ಅಕ್ರಮ'ವೆಂಬ ನೆಪವೊಡ್ಡಿ, ಅದನ್ನು ನೆಲಸಮಗೊಳಿಸಲಾಯಿತು. ಆದರೆ, ಅವರ ಕುಟುಂಬದವರು, ಕಟ್ಟಡವು ಅಕ್ರಮವಲ್ಲವೆಂದು ಪದೇ ಪದೇ ಹೇಳಿದ್ದಾರೆ. ರಾಜಕೀಯ ತಜ್ಞರು ಹೇಳುವುದೇ ಬೇರೆ. ಕಟ್ಟಡವನ್ನು ಧ್ವಂಸಗೊಳಿಸುವುದಕ್ಕೆ ನಿಜವಾದ ಕಾರಣ, ಜಾವೆದ್‌ರವರು ಯೋಗಿ ಆದಿತ್ಯನಾಥ್ ಸರ್ಕಾರವನ್ನು ಕಟುವಾಗಿ ಟೀಕಿಸುತ್ತಿದ್ದರು ಎನ್ನುವುದು. ಉತ್ತರಪ್ರದೇಶದ ಮುಖ್ಯಮಂತ್ರಿ ಹಾಗೂ ಕೇಸರೀಧಾರಿ, ಯೋಗಿ ಆದಿತ್ಯನಾಥರ ಪ್ರಕಾರ "ಅಪರಾಧಿಗಳು ಹಾಗೂ ಮಾಫಿಯಾ"ಗಳನ್ನು ಹೊಸಕಿಹಾಕಲು ಮಾತ್ರ ಬುಲ್ಡೋಜರ್‌ಗಳು ಬಳಕೆಯಾಗುತ್ತಿವೆ. ಆದರೆ, ನಿಜಾಂಶವೆಂದರೆ ಬಿಜೆಪಿ ಸರ್ಕಾರವು, ನೆಲದ ಕಾನೂನನ್ನು ಉಲ್ಲಂಘಿಸಿ, ಬುಲ್ಡೋಜರ್‌ಗಳನ್ನು, ಅಲ್ಪಸಂಖ್ಯಾತ ಮುಸ್ಲಿಮ್ ಸಮುದಾಯದ ವಿರುದ್ಧ ದ್ವೇಷದ ರಾಜಕಾರಣದ ಅಸ್ತ್ರವನ್ನಾಗಿ ಉಪಯೋಗಿಸುತ್ತಿದೆ. ಹೆಚ್ಚು ಸಂದರ್ಭಗಳಲ್ಲಿ ನೋಟಿಸನ್ನೂ ನೀಡದೆ, ಬಲ ಪ್ರಯೋಗದಿಂದ ಕಟ್ಟಡಗಳನ್ನು ಕೆಡವಲಾಗುತ್ತಿದೆ. ಇದರ ವಿರುದ್ಧ, ನಮ್ಮ ದೇಶದಲ್ಲಷ್ಟೇ ಅಲ್ಲದೆ, ಜಾಗತಿಕ ಮಟ್ಟದಲ್ಲೂ ಪ್ರತಿಭಟನೆಗಳು ನಡೆದು ಅದು ಸುದ್ದಿಯಾಗಿದೆ. "ಈ ಅಧಿಕೃತ ಕಾರ್ಯಾಚರಣೆಗಳಲ್ಲಿ, ತೆಳುವಾದ ಕಾನೂನಿನ ಹೊದಿಕೆಯಷ್ಟೇ ಇರುವುದು" ಮತ್ತು "ಕಾನೂನಿನ ತಿರುಳನ್ನೇ ಬುಲ್ಡೋಜರ್ ದಾಳಿಗೆ ಒಳಪಡಿಸಲಾಗುತ್ತಿದೆ" ಎಂಬುದು ಅನೇಕ ವಿಮರ್ಶಕರ ಅಭಿಪ್ರಾಯ.

ಬುಲ್ಡೋಜರ್ ರಾಜಕೀಯದಿಂದುಂಟಾದ ಕೋಮು ಧ್ರುವೀಕರಣದಿಂದಾಗಿ, ಯೋಗಿ ಅದಿತ್ಯನಾಥ್, ಶಿವರಾಜ್ ಚೌಹಾಣ್‌ರಂತವರಿಗೆ ಸಾಕಷ್ಟು ಚುನಾವಣಾ ಲಾಭ ಸಿಕ್ಕಿದೆ. ಹಾಗಾಗಿ, ಬಿಜೆಪಿಯ ಮುಖ್ಯಮಂತ್ರಿಗಳು, ಮತ್ತಿತರ ದೊಡ್ಡ ನಾಯಕರು, ಇದರ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಪ್ರಧಾನಿ ಮೋದಿಯವರಿಂದಲೂ ಸಹ ಇದಕ್ಕೆ ಅನುಮೋದನೆ ದೊರೆತಿದೆ. ಡಿಸೆಂಬರ್ 2021ರಲ್ಲಿ, ಉತ್ತರಪ್ರದೇಶಕ್ಕೆ ಭೇಟಿ ನೀಡಿದಾಗ ಅವರು ಭಾಷಣವೊಂದರಲ್ಲಿ "ಮಾಫಿಯಾದ ಮೇಲೆ ಬುಲ್ಡೋಜರ್ ಹರಿದಾಗ, ಅಕ್ರಮ ಕಟ್ಟಡದ ಮೇಲೂ ಹರಿಯುತ್ತದೆ. ಆದರೆ ನೋವು ತಾಗುವುದು, ಅದನ್ನು ಪೋಷಿಸುತ್ತಿರುವವನಿಗೆ" ಎಂದು ಹೇಳುತ್ತ, ಪರೋಕ್ಷವಾಗಿ ತಮ್ಮ ಸಹಮತವನ್ನು ತೋರಿಸಿದ್ದಾರೆ. ಉತ್ತರಪ್ರದೇಶವಲ್ಲದೆ, ಮಧ್ಯಪ್ರದೇಶ, ದೆಹಲಿ ಮುಂತಾದ ಕಡೆಗಳಲ್ಲಿ ಕೋಮು ಘರ್ಷಣೆಯ ನಂತರದ ಸಮಯದಲ್ಲಿ, ಬುಲ್ಡೋಜರ್ ಕಾರ್ಯಾಚರಣೆ ನಡೆಸಲಾಗಿದೆ. ಹೆಚ್ಚು ಮುಸ್ಲಿಮ್ ಸಮುದಾಯಗಳ ವಸತಿ, ಸಣ್ಣ ಅಂಗಡಿ, ಚಿಲ್ಲರೆ ವ್ಯಾಪಾರವನ್ನು ಧ್ವಂಸಗೊಳಿಸಲಾಗಿದೆ. ಯೋಗಿ ಆದಿತ್ಯನಾಥರನ್ನು ಬುಲ್ಡೋಜರ್ ಬಾಬಾ ಅಂತಲೂ, ಶಿವರಾಜ್ ಚವಾಣರನ್ನು ಬುಲ್ಡೋಜರ್ ಮಾಮಾ ಅಂತಲೂ ಕರೆಯಲಾಗುತ್ತಿತ್ತು. ಅನೇಕ ಶಹರಗಳಲ್ಲಿ, ಚುನಾವಣಾ ಪ್ರಚಾರದ ಸಭೆಗಳಲ್ಲಿ, ಬುಲ್ಡೋಜರ್‌ಗಳನ್ನು ನಿಲ್ಲಿಸಲಾಗುತ್ತಿತ್ತು. ಆದಿತ್ಯನಾಥರ ಬೆಂಬಲಿಗರು ಬುಲ್ಡೋಜರ್‌ನ ಆಟಿಕೆಗಳನ್ನು ಪ್ರದರ್ಶಿಸುತ್ತಿದ್ದರು. ಚುನಾವಣೆಯ ನಂತರದ ಸಂಭ್ರಮಾಚರಣೆಯಲ್ಲಿ ಅವುಗಳನ್ನು, ಅಸೆಂಬ್ಲಿ ಬಿಲ್ಡಿಂಗ್‌ನ ಮುಂದೆಯೂ ಮೆರವಣಿಗೆ ಮಾಡಲಾಯಿತು. ಇತ್ತೀಚಿಗೆ ಅಂದರೆ, ಜೂನ್ ತಿಂಗಳಿನಲ್ಲಿ ಲಕ್ನೋದ ಅಕ್ಬರ್ ನಗರದಲ್ಲಿ ಆದಿಥ್ಯನಾಥರ ಸರ್ಕಾರ ನಡೆಸಿದ ಬೃಹತ್ ಕಾರ್ಯಾಚರಣೆಯಲ್ಲಿ, 1,169 ಮನೆಗಳನ್ನು, 101 ವ್ಯಾಪಾರಿ ಮುಂಗಟ್ಟುಗಳನ್ನು, ಒಟ್ಟು 1,800 ಕಟ್ಟಡಗಳನ್ನು ಧ್ವಂಸಗೊಳಿಸಲಾಯಿತು. ಪ್ರವಾದಿ ಮೊಹಮ್ಮದ್ ಹಾಗೂ ಇಸ್ಲಾಂ ಧರ್ಮದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದ ರಾಮಗಿರಿ ಮಹರಾಜ್ ಎನ್ನುವವರ ವಿರುದ್ಧ ಪ್ರತಿಭಟಿಸಿದ್ದಕ್ಕಾಗಿ, ಛತ್ರಪುರ ಪಟ್ಟಣದ ಹಾಜಿ ಶಹಜಾದ್ ಅಲಿ ಎಂಬುವವರ ಮನೆಯನ್ನು ಧ್ವಂಸಗೊಳಿಸಲಾಯಿತು. ಕಳೆದೆರಡು ವರ್ಷಗಳಲ್ಲಿ, ಬುಲ್ಡೋಜರ್ ಕಾರ್ಯಾಚರಣೆಯಲ್ಲಿ, ಸರಿಸುಮಾರು 1,50,000 ಮನೆಗಳನ್ನು ನೆಲಸಮಗೊಳಿಸಲಾಗಿದ್ದು, 7,38,000 ಜನರು ಬೀದಿಗೆ ಬಂದಿದ್ದಾರೆಂದು ವರದಿಯೊಂದು ತಿಳಿಸುತ್ತದೆ. ಬಿಜೆಪಿ ಮುಖ್ಯಮಂತ್ರಿಗಳ ಬಾಯಿಯಿಂದ "ಅಪರಾಧಿಗಳನ್ನು ಭೂಮಿಯ 10 ಅಡಿ ಆಳದಲ್ಲಿ ಹುದುಗಿಸುತ್ತೇನೆ, ಅವರ ಮನೆಗಳನ್ನು ಕೆಡವಿ ಹಾಕಿ, ಅವುಗಳನ್ನು ಹೊಲಗಳನ್ನಾಗಿ ಮಾಡುತ್ತೇನೆ" ಮುಂತಾದ ಹೇಳಿಕೆಗಳು ಈ ಸಂದರ್ಭದಲ್ಲಿ ಯಥೇಚ್ಛವಾಗಿ ಬಂದಿವೆ.

ಅಪರಾಧವೊಂದರಲ್ಲಿ ಆರೋಪಿಯಾಗಿದ್ದ ಮಾತ್ರಕ್ಕೆ, ಆ ವ್ಯಕ್ತಿಯ ಮನೆ–ಆಸ್ತಿಗಳನ್ನು ನಾಶಪಡಿಸಬಹುದೆಂದು ಭಾರತದ ಯಾವ ಕಾನೂನಿನಲ್ಲೂ ಇಲ್ಲ. ಹಾಗಾಗಿಯೇ, ಬಿಜೆಪಿ ಸರ್ಕಾರಗಳು, ನಾಶಗೊಳಿಸುವ ಕಾರ್ಯಾಚರಣೆಗಳನ್ನು ಕೇವಲ ಸರ್ಕಾರೀ ಜಮೀನುಗಳಲ್ಲಿ ಹಾಗೂ ಅಕ್ರಮ ಕಟ್ಟಡಗಳ ಮೇಲಷ್ಟೇ ಮಾಡುತ್ತಿದ್ದೇವೆ ಎಂಬ ಅಧಿಕೃತ ನಿಲುವನ್ನು ತೆಗೆದುಕೊಂಡಿವೆ. ನೊಂದ ಜನತೆ ಈ ಅನ್ಯಾಯದ ವಿರುದ್ಧ ಸುಪ್ರೀಂ ಕೋರ್ಟಿನ ಬಾಗಿಲನ್ನು ತಟ್ಟುತ್ತಲೇ ಇದ್ದರು. ಕೊನೆಗೂ ಸರ್ವೋಚ್ಚ ನ್ಯಾಯಾಲಯ ಸ್ಪಂದಿಸಿದೆ. ಜಸ್ಟಿಸ್ ಚಂದ್ರಚೂಡ್, ಜೆ. ಬಿ. ಪರ್ದಿವಾಲ ಹಾಗೂ ಮನೋಜ್ ಮಿಶ್ರರವರನ್ನು ಒಳಗೊಂಡ ನ್ಯಾಯಪೀಠವು ನೀಡಿದ ತೀರ್ಪಿನಲ್ಲಿ, ಬುಲ್ಡೋಜರ್ ನ್ಯಾಯಕ್ಕೆ ಅವಕಾಶ ಕೊಟ್ಟಲ್ಲಿ, ವೈಯಕ್ತಿಕ ಆಸ್ತಿಯ ಹಕ್ಕನ್ನು ಅನುಮೋದಿಸುವ ಸಂವಿಧಾನದ ಪರಿಚ್ಛೇದ 300–ಎ ಅನ್ನು ಉಲ್ಲಂಘಿಸಿದಂತಾಗುತ್ತದೆ. ಜಸ್ಟಿಸ್ ಚಂದ್ರಚೂಡರ ನಿವೃತ್ತಿಯ ಸಂದರ್ಭದಲ್ಲಿ ಹೊರಬಿದ್ದ ತೀರ್ಪಿನಲ್ಲಿ, ಯಾವುದೇ ತೆರವುಗೊಳಿಸುವ ಕಾರ್ಯಾಚರಣೆಗೆ ಮೊದಲು, ಅವಶ್ಯವಾದ ಆರು ಕ್ರಮಗಳ ಬಗ್ಗೆ ಒಂದು ಕಾರ್ಯಸೂಚಿಯನ್ನು ನಮೂದಿಸಲಾಗಿದೆ. ಸರಿಯಾದ ಸರ್ವೆ, ಲಿಖಿತ ನೋಟಿಸು, ಆಕ್ಷೇಪಣೆಗಳಿಗೆ ಅವಕಾಶ ಮುಂತಾದ ಸೂಚಿಗಳನ್ನು ಅದು ಒಳಗೊಂಡಿದೆ. ಇತರೆ ಅಭಿವೃದ್ಧಿ ಕಾರ್ಯಗಳಿಗಾಗಿ ಆಸ್ತಿಯನ್ನು ಕೆಡವುವುದಕ್ಕೂ ಈ ಆರು ಕಾರ್ಯಸೂಚಿಗಳನ್ನು ಪಾಲಿಸತಕ್ಕದ್ದು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಏಕಪಕ್ಷೀಯ ಮತ್ತು ನಿರಂಕುಶದ ಬುಲ್ಡೋಜರ್ ನ್ಯಾಯವನ್ನು, ನ್ಯಾಯಾಂಗ ಪೀಠವು ಕಟುವಾಗಿ ಟೀಕಿಸಿದೆ. ಮಾತ್ರವಲ್ಲದೆ, ಹೀಗೆ, ಆಸ್ತಿಪಾಸ್ತಿ ಧ್ವಂಸಗೊಳಿಸುವಂತಹ ಬೆದರಿಕೆಗಳಿಂದ ಜನತೆಯ ಧ್ವನಿಯನ್ನು ಅಡಗಿಸಲಾಗುವುದಿಲ್ಲವೆಂದೂ ಹೇಳಿದೆ. ಕಾನೂನು ಪರಿಧಿಯಿಂದ ಆಚೆ ಇರುವ ಇಂತಹ ಕ್ರಮಗಳು ಮೂಲಭೂತ ಹಕ್ಕನ್ನು ಉಲ್ಲಂಘಿಸುತ್ತದೆ, ಆದ್ದರಿಂದ ಸ್ವೀಕರಾರ್ಹವಲ್ಲ. ಯಾವುದೇ ಆಸ್ತಿಯನ್ನು ಕೆಡಹುವ ಮೊದಲು, ಸರಿಯಾದ ಕಾನೂನಾತ್ಮಕ ವಿಧಾನ ಪಾಲಿಸಬೇಕು ಹಾಗೂ ವ್ಯಕ್ತಿಗಳಿಗೆ ಆಕ್ಷೇಪಣೆ, ಅಭಿಪ್ರಾಯಗಳಿಗೆ ಸೂಕ್ತ ಅವಕಾಶವಿರಬೇಕು ಎಂದೂ ಅಭಿಪ್ರಾಯಪಟ್ಟಿದೆ.

ಸುಪ್ರೀಂ ಕೋರ್ಟಿನ ಈ ಮಹತ್ವಪೂರ್ಣ ತೀರ್ಪಿನಿಂದ ಕಾರ್ಯಾಂಗದ ದುರುಪಯೋಗಕ್ಕೆ ಒಂದು ಅವಶ್ಯಕವಾದ ತಡೆ ಬಂದಂತಾಗಿದೆ. ಈ ಬುಲ್ಡೋಜರ್ ನ್ಯಾಯವನ್ನು ನಿಲ್ಲಿಸುವುದರ ಮೂಲಕ, ನ್ಯಾಯಾಲಯವು, ಸಂವಿಧಾನ ನೀಡಿದ ಮೂಲಭೂತ ಹಕ್ಕುಗಳನ್ನು ಹತ್ತಿಕಲು ಬಿಡಲಾಗುವುದಿಲ್ಲ ಎಂಬ ಸಂದೇಶವನ್ನು ನೀಡಿದೆ. ಒಂದು ನ್ಯಾಯಯುತ ವಿಚಾರಣೆಗೆ ಅವಕಾಶ ಕೊಡದೆ, ವ್ಯಕ್ತಿಯೊಬ್ಬನನ್ನು ಶಿಕ್ಷಿಸುವುದು, ಸಹಜ ನ್ಯಾಯ ಪರಿಕಲ್ಪನೆಗೆ ವಿರುದ್ಧವಾದುದು. "ಕಾನೂನಿನನ್ವಯ ಬುಲ್ಡೋಜರ್ ನ್ಯಾಯವೆಂಬುದನ್ನು ಒಪ್ಪಿಕೊಳ್ಳಲಾಗುವುದಿಲ್ಲ . ಬುಲ್ಡೋಜರ್ ಮೂಲಕ ನ್ಯಾಯನೀಡುವುದು ಯಾವುದೇ ನಾಗರಿಕ ನ್ಯಾಯವ್ಯವಸ್ಥೆಯಲ್ಲಿ ಇಲ್ಲ. ಜನತೆಯ ಧ್ವನಿಯನ್ನು ಅವರ ಮನೆ, ಆಸ್ತಿಗಳನ್ನು ನಾಶಪಡಿಸುವ ಬೆದರಿಕೆಯಿಂದ ಹತ್ತಿಕ್ಕ ಕೂಡದು. ಮನುಷ್ಯನೊಬ್ಬನು ಅತ್ಯಂತ ಸುರಕ್ಷಭಾವ ಪಡೆಯುವುದು ಮನೆಯೆಂಬುದರಲ್ಲಿ. ಅಂದಮಾತ್ರಕ್ಕೆ ಸಾರ್ವಜನಿಕ ಜಾಗಗಳ ಕಾನೂನುಬಾಹಿರ ಒತ್ತುವರಿ ಮತ್ತು ಅತಿಕ್ರಮಣಗಳಿಗೆ ಕಾನೂನು ಆಸ್ಪದ ಕೊಡುವುದಿಲ್ಲ."

ಸುಪ್ರೀಂ ಕೋರ್ಟಿನ ಆದೇಶವಿದ್ದರೂ, ಕಳೆದ ನವೆಂಬರ್ 18ರಂದು, ಜಾರ್ಖಂಡ್ ಚುನಾವಣಾ ಪ್ರಚಾರದ ವೇಳೆ, ಯೋಗಿ ಆದಿತ್ಯನಾಥ್, ಬಿಜೆಪಿ ಗೆದ್ದು ಬಂದಲ್ಲಿ, ರಾಜಕೀಯ ವಿರೋಧಿಗಳ ವಿರುದ್ಧ ಬುಲ್ಡೋಜರ್ ನ್ಯಾಯವನ್ನು ಬಳಸುವ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ಜೊತೆಗೆ ರಾಜಮಹಲ್‌ನಲ್ಲಿ ಅವರ ಬೆಂಬಲಿಗರು, ಬುಲ್ಡೋಜರ್‌ಗಳ ಮೇಲೆ ಕುಳಿತುಕೊಂಡಿರುವ ಚಿತ್ರವನ್ನು ಸಹ ಅವರು ಪ್ರದರ್ಶಿಸಿದರು. ಎರಡು ಬುಲ್ಡೋಜರುಗಳ ಮೇಲೆ ಅವರು ಬೃಹತ್ ಕೇಸರಿ ಧ್ವಜಗಳನ್ನು ಹಿಡಿದು ನಿಂತಿದ್ದರು. ಕೋರ್ಟಿನ ಆದೇಶಕ್ಕೆ ಕಿಮ್ಮತ್ತು ನೀಡದ ಬಿಜೆಪಿ ನಾಯಕರುಗಳ ಭಂಡತನವನ್ನು ಇದು ತೋರಿಸುತ್ತದೆ. ಬೇಕಾದ್ದನ್ನು ಮಾಡುವ ಲೈಸೆನ್ಸ್ ಇರುವವರಂತೆ ಮತ್ತು ತಮ್ಮನ್ನು ತಾವು ಕಾನೂನು ಮೀರಿದವರು ಎಂದು ಭಾವಿಸುವ ಫ್ಯಾಸೀವಾದಿಗಳಿಗೆ ಇದು ಸಹಜವೂ ಹೌದು.

## ಎಐಡಿಎಸ್ಓ ಸಂಸ್ಥಾಪನಾ ದಿನ :

# 7 ದಶಕಗಳ ಸಂಘರ್ಷದ ಹಾದಿ

ಶಿಕ್ಷಣ–ಮಾನವತೆ–ಸಂಸ್ಕೃತಿ ಉಳಿಸಿ ಎಂಬ ಘೋಷವಾಕ್ಯದೊಂದಿಗೆ ರಾಜ್ಯದಾದ್ಯಂತ ವಿದ್ಯಾರ್ಥಿಗಳ ನಡುವೆ ಎಐಡಿಎಸ್‌ಓದ 70ನೇ ಸಂಸ್ಥಾಪನಾ ದಿನದ ವಿಚಾರಗಳನ್ನು ಹರಡಲಾಯಿತು. ರಾಜ್ಯದ ವಿವಿಧ ಶಾಲಾ, ಕಾಲೇಜು, ಹಾಸ್ಟೆಲ್, ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳ ನಡುವೆ ಕಾರ್ಯಕ್ರಮವನ್ನು ಸಂಘಟಿಸಲಾಗಿತ್ತು. ಎಲ್ಲಾ ಜಿಲ್ಲೆಗಳಲ್ಲಿ ಎಐಡಿಎಸ್‌ಓ ಸಂಘಟನೆಯ ಧ್ಯೇಯೋದ್ದೇಶದ ಕುರಿತು ಚರ್ಚೆಯನ್ನು ಹಮ್ಮಿಕೊಳ್ಳಲಾಗಿತ್ತು.

ರಾಜ್ಯದಾದ್ಯಂತ ಸಾವಿರಾರು ವಿದ್ಯಾರ್ಥಿಗಳು ನಮ್ಮ ದೇಶದ ನವೋದಯ ಚಿಂತಕರು ಮತ್ತು ಮಹಾನ್ ಕ್ರಾಂತಿಕಾರಿಗಳ ಕನಸಿನ ಭಾರತವನ್ನು ನಿರ್ಮಿಸಲು, ಸ್ವಾತಂತ್ರ್ಯ ಸಂಗ್ರಾಮದ ರಾಜಿರಹಿತ ಕ್ರಾಂತಿಕಾರಿ ಹೋರಾಟಗಾರರ ಆದರ್ಶ, ಮೌಲ್ಯಗಳನ್ನು ಮೈಗೂಡಿಸಿಕೊಳ್ಳಲು, ಪ್ರತಿ ಅನ್ಯಾಯದ ವಿರುದ್ಧ ಹೋರಾಡುತ್ತ, ಕೊನೆಯವರೆಗೂ ಸತ್ಯದ ಪರ ನಿಲ್ಲುವ ವ್ಯಕ್ತಿತ್ವ ರೂಪಿಸಿಕೊಳ್ಳುವ ಜೊತೆಗೆ ಸಾರ್ವಜನಿಕ ಶಿಕ್ಷಣವನ್ನು ಬಲಪಡಿಸಲು, ಮಹಾನ್ ವಿಚಾರಧಾರೆ ಆಧಾರದ ಮೇಲೆ ರಾಜ್ಯದಾದ್ಯಂತ ಬಲಿಷ್ಠವಾದ ಹೋರಾಟವನ್ನು ಬೆಳೆಸುವ ಸಂಕಲ್ಪ ತೆಗೆದುಕೊಂಡರು.






# ಚುನಾವಣೆ: ಮತದ ವ್ಯಾಪಾರಿಗಳ ಉಚಿತ ಕೊಡುಗೆಗಳ ಹಬ್ಬ

ಇತ್ತೀಚೆಗೆ ಮುಕ್ತಾಯವಾದ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯ ಕೇವಲ ಒಂದು ದಿನ ಮೊದಲು ಬಿಜೆಪಿಯ ಪ್ರಮುಖ ನಾಯಕರೊಬ್ಬರು ಲಕ್ಷಾಂತರ ರೂಪಾಯಿಗಳೊಂದಿಗೆ ಸಾಕ್ಷಿಸಮೇತ ಸಿಕ್ಕಿಬಿದ್ದಿದ್ದರು. ಮತದಾರರಿಗೆ ಹಣ ನೀಡುತ್ತಿದ್ದರು ಎನ್ನಲಾದ ಅವರಿಂದ ಅಪಾರ ಪ್ರಮಾಣದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ಅದಕ್ಕಿಂತ ಒಂದು ದಿನ ಮುಂಚಿತವಾಗಿ, ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಅವರು ಗೋರೆಗಾಂವ್ ವಿಧಾನಸಭಾ ಕ್ಷೇತ್ರದಲ್ಲಿ ಮಹಾವಿಕಾಸ್ ಅಘಾಡಿ ಅಭ್ಯರ್ಥಿಯ ಪರ ಪ್ರಚಾರಕ್ಕೆ ಹೋಗುತ್ತಿದ್ದಾಗ ತಿರೋಡಾ ಹೆಲಿಪ್ಯಾಡ್‌ನಲ್ಲಿ ಅವರ ಹೆಲಿಕಾಪ್ಟರ್ ಮತ್ತು ಬ್ಯಾಗುಗಳನ್ನು ಚುನಾವಣಾ ಆಯೋಗದ ಅಧಿಕಾರಿಗಳು ಪರಿಶೀಲಿಸಿದರು. ನಂತರ, ಚುನಾವಣಾ ಆಯೋಗವು ಅಮರಾವತಿಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಬ್ಯಾಗ್ ಅನ್ನು ಸಹ ಪರಿಶೀಲಿಸಿತು. ಇಂಡಿಯಾ ಬ್ಲಾಕ್ ಪಕ್ಷಗಳು ಇದನ್ನು ಸೇಡಿನ ಕ್ರಮ ಎಂದು ಆರೋಪಿಸಿವೆ. ಶಿವಸೇನೆ (ಬಾಳಾ ಠಾಕ್ರೆ ಬಣ)ಯ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರ ಸಾಮಾನು ಸರಂಜಾಮುಗಳ ವಾಡಿಕೆಯ ತಪಾಸಣೆಗೆ ಸಂಬಂಧಿಸಿದ ರಾಜಕೀಯ ಗದ್ದಲದ ಒಂದು ದಿನದ ನಂತರ, ಪ್ರತಿಪಕ್ಷಗಳಿಗೆ ಕಿರುಕುಳ ನೀಡುತ್ತಿದೆ ಎಂಬ ಟೀಕೆಗಳನ್ನು ಎದುರಿಸುತ್ತಿರುವ ಚುನಾವಣಾ ಆಯೋಗವು, ಇದು ಒಂದು ಸಾಮಾನ್ಯ ಪ್ರಕ್ರಿಯೆ ಎಂದು ಬಿಂಬಿಸುವಂತಹ, ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರ ಬ್ಯಾಗುಗಳನ್ನು ಪರಿಶೀಲಿಸುವ ವೀಡಿಯೊವನ್ನು ಬಿಜೆಪಿ ಪೋಸ್ಟ್ ಮಾಡಿತ್ತು. ಈ ಶೋಧ ಕಾರ್ಯಾಚರಣೆಯು ಸಾರ್ವಜನಿಕರಿಗೆ ತೋರಿಸಲಿಕ್ಕಾಗಿಯೇ ನಡೆದಿದ್ದರೂ ಸಹ, ಚುನಾವಣೆಗಳಲ್ಲಿ ಸಾರ್ವಜನಿಕರ ಮತಗಳ ಖರೀದಿಯಲ್ಲಿ ಹಣವು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ಸೂಚಿಸುತ್ತದೆ. ಬೂರ್ಜ್ವಾ ಸಂಸದೀಯ ಪಕ್ಷಗಳಲ್ಲಿ ಅತ್ಯಂತ ಶ್ರೀಮಂತವಾಗಿರುವ ಬಿಜೆಪಿಯು ಈ ಅಸಹ್ಯ ಆಟದಲ್ಲಿ ಅಗ್ರಸ್ಥಾನದಲ್ಲಿದೆ. ಹಣಬಲದಿಂದ ಚುನಾವಣಾ ತೀರ್ಪು ನಿರ್ಧಾರಗೊಳ್ಳುತ್ತದೆ ಎಂಬುದನ್ನೂ ಸಹ ಇದು ಎತ್ತಿತೋರಿಸುತ್ತದೆ. ರಾಜಕೀಯ ಪ್ರಜ್ಞೆಯಿಲ್ಲದ ಜನರು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇರುವ ಬಡತನದಿಂದ ಬಳಲುತ್ತಿದ್ದು, ಇಂತಹ ನಗಣ್ಯ ಮೊತ್ತದ ಹಣದ ಆಮಿಷವನ್ನು ಮೀರಲು ಅವರಿಗೆ ಸಾಧ್ಯವಾಗುತ್ತಿಲ್ಲ.

ಮಾನವ ನೈತಿಕತೆಯನ್ನು ಕುಲಗೆಡಿಸಿ ಚುನಾವಣೆಯಲ್ಲಿ ಗೆಲ್ಲಲು ಈ ಮತ-ವ್ಯಾಪಾರಿಗಳು ಹಲವಾರು ಇತರ ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಹೇಗಾದರೂ ಮಾಡಿ ಅಧಿಕಾರವನ್ನು ಹಿಡಿಯಲೇಬೇಕೆಂಬ ಇವರ ದುರಾಸೆಯು, ಹಲವಾರು ಕೊರತೆಗಳಿಂದ ಬಳಲುತ್ತಿರುವ ಜನರಿಗೆ ಉಚಿತ ಕೊಡುಗೆಗಳನ್ನು ನೀಡುವ ಜನಪ್ರಿಯ ವಿಧಾನವನ್ನು ಕಂಡುಕೊಂಡಿದೆ. ಈ ವಿಧಾನವು ಒಂದು ದಶಕದಿಂದಲೂ ಚುನಾವಣಾ ಕಣದಲ್ಲಿ ಕಾಣಿಸಿಕೊಂಡಿದೆ. ತಮಿಳುನಾಡಿನ ಡಿಎಂಕೆ ಮತ್ತು ಎಐಎಡಿಎಂಕೆ, ದೆಹಲಿಯಲ್ಲಿ ಎಎಪಿ ಮತ್ತು ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಪಕ್ಷಗಳು ಈ ಉಚಿತ ಕೊಡುಗೆಗಳ ಆದ್ಯ ಪ್ರವರ್ತಕರು. ನಂತರ ಇತರ ಪಕ್ಷಗಳೂ ಸಹ ಈ ಮಾದರಿಯನ್ನು ಅನುಸರಿಸಿದವು. ಕೆಲವು ಆಕರ್ಷಕ ಹೆಸರುಗಳನ್ನು ಇಟ್ಟು ನಗದು ಅಥವಾ ವಸ್ತುವಿನ ರೂಪದಲ್ಲಿ ಅಂದರೆ ಸೈಕಲ್‌ಗಳು, ಟ್ಯಾಬ್‌ಗಳು, ಕಲರ್ ಟಿವಿಗಳು, ಹಾಲು ಕರೆಯುವ ಹಸುಗಳು, ಮಿಕ್ಸರ್-ಗ್ರೈಂಡರ್ ಮತ್ತು ತಾಳಿಗಾಗಿ ಚಿನ್ನ ವಿತರಣೆಯಂತಹವು ಒಂದಿಷ್ಟು ಉದಾಹರಣೆಗಳು. ಉತ್ತರ ಪ್ರದೇಶದಲ್ಲಿ 2022ರ ಚುನಾವಣೆಯ ಮೊದಲು ಸಮಾಜವಾದಿ ಪಕ್ಷವು ಪ್ರಾಥಮಿಕ ತರಗತಿಗಳಿಂದ ಸ್ನಾತಕೋತ್ತರ ಪದವಿಯವರೆಗೆ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣದ ಭರವಸೆ ನೀಡುವ 'ಕನ್ಯಾ ವಿದ್ಯಾಧನ್' ಯೋಜನೆಯನ್ನು ಘೋಷಿಸಿತ್ತು. ಇದರಡಿಯಲ್ಲಿ 12 ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಹುಡುಗಿಯರು ಒಂದು ಬಾರಿ 36,000 ರೂಪಾಯಿಗಳನ್ನು ಪಡೆಯುತ್ತಾರೆ. 12 ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಎಲ್ಲಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವುದಾಗಿಯೂ ಅದು ವಾಗ್ದಾನ ಮಾಡಿತು. ತಮಿಳುನಾಡಿನ "ಉಚಿತ ನೀಡುವ ಸಂಸ್ಕೃತಿ"ಯನ್ನು ಅನುಸರಿಸಿ, ಪಶ್ಚಿಮ ಬಂಗಾಳದ ಟಿಎಂಸಿಯ ಕನ್ಯಾಶ್ರೀ ಯೋಜನೆಯಡಿ ಬಡ ಮಹಿಳೆಯರಿಗೆ ಮಾಸಿಕ 1000 ರೂ. ನಗದು ಸಹಾಯಧನ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್, ರೂಪಶ್ರೀ ಯೋಜನೆಯಡಿ ಬಡ ಹೆಣ್ಣುಮಕ್ಕಳ ಮದುವೆಗೆ 25,000ರೂ., ಎಲ್ಲಾ ಧರ್ಮಗಳ ಅರ್ಚಕರಿಗೆ ಮಾಸಿಕ ನಗದು ಭತ್ಯೆ, ಮುಜಾಹಿಮ್‌ಗಳಿಗೆ (ಮಸೀದಿಗಳಲ್ಲಿ ಅಜಾನ್ ನೀಡುವವರು) ವಿಶೇಷ ಭತ್ಯೆ ಇತ್ಯಾದಿ ಉಚಿತ ಕೊಡುಗೆಗಳ ಸರಣಿ ಮುಂದುವರೆಯುತ್ತಿದೆ.

ಇದರಲ್ಲಿ ಕಾಂಗ್ರೆಸ್ ಕೂಡ ಹಿಂದೆ ಬಿದ್ದಿಲ್ಲ. ಕಳೆದ ಕರ್ನಾಟಕ ವಿಧಾನಸಭಾ ಚುನಾವಣೆಯ ಪೂರ್ವಭಾವಿಯಾಗಿ, ಕಾಂಗ್ರೆಸ್ ಪಕ್ಷವು ಪ್ರತಿ ಕುಟುಂಬದ ಮಹಿಳಾ ಮುಖ್ಯಸ್ಥರಿಗೆ ಮಾಸಿಕ 2,000 ರೂ., ಪ್ರತಿ ನಿರುದ್ಯೋಗಿ ಡಿಪ್ಲೋಮಾದಾರರಿಗೆ ತಿಂಗಳಿಗೆ 1,500 ರೂ. ಮತ್ತು ಪದವೀಧರರಿಗೆ ಮಾಸಿಕ 3,000 ರೂ.ಗಳನ್ನು ನೀಡುವುದಾಗಿ ಭರವಸೆ ನೀಡಿತ್ತು. ಪಕ್ಷದ ಚುನಾವಣಾ ಪೂರ್ವ ಭರವಸೆಗಳ ಪ್ರಕಾರ, ರಾಜ್ಯ ಸರ್ಕಾರವು ನಡೆಸುವ ಬಸ್ಸುಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಬಹುದು. ಅಲ್ಲದೆ, ಪ್ರತಿ ಕುಟುಂಬಕ್ಕೆ 200 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡಲಾಗುವುದು ಎಂದು ಭರವಸೆ ನೀಡಿತ್ತು. ಅದೇ ರೀತಿ ಮಹಾರಾಷ್ಟ್ರ ಚುನಾವಣೆಯಲ್ಲಿ, ಕಾಂಗ್ರೆಸ್-ಎನ್‌ಸಿಪಿ-ಶಿವಸೇನೆ ಮೈತ್ರಿಕೂಟವು ಪ್ರತಿ ಮಹಿಳೆಗೆ ಮಾಸಿಕ 3000 ರೂ. ಹಾಗೂ ಪ್ರತಿ ತಿಂಗಳು 10,00,000 ವಿದ್ಯಾರ್ಥಿಗಳಿಗೆ ತಲಾ ರೂ. 10,000 ನೀಡುವುದಾಗಿ ಭರವಸೆ ನೀಡಿತ್ತು. ಪ್ರಾಸಂಗಿಕವಾಗಿ, ತಮ್ಮನ್ನು ಮಾರ್ಕ್ಸ್‌ವಾದಿಗಳು-ಎಡಪಂಥೀಯರು ಎಂದು ಕರೆದುಕೊಳ್ಳುವ ಸಿಪಿಐ (ಎಂ) ಕೂಡ ಈ ಮಹಾ ವಿಕಾಸ್ ಅಘಾಡಿಯ ಭಾಗವಾಗಿದೆ.

ಮುಖ್ಯವಾಗಿ, ಎರಡು ವರ್ಷಗಳ ಹಿಂದೆ, ಪ್ರಧಾನಿ ಮೋದಿ, ಪ್ರತಿಪಕ್ಷಗಳ ಮೇಲೆ ಹರಿಹಾಯ್ದು ಉಚಿತ ಕೊಡುಗೆಗಳನ್ನು ನೀಡುವುದನ್ನು 'ರೇವ್ಡಿ (ಉತ್ತರ ಭಾರತದ ಜನಪ್ರಿಯ ಸಿಹಿ) ಸಂಸ್ಕೃತಿ' ಎಂದು ಖಂಡಿಸಿದರು. ಆದರೆ ನಂತರ ನಡೆದ ಚುನಾವಣೆಗಳಲ್ಲಿ ತನ್ನ ಮತಗಳನ್ನು ಭದ್ರಪಡಿಸಿಕೊಳ್ಳಲು ಬಿಜೆಪಿಯೇ ಈ 'ರೇವ್ಡಿ' ಸಂಸ್ಕೃತಿಗೆ ಮೊರೆಹೋಗಬೇಕಾಯಿತು. ಟಿಎಂಸಿಯ ಕನ್ಯಾಶ್ರೀ ಯೋಜನೆಯನ್ನು ಅನುಸರಿಸಿ, ಮಧ್ಯಪ್ರದೇಶದಲ್ಲಿ ಕಳೆದ ವಿಧಾನಸಭೆ ಚುನಾವಣೆಗೆ ಮೊದಲು ಬಿಜೆಪಿಯು 'ಲಾಡ್ಲಿ ಬಹೆನ್' ಯೋಜನೆಯನ್ನು ಘೋಷಿಸಿತು. ಅದರ ಅಡಿಯಲ್ಲಿ ಎಲ್ಲಾ ಹೆಣ್ಣುಮಕ್ಕಳಿಗೆ ರೂ. 1250 ಸ್ಟೈಪೆಂಡ್ ನೀಡಲಾಗುವುದು ಎಂದು ಹೇಳಿತು. ಕಳೆದ ಹರಿಯಾಣ ವಿಧಾನಸಭಾ ಚುನಾವಣೆಗೂ ಮುನ್ನ ಬಿಜೆಪಿಯು ಮಹಿಳೆಯರಿಗೆ ಮಾಸಿಕ 2,100 ರೂ., ಕಾಲೇಜು ವಿದ್ಯಾರ್ಥಿನಿಯರಿಗೆ ಸ್ಕೂಟಿ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಡಯಾಲಿಸಿಸ್ ನೀಡುವುದಾಗಿ ಘೋಷಿಸಿತು. ಮಹಾರಾಷ್ಟ್ರದಲ್ಲಿ, ಬಿಜೆಪಿ ಸಮ್ಮಿಶ್ರ ಸರ್ಕಾರವು ನಿರುದ್ಯೋಗಿ ಯುವಕರಿಗೆ ತಿಂಗಳಿಗೆ ರೂ. 10,000 ವರೆಗೆ ಆರ್ಥಿಕ ನೆರವು ನೀಡಲು ವಿನ್ಯಾಸಗೊಳಿಸಲಾದ 'ಲಾಡ್ಲಾ ಭಾಯಿ ಯೋಜನೆ'ಯನ್ನು ಪರಿಚಯಿಸಿದೆ. ಇತ್ತೀಚೆಗಷ್ಟೇ ಮಹಾರಾಷ್ಟ್ರದಲ್ಲಿ ನಡೆದ ವಿಧಾನಸಭಾ ಚುನಾವಣೆಯ ಮುನ್ನಾದಿನದಂದು ಬಿಜೆಪಿಯು ಮಹಿಳೆಯರ ಮಾಸಿಕ ಸ್ಟೈಪೆಂಡ್ ಅನ್ನು ತಲಾ 1500ರೂ. ನಿಂದ 2100ರೂ. ಗೆ ಹೆಚ್ಚಿಸುವುದಾಗಿ ಭರವಸೆ ನೀಡಿತ್ತು. ದೆಹಲಿಯಲ್ಲಿ ಎಎಪಿ ಸರ್ಕಾರವು ವಿದ್ಯುತ್ ಬಿಲ್ಲುಗಳ ಮೇಲೆ ಸಬ್ಸಿಡಿ ನೀಡಿದಾಗ, ಬಿಜೆಪಿ ಅದರ ವಿರುದ್ಧ ದನಿ ಎತ್ತಿತ್ತು. ಆದರೆ ಈ ವರ್ಷದ ಮಹಾರಾಷ್ಟ್ರದ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿಯು ವಿದ್ಯುತ್ ಬಿಲ್ಲುಗಳಲ್ಲಿ ಶೇಕಡ 30ರಷ್ಟು ಸಬ್ಸಿಡಿ ನೀಡುವುದಾಗಿ ಭರವಸೆ ನೀಡಿತ್ತು.

ಹಾಗಾಗಿ, ಉಚಿತ ಕೊಡುಗೆಗಳು ಹಾಗೂ ಹಣವನ್ನು ನೀಡಿ ಚುನಾವಣಾ ಕದನದಲ್ಲಿ ಲಾಭಾಂಶವನ್ನು ಪಡೆಯಲು ಎಲ್ಲಾ ಪಕ್ಷಗಳ ನಡುವೆ ತೀವ್ರ ಪೈಪೋಟಿ ಇದೆ. ಸಾರ್ವಜನಿಕ ಕಲ್ಯಾಣ ಯೋಜನೆಗಳು ಮತ್ತು ಉಚಿತಗಳು ಒಂದೇ ಎಂದು ತಪ್ಪಾಗಿ ಭಾವಿಸಿಕೊಳ್ಳಬಾರದು. ಒಂದು ನಾಗರಿಕ ಸರ್ಕಾರವು ಸಾರ್ವಜನಿಕ ಕಲ್ಯಾಣ ಯೋಜನೆಗಳನ್ನು ಜನರ ಸಾಮಾಜಿಕ-ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವ ಮೂಲಕ ಅವರ ಜೀವನಮಟ್ಟವನ್ನು ಹೆಚ್ಚಿಸಲು ವಿನ್ಯಾಸಗೊಳಿಸುತ್ತದೆ. ಆದರೆ ಈ ಉಚಿತ ಕೊಡುಗೆಗಳು ವಾಸ್ತವಿಕವಾಗಿ ಮತದಾರರ ಮತಗಳನ್ನು ಸೆಳೆಯಲು ಇರುವ ಲಂಚ ಅಥವಾ ಅನೈತಿಕ ಪ್ರಚೋದನೆಯನ್ನು ಹೋಲುತ್ತವೆ. ಎರಡನೆಯದಾಗಿ, ಉಚಿತಗಳಿಗೆ ಹಣ ಎಲ್ಲಿಂದ ಬರುತ್ತದೆ? ಜನರು ತಮ್ಮ ಆದಾಯವನ್ನು ಲೆಕ್ಕಿಸದೆ ನೇರ ಅಥವಾ ಪರೋಕ್ಷ ರೀತಿಯಿಂದ ಬೊಕ್ಕಸಕ್ಕೆ ಒದಗಿಸುವ ತೆರಿಗೆ ಆದಾಯದಿಂದ ಇದನ್ನು ಪಾವತಿಸಲಾಗುತ್ತದೆ. ಒಬ್ಬ ಬಡವನೂ ಯಾವುದೇ ಅಗತ್ಯ ವಸ್ತುವನ್ನು ಖರೀದಿಸಿದಾಗ, ಅವನು ಪಾವತಿಸುತ್ತಿರುವ ಬೆಲೆಯು ಪರೋಕ್ಷ ತೆರಿಗೆಯ ಭಾರೀ ಹೊರೆಯನ್ನು ಒಳಗೊಂಡಿರುತ್ತದೆ ಎಂದು ಅವನಿಗೆ ತಿಳಿದಿರುವುದಿಲ್ಲ. ಮೇಲಾಗಿ, ಇಂಧನ ಬೆಲೆಯ ವರ್ಧಿತ ಸುಂಕವನ್ನು ಅವನಿಂದ ವಸೂಲಿ ಮಾಡಲಾಗುತ್ತದೆ; ಹೇಗೆಂದರೆ, ಸಾರಿಗೆ ವೆಚ್ಚವು ಇಂಧನ ಬೆಲೆಯಲ್ಲಿಯೇ ಅಂತರ್ಗತವಾಗಿದೆ. ಆದ್ದರಿಂದ, ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಒಬ್ಬ ಬಡವನಿಗೆ ತಾನು ಪಡೆಯುವ ಉಚಿತ ಕೊಡುಗೆಗಳು ತನ್ನದೇ ಹಣದಿಂದ ಬಂದಿವೆ ಎಂಬುದು ಅರಿವಾಗುವುದಿಲ್ಲ. ಕ್ಷೀಣಿಸುತ್ತಿರುವ ಆದಾಯ, ಏರುತ್ತಿರುವ ಬೆಲೆಗಳು, ಹೆಚ್ಚುತ್ತಿರುವ ಶಿಕ್ಷಣ ವೆಚ್ಚ, ಕೈಗೆಟುಕಲಾರದ ಆರೋಗ್ಯ ಸೇವೆ, ಹೆಚ್ಚುತ್ತಿರುವ ವಿದ್ಯುತ್ ಸುಂಕ ಇತ್ಯಾದಿಗಳ ರೂಪದಲ್ಲಿ ಅವನನ್ನು ವಂಚಿಸಲಾಗುತ್ತಿದೆ. ಜನರ ಜೀವನದ ಎಲ್ಲಾ ದುಃಖ, ಸಂಕಟಗಳ ಮೂಲವಾಗಿರುವ ಬಂಡವಾಳಶಾಹಿ ವ್ಯವಸ್ಥೆಗೆ ಅಧೀನವಾಗಿರುವ ಯಾವುದೇ ಸರ್ಕಾರವು ತನ್ನ ಈ ದೋಚುವ ಕಾರ್ಯವನ್ನು ಮುಚ್ಚಿಕೊಳ್ಳಲು ಉಚಿತ ಕೊಡುಗೆಗಳ ಆಮಿಷದ ಮೂಲಕ ಅವರನ್ನು ವಂಚಿಸುತ್ತಿದೆ.

ಬಂಡವಾಳಶಾಹಿ ವ್ಯವಸ್ಥೆಯ ಕೆಸರಿನಿಂದ ಹೊರಬರಲು ಸಾಧ್ಯವಾಗದ ಜನರು, ಎರಡು ವಿಷಯಗಳ ನಡುವೆ ತುಲನೆ ಮಾಡುತ್ತಾರೆ, ಒಂದು, ಕೆಲವು ಉಚಿತ ಕೊಡುಗೆಗಳು ಸ್ವಲ್ಪ ಮಟ್ಟಿಗೆ ಸಹಾಯಕವಾಗಬಹುದು. ಇಲ್ಲವೇ, ಅವುಗಳನ್ನು ಜನರಲ್ಲಿ ಉತ್ಪಾದಕ ಪ್ರಕ್ರಿಯೆಯನ್ನು ಹೆಚ್ಚು ಮಾಡುವುದಕ್ಕಾಗಿ ವಿತರಣೆ ಮಾಡಬೇಕು ಎಂದು. ಜನರ ನೈತಿಕತೆಗೆ ಉಚಿತ ಕೊಡುಗೆಗಳು ದೊಡ್ಡ ಹಾನಿಯನ್ನುಂಟು ಮಾಡುತ್ತವೆ ಎಂಬ ಮುಖ್ಯ ಅಂಶದ ಕುರಿತು ಬೂರ್ಜ್ವಾ ಮಾಧ್ಯಮಗಳು ಮತ್ತು ಬೂರ್ಜ್ವಾ ಚಿಂತಕರು ಜನರಿಗೆ ಸರಿಯಾದ ಮಾಹಿತಿ ನೀಡದೇ ಅವರನ್ನು ಅಂಧಕಾರದಲ್ಲಿಡುತ್ತಾರೆ.

ಜನರು ಬಹುದೊಡ್ಡ ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಜಾಗತಿಕ ಹಸಿವಿನ ಸೂಚ್ಯಂಕ ಮತ್ತು ಇತರ ಮಾನವ ಸೂಚ್ಯಂಕಗಳು ನಿರ್ಗತಿಕತೆ ಹೆಚ್ಚುತ್ತಿರುವುದನ್ನು ಸೂಚಿಸುತ್ತವೆ. ಚುನಾವಣೆಯಲ್ಲಿ ಸ್ಪರ್ಧಿಸುವ ಬೂರ್ಜ್ವಾ ಪಕ್ಷಗಳು ಪರಸ್ಪರರ ವಿರುದ್ಧ ಟೀಕಾಸ್ತ್ರಗಳನ್ನು ಎಸೆಯುತ್ತವೆ. ಜನರಿಗೆ ಸೇವೆ ಸಲ್ಲಿಸಲು ಹಾಗೂ ಅವರ ಜ್ವಲಂತ ಸಮಸ್ಯೆಗಳನ್ನು ನಿವಾರಿಸಲು ತಾವು ಎಷ್ಟು ಉತ್ಸುಕರಾಗಿದ್ದಾರೆಂದು ನಟಿಸುತ್ತವೆ. ಆದರೆ ಚುನಾವಣೆಯ ನಂತರ ಯಾರು ಅಧಿಕಾರಕ್ಕೆ ಬಂದರೂ ಅದೇ ಜನವಿರೋಧಿ ನೀತಿಗಳನ್ನು ಅನುಸರಿಸುತ್ತವೆ. ಇದರಿಂದ ಚುನಾವಣಾ ಪೂರ್ವ ಭರವಸೆಗಳು ಸುಳ್ಳು ಎಂದು ಸಾಬೀತಾಗಿವೆ. ಮತಗಳಿಗೆ ಮಾನ್ಯತೆ ನೀಡುವ ಯಾವುದೇ ಪಕ್ಷಗಳು ಸರಿ-ತಪ್ಪು, ಅಸಲಿ-ನಕಲಿಗಳ ನಡುವಿನ ವ್ಯತ್ಯಾಸವನ್ನು ಗುರುತಿಸಲು ಜನಸಾಮಾನ್ಯರಿಗೆ ತಿಳುವಳಿಕೆ ನೀಡುವ ಯಾವುದೇ ಪ್ರಯತ್ನವನ್ನು ಮಾಡುವುದಿಲ್ಲ. ಹಾಗಾಗಿ ಚುನಾವಣೆಯ ಸಮಯದಲ್ಲಿ, ಸಂಕಷ್ಟದಲ್ಲಿರುವ ಜನರು ಕೈಗೆ ಸ್ವಲ್ಪ ಹಣ ಸಿಗುವ ಅವಕಾಶವನ್ನು ಕಂಡುಕೊಂಡಾಗ, ಅವರು ಅದನ್ನು ದೋಚುತ್ತಾರೆ ಮತ್ತು ಉಚಿತಗಳು ತಮ್ಮ ಸಂಕಟಗಳಿಗೆ ಸ್ವಲ್ಪ ಸಹಾಯವನ್ನು ತರುತ್ತವೆ ಎಂದು ಭಾವಿಸುತ್ತಾರೆ. 'ಮೋಡಿ' ಗೊಳಗಾಗಿರುವ, ತುಳಿತಕ್ಕೊಳಗಾದ ಜನಸಾಮಾನ್ಯರ ದುರಾದೃಷ್ಟತೆ ಮತ್ತು ಅಜ್ಞಾನದ ಮೇಲೆ ಈ ಸಂಸದೀಯ ಪಕ್ಷಗಳು ತಮ್ಮ ಬೇಳೆ ಬೇಯಿಸಿಕೊಳ್ಳುತ್ತವೆ.

ಈ ಪರಿಸ್ಥಿತಿಯಲ್ಲಿ ಶೋಷಣೆಗೊಳಗಾದ ಲಕ್ಷಾಂತರ ಜನರು ತಮ್ಮ ಬಿಕ್ಕಟ್ಟುಗಳನ್ನು ಪರಿಹರಿಸಲು ಯಾವುದೇ ಉಚಿತ ಕೊಡುಗೆಗಳಿಂದ ಸಾಧ್ಯವಿಲ್ಲ ಎಂಬ ಸತ್ಯವನ್ನು ಅರಿತುಕೊಳ್ಳಬೇಕಾಗುತ್ತದೆ. ಅವರು ರೂ. 2000/- ಉಚಿತವಾಗಿ ಸ್ವೀಕರಿಸುವ ಹೊತ್ತಿಗೇನೇ ಹಣದುಬ್ಬರವು ತುಂಬಾ ಹೆಚ್ಚಾಗುತ್ತದೆ. ಆದುದರಿಂದ ಜನರು ಪ್ರಜ್ಞಾಪೂರ್ವಕವಾಗಿ ಇಂತಹ ಉಚಿತ ಕೊಡುಗೆಗಳನ್ನು ನೀಡದ ಶಕ್ತಿ ಅಥವಾ ಪಕ್ಷಗಳ ಜೊತೆಗೆ ಒಗ್ಗೂಡುವವರೆಗೂ, ಮತದಿಂದ ಯಾವುದೇ ಶಾಶ್ವತ ಪರಿಹಾರ ಸಿಗುವುದಿಲ್ಲ ಮತ್ತು ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯುವುದರಲ್ಲಿ ವಿಮುಕ್ತಿ ಅಡಗಿದೆ ಎಂಬ ವಿಷಯವನ್ನು ಪ್ರಚಾರ ಮಾಡುವವರೆಗೂ ಅಂತಹ ಮೋಸ, ವಂಚನೆ ಕಡಿಮೆಯಾಗುವುದಿಲ್ಲ. ಉಚಿತ ಕೊಡುಗೆಗಳ ಹಿಂದೆ ಓಡುವುದು ಮರೀಚಿಕೆಗಳ ಬೆನ್ನಟ್ಟಿದಂತೆ.

...5ನೇ ಪುಟದಿಂದ

### ಸರ್ಕಾರ -ನ್ಯಾಯಾಂಗಗಳಲ್ಲಿ ಆಧ್ಯಾತ್ಮಿಕತೆಯ ಪ್ರವೇಶ:

## ನೈಜ ಧರ್ಮನಿರಪೇಕ್ಷತೆಯ ಮೇಲಿನ ಪ್ರಹಾರ!

ವಿಲಕ್ಷಣ ಸಿದ್ಧಾಂತ ಅಥವಾ ದೇವತಾಶಾಸ್ತ್ರದ ಸಮರ್ಥನೆಯನ್ನು ಈಗ ನ್ಯಾಯಾಂಗವು ಮಾಡುತ್ತಿದೆ. ಇದರಿಂದ ಸಾರ್ವಜನಿಕ ನೀತಿಗಳು ಮತ್ತು ಕಾನೂನಿನ ತೀರ್ಪುಗಳ ವಿವೇಚನೆಗೆ ಗ್ರಹಣ ಹಿಡಿಸಿದಂತಾಗಿದೆ. ಅದು ಸಾರ್ವಜನಿಕರಲ್ಲಿ ನಿಷ್ಪಕ್ಷಪಾತವಾಗಿ ಸೇವೆ ಸಲ್ಲಿಸುವ ಸಂಸ್ಥೆಗಳ ಬಗ್ಗೆ ನಂಬಿಕೆಯನ್ನು ದುರ್ಬಲಗೊಳಿಸಲು ಯತ್ನಿಸಿದೆ.

ಅವರ ಹೇಳಿಕೆಗಳ ಮೂಲಕ, ಪ್ರಧಾನಿ ಮೋದಿ ಮತ್ತು ಮಾಜಿ ಸಿಜೆಐ ಡಿ. ವೈ. ಚಂದ್ರಚೂಡ್‌ರವರು ಹೊಣೆಗಾರಿಕೆ ಮತ್ತು ನ್ಯಾಯ ತೀರ್ಮಾನವನ್ನು ಬದಿಗೊತ್ತಲು ಪ್ರಯತ್ನಿಸಿದ್ದಾರೆ.

ಈ ಅತೀಂದ್ರಿಯತಾವಾದವು ಒಂದು ಜ್ಞಾನೋದಯವೇನಲ್ಲ. ಬದಲಿಗೆ ಏಕಸ್ವಾಮ್ಯ ಬಂಡವಾಳಿಗರ ಹಿತಾಸಕ್ತಿಗೆ ತೊಡಿಸಿರುವ ವೈಚಾರಿಕ ಪರದೆಯಾಗಿದೆ. ಭಾರತದ ಭವಿಷ್ಯವು ವಿಚಾರಶೀಲತೆ, ಪಾರದರ್ಶಕತೆ ಮತ್ತು ಸ್ಪಷ್ಟವಾದ ನ್ಯಾಯತತ್ವಗಳ ಧರ್ಮಾತೀತ ಅಡಿಪಾಯವನ್ನು ಮರುಸ್ಥಾಪಿಸುವುದರ ಮೇಲೆ ಅವಲಂಬಿತವಾಗಿದೆ. ಕೇವಲ ವಿಚಾರಶೀಲ, ಉನ್ನತ ನೀತಿ-ನೈತಿಕತೆ, ಸಂಸ್ಕೃತಿಯ ಆಧಾರದಲ್ಲಿನ ಪ್ರಜ್ಞಾಪೂರ್ವಕ, ಒಗ್ಗಟ್ಟಿನ, ಸಂಘಟನಾತ್ಮಕ, ಸಾಮೂಹಿಕ ಚಳುವಳಿ ಒಂದೇ ಈ ಬಂಡವಾಳಶಾಹಿ ಪಿತೂರಿಯನ್ನು ವಿಫಲಗೊಳಿಸಲು ಸಾಧ್ಯ.

# 5 ಮತ್ತು 8 ನೇ ತರಗತಿಗಳಲ್ಲಿ ಪಾಸ್–ಫೇಲ್ ಪದ್ಧತಿ ಸ್ವಾಗತಾರ್ಹ!

**– ಎಐಡಿಎಸ್‌ಓ**

ದೇಶದಾದ್ಯಂತ 5ನೇ ತರಗತಿ ಮತ್ತು 8 ನೇ ತರಗತಿಗೆ ಪಾಸ್ – ಫೇಲ್ ವ್ಯವಸ್ಥೆಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಗೆಜೆಟ್ ಅಧಿಸೂಚನೆಯನ್ನು ಹೊರಡಿಸಿದ್ದು, ಇದು 'ಕಡ್ಡಾಯ ತೇರ್ಗಡೆ ನೀತಿ' ವಿರುದ್ಧ ನಡೆದ ಜನ ಚಳುವಳಿಗೆ ಸಿಕ್ಕ ಭಾಗಶಃ ಜಯವಾಗಿದೆ. ಎಲ್ಲರಿಗೂ ತಿಳಿದಿರುವ ಹಾಗೆ ಹಲವಾರು ವರ್ಷಗಳಿಂದ ಪಾಲಕರು, ಶಿಕ್ಷಕರು ಮತ್ತು ಶಿಕ್ಷಣ ಪ್ರೇಮಿಗಳು ಎಲ್ಲಾ ತರಗತಿಗಳ ವಿದ್ಯಾರ್ಥಿಗಳಿಗೆ ಪಾಸ್–ಫೇಲ್ ಪದ್ಧತಿಯನ್ನು ಪುನರಾರಂಭಿಸಲು ಎಐಡಿಎಸ್‌ಓ ನೇತೃತ್ವದಲ್ಲಿ ಚಳುವಳಿಯನ್ನು ಮುನ್ನಡೆಸುತ್ತಿದ್ದಾರೆ. ಈ ಆಂದೋಲನದ ಒತ್ತಡದಿಂದಾಗಿ, ಸರ್ಕಾರವು ಈಗ 5 ಮತ್ತು 8 ನೇ ತರಗತಿಗಳಿಗೆ ಪಾಸ್–ಫೇಲ್ ವ್ಯವಸ್ಥೆಯನ್ನು ಕಡ್ಡಾಯಗೊಳಿಸುವಂತೆ ತಿಳಿಸಿದೆ. ಆದಾಗ್ಯೂ, ಉಳಿದ ಎಲ್ಲಾ ತರಗತಿಗಳ ವಿದ್ಯಾರ್ಥಿಗಳಿಗೆ ಪಾಸ್–ಫೇಲ್ ಪದ್ಧತಿ ಯನ್ನು ಜಾರಿಗೊಳಿಸಿಲ್ಲ.

ಕಡ್ಡಾಯ ತೇರ್ಗಡೆ ಪದ್ಧತಿ ವಿರುದ್ಧದ ಆಂದೋಲನದ ಅವಿಭಾಜ್ಯ ಅಂಗವಾಗಿರುವ ಎಐಡಿಎಸ್‌ಓ, ಈ ನಿರ್ಧಾರವನ್ನು 'ಭಾಗಶಃ ವಿಜಯ' ಎಂದು ಪರಿಗಣಿಸುತ್ತಾ, ಎಲ್ಲಾ ತರಗತಿಗಳಿಗೆ ಕಡ್ಡಾಯ ತೇರ್ಗಡೆ ಪದ್ಧತಿ ನೀತಿಯನ್ನು ತೆಗೆದುಹಾಕಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಒತ್ತಾಯಿಸುತ್ತದೆ. ಹಾಗೆಯೇ ಶಿಕ್ಷಣ ನೀತಿಯಲ್ಲಿ ಬದಲಾವಣೆ ಮಾಡುವ ಮೊದಲು ಸರ್ಕಾರವು ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಅನುಸರಿಸಲು ಎಐಡಿಎಸ್‌ಓ ಕರ್ನಾಟಕ ರಾಜ್ಯ ಸಮಿತಿಯು ಆಗ್ರಹಿಸುತ್ತದೆ ಮತ್ತು ದೇಶದ ಎಲ್ಲಾ ಶಿಕ್ಷಣ ಪ್ರೇಮಿಗಳು ಸಹ 'ಪಾಸ್–ಫೇಲ್ ವ್ಯವಸ್ಥೆ' ಯನ್ನು ಪುನರಾರಂಭಿಸಲು ಹಾಗೂ ದೇಶದಲ್ಲಿ ಸಾರ್ವಜನಿಕ ಶಿಕ್ಷಣವನ್ನು ಬಲಪಡಿಸುವ ಹೋರಾಟಕ್ಕೆ ಮುಂದಾಗಬೇಕೆಂದು ಕರೆ ನೀಡುತ್ತದೆ.

# ಬೆಂಗಳೂರು: ವಿದ್ಯಾರ್ಥಿ ವೇತನಕ್ಕಾಗಿಯ ಪ್ರತಿಭಟನೆಯ ಮುಂಚೂಣಿಯಲ್ಲಿ ಎಐಡಿಎಸ್‌ಓ




**ಕರ್ನಾಟಕದಾದ್ಯಂತ MBA, MCA, MTech ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಎಸ್‌ಎಸ್‌ಪಿ ಸ್ಕಾಲರ್‌ಶಿಪ್‌ಅನ್ನು, ಈ ಕೂಡಲೇ ಜಾರಿಗೊಳಿಸಬೇಕೆಂದು ಆಗ್ರಹಿಸಿ, ನೂರಾರು ವಿದ್ಯಾರ್ಥಿಗಳು ಎಐಡಿಎಸ್‌ಓ ನೇತೃತ್ವದಲ್ಲಿ, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟಿಸಿದರು.**

...1ನೇ ಪುಟದಿಂದ

# ಎಐಯುಟಿಯುಸಿ ಅಖಿಲ ಭಾರತ ಸಮ್ಮೇಳನ...

ಸೆಕ್ರೆಟೇರಿಯೆಟ್ ಸದಸ್ಯರಾದ ಕಾ॥ ಅರುಣ್ ಸಿಂಗ್ ಮಾತನಾಡಿದರು. ಈ ಅಖಿಲ ಭಾರತ ನಾಯಕರು, ಬಂಡವಾಳಶಾಹಿ ವರ್ಗ ಮತ್ತದರ ಸರ್ಕಾರಗಳ, ಅದರಲ್ಲೂ ಕೇಂದ್ರ ಬಿಜೆಪಿ ಸರ್ಕಾರದಿಂದ ಹೆಚ್ಚುತ್ತಿರುವ ಕಾರ್ಮಿಕ ವರ್ಗದ ಮೇಲಿನ ದಾಳಿಯನ್ನು ಪ್ರತಿರೋಧಿಸುವಂತೆ ಕಾರ್ಮಿಕರಲ್ಲಿ ಮನವಿ ಮಾಡಿಕೊಂಡರು. ಹಾಗೆಯೇ ಕಾರ್ಮಿಕ ವರ್ಗದ ಅಂತರರಾಷ್ಟ್ರೀಯವಾದದ ಭಾಗವಾಗಿ ಜಾಗತಿಕವಾಗಿ ನಡೆಯುತ್ತಿರುವ ಕಾರ್ಮಿಕ ಹೋರಾಟಗಳಿಗೆ ತಮ್ಮ ಸೌಹಾರ್ದಯುತ ಬೆಂಬಲವನ್ನು ವ್ಯಕ್ತಪಡಿಸಿದರು. ಎಐಯುಟಿಯುಸಿ ಒರಿಸ್ಸಾ ರಾಜ್ಯ ಕಾರ್ಯದರ್ಶಿ ಕಾ.ಜಯಸೆನ್ ಮೆಹೆರ್ ಸ್ವಾಗತ ಭಾಷಣ ಮಾಡಿದರು.

ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ಕೆ. ರಾಧಾಕೃಷ್ಣ ಅವರು ಮಾತನಾಡುತ್ತಾ, ಬಂಡವಾಳಶಾಹಿ ವರ್ಗ ಮತ್ತದರ ಸರ್ಕಾರಗಳ ಫ್ಯಾಸೀವಾದಿ ಕುತಂತ್ರಗಳ ಬಗ್ಗೆ ಎಚ್ಚರಿಸುತ್ತಾ, ಮಾನವತೆಯನ್ನು ಉಳಿಸಲು, ಕಾರ್ಮಿಕ ವಿರೋಧಿ, ಜನ ವಿರೋಧಿಯಾದ ಇಂತಹ ಕುಟಿಲ ಯೋಜನೆಗಳಿಗೆ ಪ್ರಬಲವಾಗಿ ತಡೆಯೊಡ್ಡುವಂತೆ ಕಾರ್ಮಿಕರಿಗೆ ಕರೆ ನೀಡಿದರು. ಬಹಿರಂಗ ಅಧಿವೇಶನವು ಅಂತರರಾಷ್ಟ್ರೀಯ ಗೀತೆಯೊಂದಿಗೆ ಮುಕ್ತಾಯಗೊಂಡಿತು.

ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮ ಅದೇ ದಿನ ಸಂಜೆ ರಾಯಲ್ ರಿಸಾರ್ಟ್ ಆವರಣದಲ್ಲಿ ನಡೆಯಿತು. ಈ ಅಧಿವೇಶನದ ಅಧ್ಯಕ್ಷತೆಯನ್ನು ಕಾ॥ ಕೆ. ರಾಧಾಕೃಷ್ಣ ಅವರು ವಹಿಸಿದ್ದರು. ಡಬ್ಲ್ಯುಎಫ್‌ಟಿಯು ಅಧ್ಯಕ್ಷರಾದ ಕಾ॥ ಮೈಕೆಲ್ ಅವರು ಮಾತನಾಡುತ್ತಾ, ಉದ್ಯೋಗಿ ಯುವಕರನ್ನು ವೈಚಾರಿಕವಾಗಿ, ಸಂಘಟನಾತ್ಮಕವಾಗಿ ಸಜ್ಜುಗೊಳಿಸಲು ಹಾಗೂ ಕಾರ್ಮಿಕ ವರ್ಗಕ್ಕೆ ಸೇರಿದ ಮಹಿಳೆಯರ ಸಂಘಟನೆಯನ್ನು ಬಲಿಷ್ಠವಾಗಿ ಕಟ್ಟಲು ಒತ್ತು ನೀಡುವಂತೆ ಮನವಿ ಮಾಡಿದರು. ಶೋಷಣಾ ರಹಿತ ಮಾನವ ಸಮಾಜ ಸ್ಥಾಪಿಸುವ ಅಂತಿಮ ಗುರಿಯೊಂದಿಗೆ ಕಾರ್ಮಿಕ ವರ್ಗದ ಹೋರಾಟಗಳನ್ನು ಅಡೆ ತಡೆಯಿಲ್ಲದೆ ಮುನ್ನಡೆಸಬೇಕು ಎಂದು ಕರೆ ನೀಡಿದರು. ಪ್ಯಾಲೇಸ್ಟೀನ್ ಕಾರ್ಮಿಕ ಸಂಘಟನೆಯ ಪ್ರತಿನಿಧಿ ಕಾ.ಹುಸೇನ್ ಕರಸ್ಬಾ ಅವರು ಹೋರಾಟ ನಿರತ ಪ್ಯಾಲೇಸ್ಟೀನ್ ಜನರಿಗೆ ಎಐಯುಟಿಯುಸಿ ನೀಡುತ್ತಿರುವ ನಿರಂತರ ಬೆಂಬಲಕ್ಕಾಗಿ ಕೃತಜ್ಞತೆಯನ್ನು




**ಬಹಿರಂಗ ಸಭೆಯನ್ನುದ್ದೇಶಿಸಿ ಅಖಿಲ ಭಾರತ ಅಧ್ಯಕ್ಷರಾದ ಕಾ॥ ಕೆ. ರಾಧಾಕೃಷ್ಣರವರು ಮಾತನಾಡುತ್ತಿರುವುದು. ವೇದಿಕೆಯ ಮೇಲೆ ಡಬ್ಲ್ಯುಎಫ್‌ಟಿಯುನ ಅಧ್ಯಕ್ಷರಾದ ಕಾ॥ ಮೈಕೆಲ್ ಹಾಗೂ ಪಾಲೆಸ್ಟೀನ್, ನೇಪಾಳ ಮತ್ತು ಬಂಗ್ಲಾದೇಶದ ಕಾರ್ಮಿಕ ಮುಖಂಡರು ಉಪಸ್ಥಿತರಿದ್ದರು**

ಸಲ್ಲಿಸಿದರು. ಆಲ್ ನೇಪಾಳ್ ಟ್ರೇಡ್ ಯುನಿಯನ್ ಫೆಡರೇಷನ್‌ನ ಕಾ॥ ಓಪೇಂದ್ರ ಕುಮಾರ್ ಹಾಗೂ ಕಾ.ಟಿಕರಾಂ ಪರಸಾಯ್, ಬಾಂಗ್ಲಾದೇಶ್ ವರ್ಕರ್ಸ್ ಅಂಡ್ ಎಂಪ್ಲಾಯೀಸ್ ಫೆಡರೇಷನ್‌ನ ಕಾ॥ ಶೇಖರ್ ರಾಯ್ ಈ ಅಧಿವೇಶನದಲ್ಲಿ ಉಪಸ್ಥಿತರಿದ್ದು, ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಮ್ಮೇಳನಕ್ಕೆ ಆಗಮಿಸಿದ್ದ ಇತರೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳಾದ ಎಐಟಿಯುಸಿ, ಸಿಐಟಿಯು, ಎಐಸಿಸಿಟಿಯು ಹಾಗೂ ಟಿಯುಸಿಸಿ ಪ್ರತಿನಿಧಿಗಳು ಅಧಿವೇಶನದಲ್ಲಿ ಭಾಗವಹಿಸಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿಗಳಾದ ಕಾ॥ ಶಂಕರ್ ದಾಸ್‌ಗುಪ್ತಾ ವಿದೇಶದ ಸೋದರ ಕಾರ್ಮಿಕ ಸಂಘಟನೆಗಳ ಸಂದೇಶವನ್ನು ಓದಿದರು. ದಕ್ಷಿಣ ಆಫ್ರಿಕಾದ ಕೊಸಾಟು (COSATU), ಬಾಂಗ್ಲಾದೇಶದ BWEF, ಚೀನಾದ ACFTU, ಜಾಂಬಿಯಾದ FFTUZ, ಮೊರೇಷಿಯಸ್‌ನ ಕಾರ್ಮಿಕ ಸಂಘಟನೆ, ನ್ಯೂಜಿಲ್ಯಾಂಡ್‌ನ NPFU ಹಾಗೂ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (UIS)ಗಳ ಸಂದೇಶಗಳನ್ನು ಓದಿದರು.

## ಪ್ರತಿನಿಧಿ ಅಧಿವೇಶನ

ಡಿಸೆಂಬರ್ 16 ಹಾಗೂ 17ರಂದು ಪ್ರತಿನಿಧಿ ಅಧಿವೇಶನ ರಾಯಲ್ ರಿಸಾರ್ಟ್ ಆವರಣದಲ್ಲಿ ನಡೆಯಿತು. ಅಖಿಲ ಭಾರತ ಅಧ್ಯಕ್ಷರು ಧ್ವಜ ಹಾರಿಸುವ ಮೂಲಕ ಚಾಲನೆ ನೀಡಿದರು. ಇದಾದ ನಂತರ ಕಾರ್ಮಿಕ ಹೋರಾಟದಲ್ಲಿ ಮಡಿದ ಹುತಾತ್ಮರಿಗೆ ಮಾಲಾರ್ಪಣೆ ಮಾಡಲಾಯಿತು. ಪ್ರತಿನಿಧಿ ಅಧಿವೇಶನದಲ್ಲಿ ಸುಮಾರು 24 ರಾಜ್ಯಗಳ 1105 ಪ್ರತಿನಿಧಿಗಳು ಭಾಗವಹಿಸಿದ್ದರು. ಅಧಿವೇಶನದ ಪ್ರಾರಂಭದಲ್ಲಿ, 21ನೇ ಅಖಿಲ ಭಾರತ ಸಮ್ಮೇಳನದ ನಂತರ ಮಡಿದ ಎಲ್ಲಾ ಅಖಿಲ ಭಾರತ ನಾಯಕರಿಗೆ, ಕಾರ್ಯಕಾರಿ ಸಮಿತಿ ಹಾಗೂ ಕೌನ್ಸಿಲ್ ಸದಸ್ಯರಿಗೆ ಸಂತಾಪ ಸೂಚಿಸಲಾಯಿತು. ಅಲ್ಲದೆ ಜಗತ್ತಿನಾದ್ಯಂತ ಬಂಡವಾಳವಾದ–ಸಾಮ್ರಾಜ್ಯವಾದದ ವಿರುದ್ಧ ಹೋರಾಟದಲ್ಲಿ ಮಡಿದವರಿಗೂ ಗೌರವ ಸಲ್ಲಿಸಲಾಯಿತು.

ನಂತರ ಪ್ರತಿನಿಧಿಗಳು ಮುಖ್ಯ ಗೊತ್ತುವಳಿ, ಪ್ರಧಾನ ಕಾರ್ಯದರ್ಶಿಗಳ ರಾಜಕೀಯ–ಸಂಘಟನಾತ್ಮಕ ವರದಿ, ಎಐಯುಟಿಯುಸಿಯ ಸಂವಿಧಾನದ ತಿದ್ದುಪಡಿಗಳು, ಜೊತೆಗೆ 13 ಇತರೆ ಗೊತ್ತುವಳಿಗಳ ಮೇಲೆ ವಿಸ್ತೃತವಾಗಿ ಚರ್ಚೆ ನಡೆಸಿದರು. ಗೊತ್ತುವಳಿಗಳು, ವರದಿ ಹಾಗೂ ಎಐಯುಟಿಯುಸಿ ಸಂವಿಧಾನದ ತಿದ್ದುಪಡಿ, ಕೆಲವೊಂದು ತಿದ್ದುಪಡಿಗಳೊಂದಿಗೆ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು.

ಈ ಪ್ರತಿನಿಧಿ ಅಧಿವೇಶನದಲ್ಲಿ ನೂತನ ಅಖಿಲ ಭಾರತ ಸಮಿತಿಯನ್ನು ಚುನಾಯಿಸಲಾಯಿತು. ಅಖಿಲ ಭಾರತ ಅಧ್ಯಕ್ಷರಾಗಿ ಕಾ॥ ಕೆ. ರಾಧಾಕೃಷ್ಣ, ಪ್ರಧಾನ ಕಾರ್ಯದರ್ಶಿಗಳಾಗಿ ಕಾ॥ ಶಂಕರ್ ದಾಸ್‌ಗುಪ್ತಾ ಒಳಗೊಂಡಂತೆ 193 ಸದಸ್ಯರ ಅಖಿಲ ಭಾರತ ಸಮಿತಿಯನ್ನು ಚುನಾಯಿಸಲಾಯಿತು. ಇದರಲ್ಲಿ 96 ಕಾರ್ಯಕಾರಿ ಸಮಿತಿ ಸದಸ್ಯರು, 24 ಪದಾಧಿಕಾರಿಗಳು, ಹಾಗೂ 96 ಕೌನ್ಸಿಲ್ ಸದಸ್ಯರಿದ್ದಾರೆ.

ಸಮ್ಮೇಳನದ ಸಮಾರೋಪ ಅಧಿವೇಶನದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾ॥ ಪ್ರವಾಶ್ ಘೋಷ್ ಅವರು, ಮರಣಾಸನ್ನ ಬಂಡವಾಳಶಾಹಿ ವ್ಯವಸ್ಥೆಯು ಗರಿಷ್ಠ ಲಾಭಕ್ಕಾಗಿ ಕಾರ್ಮಿಕರ ರಕ್ತ ಹೀರುತ್ತಿರುವಾಗ, ಸಾಮಾಜಿಕ–ನೈತಿಕ ಹಂದರದ ಮೇಲೆ ದಾಳಿ ನಡೆಸಿ, ಮನುಷ್ಯತ್ವವನ್ನೇ ನಾಶ ಮಾಡುತ್ತಿರುವಂತಹ ಇಂತಹ ಗಂಭೀರವಾದ ಸಂದರ್ಭದಲ್ಲಿ ಎಐಯುಟಿಯುಸಿ ನಾಯಕರ, ಸಂಘಟನಾಕಾರರ ಹಾಗೂ ಕಾರ್ಯಕರ್ತರ ಅತ್ಯಾವಶ್ಯಕ ಜವಾಬ್ದಾರಿಯ ಕುರಿತು ಚರ್ಚಿಸಿದರು. ಕಾ॥ ಪ್ರವಾಶ್ ಘೋಷ್ ಅವರು ಮಾತನಾಡುತ್ತಾ, ಪ್ರತಿಗಾಮಿಯಾಗಿರುವ ಬಂಡವಾಳಶಾಹಿ ವ್ಯವಸ್ಥೆಯ ಎಲ್ಲಾ ರೀತಿಯ ದಾಳಿಗಳ ಕಬಂಧ ಬಾಹುಗಳಿಂದ ಮುಕ್ತವಾಗುವುದಷ್ಟೇ ಅಲ್ಲದೆ ಇಡೀ ಮಾನವ ಸಮಾಜವನ್ನು ಮಾನವನಿಂದ ಮಾನವನ ಶೋಷಣೆಯಿಂದ ವಿಮುಕ್ತಿಗೊಳಿಸುವ ಐತಿಹಾಸಿಕ ಜವಾಬ್ದಾರಿ ಕಾರ್ಮಿಕ ವರ್ಗದ ಮೇಲಿದೆ, ಎಂದರು. ಈ ಐತಿಹಾಸಿಕ ಜವಾಬ್ದಾರಿಯನ್ನು ಪೂರೈಸಲು ಕ್ರಾಂತಿಕಾರಿ ಕಾರ್ಮಿಕ ಸಂಘಟನೆಯ ಕಾರ್ಯಕರ್ತರು ಕಾರ್ಮಿಕ ವರ್ಗದ ದೃಷ್ಟಿಕೋನ ಹಾಗೂ ಕಾರ್ಮಿಕ ವರ್ಗದ ಸಂಸ್ಕೃತಿಯಿಂದ ತಮ್ಮನ್ನೇ ಸಜ್ಜಿತಗೊಳಿಸಿಕೊಳ್ಳಬೇಕು. ಇದು ಈ ಘಳಿಗೆಯ ಅವಶ್ಯಕತೆ ಎಂದರು.

ಎಐಯುಟಿಯುಸಿಯ ಹಿಂದಿನ ಅಧ್ಯಕ್ಷರಾಗಿದ್ದ ಕಾ॥ ಶಿವದಾಸ್ ಘೋಷ್ ಅವರ ಮೇಲಿನ ಗೀತೆ ಹಾಗೂ ಅಂತರರಾಷ್ಟ್ರೀಯ ಗೀತೆಯೊಂದಿಗೆ ಸಮ್ಮೇಳನವು ಕೊನೆಗೊಂಡಿತು.

# ಎಐಡಿಎಸ್‌ಓ ಸಂಘಟಿತ ರಾಜನೈತಿಕ ಶಾಲೆ: 'ನೊಂದವರ ಪರ ದನಿಯಾಗುವ ಹೋರಾಟದ ರಾಜಕೀಯವನ್ನು ಎತ್ತಿ ಹಿಡಿಯಿರಿ!'

## – ಕಾಮ್ರೇಡ್ ಕೆ. ಉಮಾ

ಮೈಸೂರಿನ ನೃಪತುಂಗ ಶಾಲೆಯಲ್ಲಿ ಡಿಸೆಂಬರ್ 14 ಹಾಗೂ 15 ನಡೆದ ಎಐಡಿಎಸ್‌ಓ ರಾಜ್ಯ ಮಟ್ಟದ ಕಾರ್ಯಕರ್ತರ ರಾಜನೈತಿಕ ಶಾಲೆ ಉದ್ದೇಶಿಸಿ ಮಾತನಾಡಿದ ಎಸ್‌ಯುಸಿಐ– ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸದಸ್ಯರು ಹಾಗೂ ಕರ್ನಾಟಕ ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ ಉಮಾ, ಹೋರಾಟದ ರಾಜಕೀಯ ಸೇರುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು. "ಜೀವನದ ಎಲ್ಲಾ ಅಂಶಗಳನ್ನು ನಿರ್ದೇಶಿಸುವುದೇ ರಾಜಕೀಯ. ಯಾರೂ ಸಹ ರಾಜಕೀಯದಿಂದ ತಟಸ್ಥವಾಗಿರಲು ಸಾಧ್ಯವಿಲ್ಲ. ರಾಜಕೀಯದಲ್ಲಿ ಎರಡು ರೀತಿಯ ಬಣಗಳಿದೆ. ಒಂದು ನ್ಯಾಯದ ಪರ ಇರುವ ರಾಜಕೀಯ. ಇನ್ನೊಂದು ಅನ್ಯಾಯದ ಪರವಾದ ರಾಜಕೀಯ. ನಮ್ಮ ಸುತ್ತಮುತ್ತಲಿನ ಶಿಕ್ಷಕರು, ಪೋಷಕರು, ಸಂಬಂಧಿಗಳು ಎಲ್ಲರೂ ಸೇರಿ ವಿದ್ಯಾರ್ಥಿಗಳ ಪರಮೋಚ್ಚ ಜವಾಬ್ದಾರಿ ಎಂದರೆ ಓದು ಎನ್ನುತ್ತಾರೆ. ಇವರು ವಿದ್ಯಾರ್ಥಿಗಳು ಹೋರಾಟಗಳನ್ನು ಕಟ್ಟುವುದನ್ನು ತಪ್ಪಿಸಲು ಹೀಗೆ ಹೇಳುತ್ತಿರುತ್ತಾರೆ. ಆದರೆ ಇಂದಿನ ಸಮಾಜದಲ್ಲಿ ನಿರುದ್ಯೋಗ ತಾಂಡವವಾಡುತ್ತಿದೆ. ಎಷ್ಟೋ ಜನ ಇರುವ ಉದ್ಯೋಗವನ್ನು ಸಹ ಕಳೆದುಕೊಳ್ಳುತ್ತಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ 4 ಲಕ್ಷಕ್ಕೂ ಹೆಚ್ಚು ಜನ ಆತ್ಮಹತ್ಯೆಗೆ ಶರಣಾಗಿದ್ದಾರೆ. 20 ಕೋಟಿ ಜನ ಹಸಿವೆಯಿಂದ ನರಳುತ್ತಿದ್ದಾರೆ. 4500 ಮಕ್ಕಳು ಅಪೌಷ್ಟಿಕತೆಗೆ ಬಲಿಯಾಗುತ್ತಿದ್ದಾರೆ. 7000 ಜನರು ಪ್ರತಿದಿನ ಹಸಿವೆಯಿಂದ ಸಾಯುತ್ತಿದ್ದಾರೆ. ಜೊತೆಗೆ ನಮ್ಮ ದೇಶದ ನ್ಯಾಯಾಂಗ ವ್ಯವಸ್ಥೆ ಕೂಡಾ ನ್ಯಾಯ ಎತ್ತಿ ಹಿಡಿಯುತ್ತಿಲ್ಲ ಎನ್ನುವುದಕ್ಕೆ ಉದಾಹರಣೆ ಬಿಲ್ಕಿಸ್ ಬಾನು, ಬನ್ವಾರಿ, ಆರ್‌ಜಿ ಕರ್ ಪ್ರಕರಣಗಳಲ್ಲಿಯೇ ಸಾಬೀತಾಗುತ್ತದೆ. ಇಂತಹ ಪ್ರಕ್ಷುಬ್ಧ ಪರಿಸ್ಥಿತಿಯ ನಡುವೆ, ಇತಿಹಾಸದ ಉದ್ದಗಲಕ್ಕೂ ಸಮಾಜದ ಬದಲಾವಣೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿರುವ ವಿದ್ಯಾರ್ಥಿ–ಯುವಜನರು ತಮ್ಮ ಜೀವನವನ್ನಷ್ಟೇ ನೋಡಿಕೊಂಡರೆ, ಸಾಮಾಜಿಕ ಹೋರಾಟದಿಂದ ವಿಮುಖರಾದರೆ, ಅದು ನಾವು ಎಲ್ಲಾ ಮಹಾನ್ ವ್ಯಕ್ತಿಗಳಿಗೆ ಮಾಡುವ ದ್ರೋಹವಾಗುತ್ತದೆ." ಎಂದು ವಿವರಿಸಿದರು.

"ಶರತ್ ಚಂದ್ರ , ಚಿತ್ತರಂಜನ್ ದಾಸ್, ರವೀಂದ್ರನಾಥ ಟಾಕೂರ್ ಹಾಗೂ ನೇತಾಜಿ ಸುಭಾಷ್ ಚಂದ್ರ, ಹೀಗೆ ಅನೇಕ ಮಹಾನ್ ವ್ಯಕ್ತಿಗಳ ಅಭಿಪ್ರಾಯದಂತೆ ಕೇವಲ ಓದುವುದಾಗಲಿ, ಪದಕಗಳನ್ನು ಪಡೆದುಕೊಳ್ಳುವುದಾಗಲಿ ವಿದ್ಯಾರ್ಥಿ ಜೀವನದ ಪರಮೋಚ್ಚ ಗುರಿಯಲ್ಲ. ಚಾರಿತ್ರ್ಯ ಗಳಿಸಿಕೊಳ್ಳುವುದು ಶಿಕ್ಷಣದ ಗುರಿ. ಅನ್ಯಾಯದ ವಿರುದ್ಧ ಧ್ವನಿ ಎತ್ತುವುದನ್ನು ಕಲಿಸುವುದೇ ಶಿಕ್ಷಣದ ಗುರಿ. ಹೀಗಾಗಿ ಜನ ಹೋರಾಟದ ರಾಜಕೀಯದಲ್ಲಿ ಪಾಲ್ಗೊಳ್ಳುವುದು ವಿದ್ಯಾರ್ಥಿಗಳ ಜವಾಬ್ದಾರಿ. ಅಂತಹ ಹೋರಾಟವನ್ನು ಎಐಡಿಎಸ್‌ಓ ದೇಶದಾದ್ಯಂತ ಬೆಳೆಸುತ್ತಿದೆ. ಎನ್‌ಎಪಿ 2020 ರ ವಿರುದ್ಧ, ಸಾರ್ವಜನಿಕ ಶಿಕ್ಷಣ ಉಳಿಸಲು, ಶಿಕ್ಷಣ–ಮಾನವತೆ–ಸಂಸ್ಕೃತಿ ಕಾಪಾಡಲು ನಡೆಯುತ್ತಿರುವ ಚಳುವಳಿಯಲ್ಲಿ ಎಐಡಿಎಸ್‌ಓ ಮುಂಚೂಣಿಯಲ್ಲಿದೆ. ನೀವು, ಭಗತ್ ಸಿಂಗ್, ನೇತಾಜಿಯವರ ನೈಜ ಅನುಯಾಯಿಗಳಾಗಲು ಎಐಡಿಎಸ್‌ಓ ಸಂಘಟನೆಯನ್ನು ಬಲಪಡಿಸಬೇಕು. ಈ ನೆಲದ ಓರ್ವ ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್‌ರವರ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಹೊಸ ಮನುಷ್ಯರಾಗಬೇಕು." ಎಂದು ಕರೆ ನೀಡಿದರು. ಎಐಡಿಎಸ್‌ಓ ರಾಜ್ಯ ಉಪಾಧ್ಯಕ್ಷರಾದ ಕಾ.ಚಂದ್ರಕಲಾ ಅಧ್ಯಕ್ಷತೆ ವಹಿಸಿದ್ದರು.

### ಮಾರ್ಕ್ಸ್‌ವಾದ ಒಂದು ವಿಜ್ಞಾನ ಕಾ॥ ಅಶ್ವಿನಿ. ಕೆ. ಎಸ್.

ಅಧ್ಯಯನ ಶಿಬಿರದ ಮೊದಲನೇ ಗೋಷ್ಠಿಯಲ್ಲಿ "ಮಾರ್ಕ್ಸ್‌ವಾದ ಮತ್ತು ಮಾನವ ಸಮಾಜದ ಬೆಳವಣಿಗೆ" ಕುರಿತು, ಎಐಡಿಎಸ್‌ಓ ರಾಜ್ಯಾಧ್ಯಕ್ಷರಾದ ಅಶ್ವಿನಿ ಕೆ. ಎಸ್. ಮಾತನಾಡಿದರು. "ಮಾರ್ಕ್ಸ್‌ವಾದವು, ವೈಜ್ಞಾನಿಕವಾಗಿ ಸತ್ಯ ಶೋಧನೆ ಮಾಡುವ ತತ್ವಜ್ಞಾನವಾಗಿದ್ದು, ದ್ವಂದ್ವಾತ್ಮಕ ವಸ್ತುವಾದದ ಆಧಾರದ ಮೇಲೆ ನಿಂತಿರುವ ವಿಜ್ಞಾನಗಳ ವಿಜ್ಞಾನವಾಗಿದೆ. ಮಾನವನಿಂದ ಮಾನವನ ಮೇಲಿನ ನಡೆಯುತ್ತಿರುವ ಶೋಷಣೆಯ ವಿರುದ್ಧ ಹೋರಾಡುವ ಅಸ್ತ್ರ" ಎಂದು ಹೇಳಿದರು. ಮಾನವ ಸಮಾಜದ ಉಗಮದ ಬಗ್ಗೆ, ಆದಿ ಸಮತಾವಾದಿ ವ್ಯವಸ್ಥೆಯಿಂದ ಗುಲಾಮಗಿರಿ – ಊಳಿಗಮಾನ್ಯ ವ್ಯವಸ್ಥೆ ಹಾಗೂ ಪ್ರಸ್ತುತ ನಾವು ಬದುಕುತ್ತಿರುವ ಬಂಡವಾಳಶಾಹಿ ವ್ಯವಸ್ಥೆ, ಸಮಾಜವಾದಿ ಕ್ರಾಂತಿಯ ಕುರಿತು ಅವರು ವಿವರವಾಗಿ ತಿಳಿಸಿದರು. ಖಾಸಗಿ ಆಸ್ತಿ ಹಾಗೂ ವರ್ಗವಿಭಜನೆಯ ಮೂಲ ಕಾರಣಗಳನ್ನು ತೆರೆದಿಟ್ಟರು. ಮಾರ್ಕ್ಸ್‌ವಾದವು ತೋರಿಸುವುದೇನೆಂದರೆ ಇಂದಿನ ಸಾಮಾಜಿಕ ಸಮಸ್ಯೆಗಳಾದ ಶಿಕ್ಷಣದ ವ್ಯಾಪಾರೀಕರಣ, ನಿರುದ್ಯೋಗ, ಬಡತನ, ಹೆಣ್ಣುಮಕ್ಕಳ ಮೇಲಿನ ಅಪರಾಧಗಳು ಮುಂತಾದ ಸಮಸ್ಯೆಗಳಿಗೆ ಬಂಡವಾಳಶಾಹಿ ವ್ಯವಸ್ಥೆಯೇ ಕಾರಣ. ಇವುಗಳ ವಿರುದ್ಧ ಬಲಿಷ್ಠ ಹೋರಾಟಗಳನ್ನು ಬೆಳೆಸಬೇಕೆಂದರೆ ಈ ತತ್ವಜ್ಞಾನವನ್ನು ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ ಎಂದವರು ಮನದಟ್ಟು ಮಾಡಿಸಿದರು. ಈ ಗೋಷ್ಠಿಯ ಅಧ್ಯಕ್ಷತೆಯನ್ನು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಕಾ॥ ಕಲ್ಯಾಣ್ ವಹಿಸಿದ್ದರು.




ಶಿಬಿರದಲ್ಲಿ ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿ ಕಾ॥ ಕೆ.ಉಮಾ ಅವರು ಮಾತನಾಡಿದರು. ಎಐಡಿಎಸ್‌ಓ ರಾಜ್ಯ ನಾಯಕರು ವೇದಿಕೆಯ ಮೇಲಿದ್ದರು

### ಮಹಾನ್ ಸಾಹಿತಿ ಶರತ್ ಚಂದ್ರರು ಇಂದಿಗೂ ಪ್ರಸ್ತುತ- ಕಾ॥ ಅಜಯ್ ಕಾಮತ್

ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿಗಳಾದ ಕಾ. ಅಜಯ್ ಕಾಮತ್, ಸ್ವಾತಂತ್ರ್ಯ ಹೋರಾಟದಲ್ಲಿ ರಾಜಿರಹಿತ ಪಂಥವನ್ನು ಪ್ರತಿನಿಧಿಸಿದ ಮಹಾನ್ ಸಾಹಿತಿ ಶರತ್ ಚಂದ್ರರ 'ವೈಕುಂಠನ ಮೃತ್ಯುಪತ್ರ' ಕಥೆ ಎತ್ತಿ ಹಿಡಿದಿರುವ ಮೌಲ್ಯಗಳ ಕುರಿತು ಮಾತನಾಡಿದರು. ಸಮಾಜದಲ್ಲಿ ಇಂದು ಪೋಷಕರು ಹಾಗೂ ಅವರ ಸ್ವಂತ ಮಕ್ಕಳು, ಸಹೋದರ–ಸಹೋದರಿಯರ ನಡುವೆಯೇ ನೈಜ–ಪ್ರೀತಿ ವಾತ್ಸಲ್ಯ ಕಣ್ಮರೆಯಾಗಿರುವ ಸಂದರ್ಭದಲ್ಲಿ, ಶರತ್ ಚಂದ್ರರು ಹೇಗೆ ತಮ್ಮ ಕಥೆ–ಕಾದಂಬರಿಗಳ ಮೂಲಕ ನಿರ್ವೈಯಕ್ತಿಕ ತಾಯ್ತನವನ್ನು ಭಾವನಾತ್ಮಕವಾಗಿ, ಮನಸ್ಸು ಕಲುಕುವಂತೆ ಎತ್ತಿ ಹಿಡಿದರು ಎಂಬುದನ್ನು ಅವರು ತೋರಿಸಿದರು. ಜೊತೆಗೆ, ರವೀಂದ್ರನಾಥ ಟಾಕೂರ್ ಸೇರಿದಂತೆ ಇತರ ಮಹಾನ್ ವ್ಯಕ್ತಿಗಳು ಹೇಗೆ ಶರತ್ ಚಂದ್ರರನ್ನು ಎತ್ತಿ ಹಿಡಿದರು ಎಂಬುದನ್ನು ತಿಳಿಸಿದರು. ಶರತ್‌ಚಂದ್ರರು, ನೈಜ ಪ್ರೇಮದ ಪರಿಕಲ್ಪನೆ ಕುರಿತು, ದೇಶದಲ್ಲಿ ನೊಂದವರ ಮೇಲಿನ ಶೋಷಣೆಯ ಕುರಿತು, ಸ್ವತಂತ್ರ ಸಂಗ್ರಾಮದ ಕುರಿತು ಯಾವ ಯಾವ ವಿಷಯಗಳನ್ನು ಆಳವಾಗಿ ಚಿತ್ರಿಸಿದ್ದಾರೆ ಎಂಬುದನ್ನು ಅವರ ಬರಹಗಳ ಮೂಲಕವೇ ಓದಿ ಹೇಳಿದರು. ರಾಜ್ಯ ಉಪಾಧ್ಯಕ್ಷರಾದ ಕಾ. ಅಪೂರ್ವ ಅಧ್ಯಕ್ಷತೆ ವಹಿಸಿದ್ದರು.

ಶಿಬಿರದ ಉದ್ಘಾಟನೆಯನ್ನು ರಾಜ್ಯ ಖಜಾಂಚಿ ಕಾ. ಸುಭಾಷ್ ಮಾಡಿದರು. ಉಪಾಧ್ಯಕ್ಷರಲ್ಲಿ ಒಬ್ಬರಾದ ಕಾ. ಹಣಮಂತು, 'ವಾಲ್ಕೈ' ಚಲನಚಿತ್ರದ ಪ್ರದರ್ಶನದ ಬಳಿಕ ಅದರ ವಿಶ್ಲೇಷಣೆ ಮಾಡಿದರು. ಮತ್ತೋರ್ವ ಉಪಾಧ್ಯಕ್ಷರಾದ ಕಾ. ಅಭಯ ದಿವಾಕರ್ ಸಮಾರೋಪ ಭಾಷಣ ಮಾಡಿದರು. ರಾಜ್ಯದ ಹಲವು ಜಿಲ್ಲೆಗಳಿಂದ ಬಂದಂಥ ನೂರಕ್ಕೂ ಹೆಚ್ಚು ಕಾರ್ಯಕರ್ತರು ಬಹಳ ಸ್ಫೂರ್ತಿ ಪಡೆದು ತಮ್ಮ ಜಿಲ್ಲೆಗಳಲ್ಲಿ ಎಐಡಿಎಸ್‌ಓ ಗಟ್ಟಿಗೊಳಿಸುವ ಪಣ ತೊಟ್ಟು ಮರಳಿದರು.

## ರಾಜ್ಯದಲ್ಲಿ ಬಾಣಂತಿ ಸಾವು : ನ್ಯಾಯಾಂಗ ತನಿಖೆಗೆ ಎಸ್‌ಯುಸಿಐ(ಸಿ) ಒತ್ತಾಯ

**ಈ ಕುರಿತು ಪಕ್ಷದ ರಾಜ್ಯ ಕಾರ್ಯದರ್ಶಿ ಕಾ॥ ಕೆ. ಉಮಾ ಅವರು ನೀಡಿರುವ ಪತ್ರಿಕಾ ಹೇಳಿಕೆ**

ಇತ್ತೀಚೆಗೆ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಭವಿಸಿದ ಬಾಣಂತಿಯರ ದುರಂತಮಯ ಸಾವುಗಳು ರಾಜ್ಯದಲ್ಲಿ ಆಳುವ ಮತ್ತು ವಿರೋಧ ಪಕ್ಷಗಳ ನಡುವೆ ಜಿದ್ದಾಜಿದ್ದಿಗೆ ಕಾರಣವಾಗಿರುವುದು ಅತ್ಯಂತ ವಿಪರ್ಯಾಸದ ಸಂಗತಿ.

ಹಿಂದಿನ ಬಿಜೆಪಿ ಆಳ್ವಿಕೆಯ ಸಂದರ್ಭದಲ್ಲೂ ಸೇರಿ, ಕಳೆದ 5 ವರ್ಷಗಳಲ್ಲಿ ರಾಜ್ಯದಲ್ಲಿ 3000ಕ್ಕೂ ಹೆಚ್ಚು ಬಾಣಂತಿಯರು ಸಾವನ್ನಪ್ಪಿದ್ದಾರೆ ಎಂಬ ಆಘಾತಕಾರಿ ಮಾಹಿತಿಯನ್ನು ಮಾನ್ಯ ಮುಖ್ಯಮಂತ್ರಿಗಳೇ ಸದನದಲ್ಲಿ ನೀಡಿದ್ದಾರೆ. ಬಿಜೆಪಿಯ ಆಳ್ವಿಕೆಯಲ್ಲೂ ಬಾಣಂತಿಯರು ಆಸ್ಪತ್ರೆಗಳಲ್ಲಿ ಜೀವ ಬಿಟ್ಟಿದ್ದಾರೆ ಎಂಬುದು ಕಾಂಗ್ರೆಸ್ ಸರ್ಕಾರವನ್ನು ಯಾವ ರೀತಿಯಿಂದಲೂ ಸಮರ್ಥಿಸಿದಂತೆ ಆಗುವುದಿಲ್ಲ. ಬದಲಿಗೆ ಎರಡೂ ಪಕ್ಷಗಳಿಗೆ ಜನರ ಜೀವದ ಕುರಿತು ಇರುವ ನಿಷ್ಕಾಳಜಿಯನ್ನು ಎತ್ತಿ ತೋರಿಸುತ್ತದೆ.

ಬಳ್ಳಾರಿಯಲ್ಲಿ ಸಂಭವಿಸಿದ ಸಾವುಗಳಿಗೆ ಕಳಪೆ ಗುಣಮಟ್ಟದ ಔಷಧಿ ಕಾರಣವೆಂದು ಹೇಳಲಾಗುತ್ತಿದೆ. ಹಾಗಾದರೆ ಇಂತಹ ಔಷಧಿಯನ್ನು ಖರೀದಿಸಲು ಅನುಮತಿ ಕೊಟ್ಟವರು ಯಾರು ಮತ್ತು ಯಾವ ಕಾರಣಕ್ಕಾಗಿ ಎಂಬುದು ಕೂಡ ಹೊರಬರಬೇಕು. ಸರ್ಕಾರಿ ಆಸ್ಪತ್ರೆಗಳಿಗೆ ಹೆರಿಗೆಗಾಗಿ ಬರುವ ಬಡ ಮಹಿಳೆಯರ ಜೀವವನ್ನು ಅಗ್ಗವಾಗಿ ಪರಿಗಣಿಸಿರುವುದು ಅಕ್ಷಮ್ಯ ಅಪರಾಧ. ಎಷ್ಟೇ ಪ್ರಭಾವಿಗಳಾಗಿದ್ದರೂ ಅವರಿಗೆ ಸರಿಯಾದ ಶಿಕ್ಷೆ ಆಗಲೇಬೇಕು.

ಈ ಹಿನ್ನೆಲೆಯಲ್ಲಿ ಬಳ್ಳಾರಿಯ ಘಟನೆಯೂ ಸೇರಿದಂತೆ ರಾಜ್ಯದಲ್ಲಿ ಸಂಭವಿಸಿದ ಬಾಣಂತಿಯರ ಸಾವಿನ ಕುರಿತು ನ್ಯಾಯಾಂಗ ತನಿಖೆ ನಡೆಯಬೇಕು ಎಂದು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವು ಒತ್ತಾಯಿಸುತ್ತದೆ.

ಜೊತೆಗೆ ರಾಜ್ಯದ ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸಲು ಅವಶ್ಯಕ ವೈದ್ಯರು, ಸಿಬ್ಬಂದಿಗಳನ್ನು ನೇಮಕ ಮಾಡಬೇಕು ಮತ್ತು ಪ್ರಯೋಗಾಲಯಗಳಲ್ಲಿ ಸೂಕ್ತ ಸೌಕರ್ಯಗಳನ್ನು ಒದಗಿಸಬೇಕೆಂದು ಪಕ್ಷ ಒತ್ತಾಯಿಸುತ್ತದೆ. ಅಲ್ಲದೆ, ಆರೋಗ್ಯ ಇಲಾಖೆಯಲ್ಲಿರುವ ಭ್ರಷ್ಟಾಚಾರವನ್ನು ತಡೆಗಟ್ಟಿ, ಜನರ ಮೂಲಭೂತ ಅಗತ್ಯವಾದ ಗುಣಮಟ್ಟದ ಆರೋಗ್ಯ ಸೇವೆಯನ್ನು ಉಚಿತವಾಗಿ ನೀಡಲು ಮುಂದಾಗಬೇಕು ಎಂದು ಆಗ್ರಹಿಸುತ್ತದೆ.




ಕೊಪ್ಪಳ ಜಿಲ್ಲೆಯ ಮುನಿರಾಬಾದ್ ಗ್ರಾಮಕ್ಕೆ ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳು ಎದುರಿಸುತ್ತಿರುವ ಬಸ್ ಸೌಲಭ್ಯಯದ ಕೊರತೆ ಹಾಗೂ ವಿವಿಧ ರೀತಿಯ ಸಮಸ್ಯೆಗಳನ್ನು ಪರಿಹರಿಸಲು ಆಗ್ರಹಿಸಿ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಎಐಡಿಎಸ್‌ಓ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)


## ಡಿಸೆಂಬರ್ 16, 2024, ಬೆಂಗಳೂರು: ಎಐಎಂಎಸ್‌ಎಸ್ ಆಗ್ರಹ!

# ಮಹಿಳೆಗೆ ಘನತೆ ಮತ್ತು ಸ್ವಾಸ್ಥ್ಯ ಖಾತ್ರಿ ಪಡಿಸಿ!!

ಡಿಸೆಂಬರ್ 16, 2012, ದೆಹಲಿಯಲ್ಲಿ ನಿರ್ಭಯಾಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆದ ಕರಾಳ ದಿನ. ಇದರ ಪ್ರಯುಕ್ತ, ಮಹಿಳೆಯರಿಗೆ ಘನತೆಯುಕ್ತ ಜೀವನ ಮತ್ತು ಅವರ ಆರೋಗ್ಯವನ್ನು ಖಾತ್ರಿ ಪಡಿಸುವ ಹಕ್ಕೊತ್ತಾಯಗಳನ್ನು ಮುಂದಿಟ್ಟುಕೊಂಡು, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್)ಯ ಕರ್ನಾಟಕ ರಾಜ್ಯ ಸಮಿತಿಯಿಂದ ಬೆಂಗಳೂರಿನ ಗಾಂಧಿ ಭವನದ ಕಸ್ತೂರಬಾ ಸಭಾಂಗಣದಲ್ಲಿ ರಾಜ್ಯ ಮಟ್ಟದ 'ಮಹಿಳೆಯರ ಆಗ್ರಹ ಸಮಾವೇಶ'ವನ್ನು ಹಮ್ಮಿಕೊಳ್ಳಲಾಗಿತ್ತು.

ಹಿರಿಯ ಸಾಹಿತಿಗಳು ಮತ್ತು ಸಾಮಾಜಿಕ ಕಳಕಳಿಯುಳ್ಳ ಚಲನಚಿತ್ರ ನಿರ್ದೇಶಕರೂ ಆಗಿರುವ, ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪರವರು ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿ, "ಒಬ್ಬ ಪುರುಷನನ್ನು ಮಹಿಳಾ ಸಮಾವೇಶದ ಉದ್ಘಾಟನೆಗೆ ಕರೆದಿದ್ದೀರಾ, ಇದು ಸಾಂಕೇತಿಕವಾಗಿ ಪುರುಷರಲ್ಲಿ ಸ್ತ್ರೀಪರವಾದ ಸಂವೇದನಾಶೀಲತೆ ಈ ಗಳಿಗೆಯ ಅವಶ್ಯಕತೆ ಎನ್ನುವುದರ ಸೂಚಕ.

'ಮಹಿಳಾ ಘನತೆ–ಮುಂದಿರುವ ಸವಾಲುಗಳು' ವಿಷಯದ ಮೇಲೆ ಮೊದಲ ಗೋಷ್ಠಿ ನಡೆಯಿತು. ಮನೋಚಿಕಿತ್ಸಕರು ಮತ್ತು ಆಪ್ತ ಸಲಹೆಗಾರರಾದ ಶ್ರೀ. ನಡಹಳ್ಳಿ ವಸಂತ್‌ರವರು, "ಮಹಿಳೆಯ ಘನತೆಯೆಂದರೆ ಒಂದು ಸಮಾಧಾನದ, ಸಮಾನತೆಯ ಗೌರವದ ಬದುಕು." ಎಂದು ವಿಶ್ಲೇಷಿಸಿದರು. ಸಮಾಜ, ಮರ್ಯಾದೆ, ಮಕ್ಕಳು ಎಂಬ ಕಾರಣಗಳ ಹೆಸರಿನಲ್ಲಿ ಅದೆಷ್ಟೋ ಮಹಿಳೆಯರು ದಿನನಿತ್ಯ ಎದುರಿಸುತ್ತಿರುವ ಮಾನಸಿಕ ಮತ್ತು ದೈಹಿಕ ಹಿಂಸೆಗಳಿಂದ ಹೊರಬರಲು ಹಿಂಜರಿಯುತ್ತಿದ್ದಾರೆ ಎನ್ನುವುದನ್ನು ತಮ್ಮ ಬಳಿ ಸಮಾಲೋಚನೆಗೆ ಬರುವ ಹಲವಾರು ಪ್ರಕರಣಗಳ ಉದಾಹರಣೆಗಳನ್ನು ನೀಡಿ ವಿವರಿಸಿದರು; ತುಂಬಾ ಸೂಕ್ಷ್ಮವಾಗಿ ಪುರುಷ ಪ್ರಧಾನ ಮನೋಧೋರಣೆ ಹೆಣ್ಣುಮಕ್ಕಳಲ್ಲಿಯೂ ಕೂಡ ಆಳವಾಗಿ ಬೇರೂರಿದೆ ಎಂದರು. ಇವೆಲ್ಲದರಿಂದ ಹೊರಬರಬೇಕಾದರೆ, ಮಹಿಳೆಯರು ಸಣ್ಣ–ಸಣ್ಣ ಅನ್ಯಾಯಗಳ ವಿರುದ್ಧ ಸಹ ಪ್ರತಿರೋಧಿಸುವ, ಸಮಾಜದ ಹಳೆಯ ನೀತಿ–ನಿಯಮಗಳನ್ನು ಕ್ಷಣ–ಕ್ಷಣವೂ ಪ್ರಶ್ನೆಮಾಡುವ ಮನಸ್ಥಿತಿಯನ್ನು ರೂಢಿಸಿಕೊಳ್ಳಬೇಕು. ತಮ್ಮದೇ ಸ್ನೇಹಿತೆಯರ ಗುಂಪುಗಳನ್ನು ಮಾಡಿಕೊಂಡು ತಮ್ಮ ಕಷ್ಟ–ಸುಖಗಳನ್ನು ಸದಾ ಹಂಚಿಕೊಳ್ಳಬೇಕು, ಚರ್ಚೆಗಳನ್ನು ನಡೆಸಬೇಕು. ಹಳೆಯ ಮನಸ್ಥಿತಿಯ ವಿರುದ್ಧ ಸೆಣಸಾಡದೇ, ಅದೆಷ್ಟೇ ಉನ್ನತ ಹುದ್ದೆಗೇರಿದರೂ, ಆರ್ಥಿಕ ಸ್ವಾವಲಂಬಿತನ ಹೊಂದಿದರೂ ಮಹಿಳೆ ದಾಸ್ಯದಿಂದ ಹೊರಬರಲು ಸಾಧ್ಯವಿಲ್ಲ" ಎಂದ ಅವರು, ಹೆಣ್ಣುಮಕ್ಕಳು ಮೊದಲಿಗೆ ತಾವು ತಮ್ಮ ಮನ:ಶಕ್ತಿಯನ್ನು ಗಟ್ಟಿಗೊಳಿಸಿಕೊಳ್ಳಬೇಕು ಎಂದು ಪ್ರೇರೇಪಿಸಿದರು.




ವೇದಿಕೆಯ ಮೇಲೆ ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪ, ಮನೋಚಿಕಿತ್ಸಕರಾದ ಶ್ರೀ ನಡಹಳ್ಳಿ ವಸಂತ್, ಎಐಎಂಎಸ್‌ಎಸ್‌ನ ರಾಜ್ಯ ನಾಯಕರು

ಇಂದು ಎಲ್ಲಾ ರೀತಿಯಿಂದಲೂ ಮಹಿಳೆ ದೌರ್ಜನ್ಯಕ್ಕೆ ತುತ್ತಾಗುತ್ತಿದ್ದಾಳೆ. ಇದರ ಮೂಲ ಕಾರಣ ಬಂಡವಾಳಶಾಹಿ ಸಾಮಾಜಿಕ–ಆರ್ಥಿಕ ಸಂರಚನೆಯಾಗಿದೆ, ತಳಸ್ತರದ ಮಹಿಳೆಯೇ ಇದರ ಮೊದಲ ಬಲಿಪಶುವಾಗಿದ್ದಾಳೆ. ಮಹಿಳೆಯರ ಸ್ಥಿತಿ–ಗತಿ, ಆ ದೇಶದ ಅಭಿವೃದ್ಧಿಯ ಮಾನದಂಡವನ್ನು ಸೂಚಿಸುತ್ತದೆ. ಹೆಣ್ಣುಮಕ್ಕಳಿಗೆ ಸ್ವಾಸ್ಥ್ಯವನ್ನು ಸರ್ಕಾರ ಖಾತ್ರಿಪಡಿಸಿದರೆ ಅದು ಮಾನವೀಯ ನಡೆ ಎನ್ನಬಹುದು. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸಮರ್ಪಕ ಸೌಲಭ್ಯಗಳಿಲ್ಲದೆ, ಸಕಾಲದಲ್ಲಿ ಚಿಕಿತ್ಸೆ ಲಭ್ಯವಿಲ್ಲದೆ ಬಾಣಂತಿಯರ ಸಾಲುಸಾಲು ಸಾವು ಸಂಭವಿಸುತ್ತಿವೆ. ಜನಪರ ಹಾಗೂ ಪ್ರಜಾಸತ್ತಾತ್ಮಕ ಸರ್ಕಾರಗಳು ಶಿಕ್ಷಣ ಮತ್ತು ಆರೋಗ್ಯವನ್ನು ಗ್ಯಾರಂಟಿ ಪಟ್ಟಿಗೆ ಸೇರಿಸಬೇಕು." ಎಂದು ಅವರು ಆಗ್ರಹಿಸಿದರು. "ಆದರೆ ನಮ್ಮನ್ನಾಳುವ ಸರ್ಕಾರಗಳಿಗೆ ಕಿಂಚಿತ್ತೂ ಅಂತಹ ಕಾಳಜಿಯಿಲ್ಲ. ಆಳ್ವಿಕರ ಬೆಂಬಲದೊಂದಿಗೆ, ಸನ್ನಡತೆಯ ಹೆಸರಿನಲ್ಲಿ ಅಪರಾಧಿಗಳಿಗೆ ಹೂಮಾಲೆ ಹಾಕಿ ಸನ್ಮಾನಿಸಲಾಗುತ್ತಿದೆ. ಈ ಘಟನೆ, ವ್ಯವಸ್ಥೆ ಎಷ್ಟು ವಿಕೃತವಾಗುತ್ತಿದೆ ಎಂಬುದನ್ನು ಪ್ರತಿಬಿಂಬಿಸುತ್ತದೆ" ಎಂದು ಕಳವಳ ವ್ಯಕ್ತಪಡಿಸಿದರು.

ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಐಎಂಎಸ್‌ಎಸ್‌ನ ರಾಜ್ಯ ಕಾರ್ಯದರ್ಶಿಗಳಾದ ಕಾ. ಶೋಭಾ ಎಸ್. ವಹಿಸಿದ್ದರು. ಎಐಎಂಎಸ್‌ಎಸ್‌ನ ರಾಜ್ಯ ಉಪಾಧ್ಯಕ್ಷರಲ್ಲಿ ಒಬ್ಬರಾದ ಕಾ. ಗುಂಡಮ್ಮ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಮತ್ತೋರ್ವ ಮುಖ್ಯ ಭಾಷಣಕಾರರಾದ ಎಐಎಮ್‌ಎಸ್‌ಎಸ್ ರಾಜ್ಯಾಧ್ಯಕ್ಷರಾದ ಕಾ॥ ಎಂ. ಎನ್. ಮಂಜುಳಾರವರು ಮಾತನಾಡುತ್ತಾ, "ನಮ್ಮ ಸಂಘಟನೆ, ಮಹಿಳೆಯರ ಸಮಸ್ಯೆಗಳ ವಿರುದ್ಧ ಇಡೀ ದೇಶದಾದ್ಯಂತ ಹೋರಾಟಗಳನ್ನು ಸಂಘಟಿಸುತ್ತಿದೆ. ನಮ್ಮ ಹೋರಾಟ ಪುರುಷರ ವಿರುದ್ಧವಲ್ಲ, ಪುರುಷ ಪ್ರಧಾನ ಮನೋಧೋರಣೆಯ ವಿರುದ್ಧ. ಹೆಣ್ಣು ಮಕ್ಕಳ ಏಳ್ಗೆಗಾಗಿ ಹಲವಾರು ಮಹನೀಯರು ಹೋರಾಟ ಮಾಡಿದ್ದಾರೆ. ಅದರಲ್ಲಿ ರಾಜಾ ರಾಮ್‌ಮೋಹನ್ ರಾಯ್, ಈಶ್ವರ್‌ಚಂದ್ರ ವಿದ್ಯಾಸಾಗರ್, ಜ್ಯೋತಿ ಬಾ ಫುಲೆ ಸೇರಿದಂತೆ ಬಹುಪಾಲು ಮಹನೀಯರು ಪುರುಷರೇ. ಮಹಿಳೆಯರ ಹೋರಾಟ ಕೆಲವೊಂದು ಸವಲತ್ತುಗಳಿಗಾಗಿ ನಡೆಯುವ ಹೋರಾಟವಲ್ಲ, ಬದಲಾಗಿ ಅದೊಂದು ಸಾಂಸ್ಕೃತಿಕ, ಕಾನೂನಾತ್ಮಕ ಮತ್ತು ರಾಜಕೀಯ ಹೋರಾಟ, ಸಮಾಜದ ಆಮೂಲಾಗ್ರ ಬದಲಾವಣೆಗಾಗಿ ನಡೆಯುತ್ತಿರುವ ಹೋರಾಟ. ಹೆಣ್ಣು ಮಕ್ಕಳ ಮೇಲೆ ಅಗೌರವಕ್ಕೆ ಮೊದಲನೆಯದಾಗಿ ಪುರುಷ ಪ್ರಧಾನ ಧೋರಣೆ ಕಾರಣವಾದರೆ, ಮತ್ತೊಂದು ಕಾರಣ ಲಾಭದಾಹಿ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ. ಈ ವ್ಯವಸ್ಥೆ ಅಂತರ್ಜಾಲ–ಸಿನಿಮಾ–ಸಾಹಿತ್ಯಗಳಲ್ಲಿ ಅಶ್ಲೀಲತೆಯನ್ನು ಲಾಭದ ಉದ್ದಿಮೆಯಾಗಿ ಬಳಸುತ್ತಿದೆ. ಹಾಗೆಯೇ ಮದ್ಯ–ಮಾದಕ ವಸ್ತುಗಳಿಗೆ ಕುಮ್ಮಕ್ಕು ನೀಡುತ್ತಿದೆ. ಸಮಾಜವನ್ನು ಪ್ರಜಾತಾಂತ್ರಿಕರಣಗೊಳಿಸಲು, ನೈಜ ಪ್ರಜಾತಾಂತ್ರಿಕ ಮೌಲ್ಯಗಳನ್ನು ಎತ್ತಿ ಹಿಡಿಯಲು ಮಹಿಳೆಯರು ಸಂಘಟಿತ ಹೋರಾಟಗಳನ್ನು ಕಟ್ಟಬೇಕಿದೆ." ಎಂದು ಕರೆನೀಡಿದರು.

ಎರಡನೇ ಗೋಷ್ಠಿ, 'ಮಹಿಳಾ ಸ್ವಾಸ್ಥ್ಯ–ವ್ಯವಸ್ಥೆಯ ಕರಾಳತೆ' ಎಂಬ ವಿಷಯದ ಮೇಲೆ ಜರುಗಿತು. ಎಐಎಂಎಸ್‌ಎಸ್‌ನ ರಾಷ್ಟ್ರ ಉಪಾಧ್ಯಕ್ಷರಲ್ಲಿ ಒಬ್ಬರಾದ ಡಾ.ಸುಧಾ ಕಾಮತ್ ಮಾತನಾಡುತ್ತಾ, "ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳಿಂದಾಗಿ ಇಂದು ಆರೋಗ್ಯ ಕ್ಷೇತ್ರವು ಸಾರ್ವಜನಿಕ ಸೇವೆಯಾಗುವ ಬದಲು, ಒಂದು ಲಾಭದ ಉದ್ದಿಮೆಯಾಗಿ ಮಾರ್ಪಟ್ಟಿದೆ. ಸರ್ಕಾರ ಸಂಪೂರ್ಣವಾಗಿ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಿದೆ. ಅದರ ಪರಿಣಾಮವಾಗಿಯೇ ಇಂದು ಕರ್ನಾಟಕದಾದ್ಯಂತ ಸರ್ಕಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರ–ಶಿಶುಗಳ ಸಾವುಗಳು ವರದಿಯಾಗುತ್ತಿವೆ. ಇದಕ್ಕೆ ಏಕೈಕ ಪರಿಹಾರ ಆರೋಗ್ಯ ಕ್ಷೇತ್ರದ ಸಾಮಾಜೀಕರಣ. ಹಿಂದಿನ ಸೋವಿಯತ್ ಒಕ್ಕೂಟದಲ್ಲಿ ಸರ್ಕಾರವೇ ಗುಣಮಟ್ಟದ ಶಿಕ್ಷಣ–ಆರೋಗ್ಯವನ್ನು ಉಚಿತವಾಗಿ ನೀಡುತಿತ್ತು. ಅದೇ ಮಾದರಿಯನ್ನು ನಮ್ಮ ಸರ್ಕಾರಗಳು ಅಳವಡಿಸಿಕೊಳ್ಳಬೇಕು" ಎಂದು ಆಗ್ರಹಿಸಿದರು. ಎಐಎಂಎಸ್‌ಎಸ್‌ನ ರಾಜ್ಯ ಸೆಕ್ರೆಟರಿಯೆಟ್ ಸದಸ್ಯರಾದ ಕಾ. ಕೆ. ಹೇಮಾವತಿ ಈ ಗೋಷ್ಠಿಯನ್ನು ನಡೆಸಿಕೊಟ್ಟರು.

ರೈತಾಪಿ ಮಹಿಳೆಯರು, ವಿದ್ಯಾರ್ಥಿನಿಯರು, ಗೃಹಿಣಿಯರು, ಬೇರೆ–ಬೇರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುವ ಉದ್ಯೋಗಸ್ಥ ಮಹಿಳೆಯರು, ಪೌರ ಕಾರ್ಮಿಕರು ಸೇರಿದಂತೆ ಹಲವಾರು ವಿಭಾಗಗಳಲ್ಲಿನ ನೂರಾರು ಮಹಿಳಾ ಪ್ರತಿನಿಧಿಗಳು ರಾಜ್ಯದ ವಿವಿಧ ಜಿಲ್ಲೆಗಳಿಂದ ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಗೋಷ್ಠಿಗಳಲ್ಲಿ ಪ್ರತಿನಿಧಿಗಳಿಂದ ಅತ್ಯಂತ ಮಹತ್ವದ ಪ್ರಶ್ನೆ–ಅಭಿಪ್ರಾಯಗಳು ಮಂಡನೆಯಾಗಿ, ಉತ್ತಮ ಗುಣಮಟ್ಟದ ಸಂವಾದ ಜರುಗಿತು. ಹಲವಾರು ಹಕ್ಕೊತ್ತಾಯಗಳನ್ನು ಒಳಗೊಂಡ ಗೊತ್ತುವಳಿಯನ್ನು ಮಹಿಳೆಯರ ಸುರಕ್ಷತೆ ಹಾಗೂ ಆರೋಗ್ಯದ ಭದ್ರತೆಗೆ ಸುತ್ತುವರೆದಂತೆ ಮಂಡಿಸಿ, ಪ್ರತಿನಿಧಿಗಳಿಂದ ಅನುಮೋದನೆ ಪಡೆಯಲಾಯಿತು.

ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸದಿದ್ದರೆ ಮುಂದಿನ ಹಂತದಲ್ಲಿ ಬಲಿಷ್ಠ ಮಹಿಳಾ ಹೋರಾಟವನ್ನು ಕಟ್ಟುವ ಸಂಕಲ್ಪದೊಂದಿಗೆ ಈ ಯಶಸ್ವಿ ಸಮಾವೇಶ ಕೊನೆಗೊಂಡಿತು.

# ಮಂಡ್ಯದ 87ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಮ್ಮ ಪ್ರಕಟಣೆಗಳು

ಇದೇ ಡಿಸೆಂಬರ್ 20–22 ರ ವರೆಗೆ ಮೂರು ದಿನಗಳ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಮಂಡ್ಯದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಎಐಡಿವೈಓ ವತಿಯಿಂದ ಪುಸ್ತಕ ಮಳಿಗೆಯನ್ನು ತೆರೆಯಲಾಗಿತ್ತು. ನಮ್ಮ ಪಕ್ಷ ಹಾಗೂ ಮುಂದಳಗಳಿಂದ ಪ್ರಕಟಗೊಂಡಿರುವ ಭಗತ್ ಸಿಂಗ್, ನೇತಾಜಿ, ಸಾವಿತ್ರಿಬಾಯಿ ಫುಲೆ, ಕುದ್ಮಲ್ ರಂಗರಾವ್, ಹೆಲೆನ್ ಕೆಲರ್ ಸೇರಿದಂತೆ ಮಹಾನ್ ಕ್ರಾಂತಿಕಾರಿಗಳ, ಮಾನವತಾವಾದಿಗಳ, ವಿಜ್ಞಾನಿಗಳ, ಮಹಿಳೆಯರ ವಿಮೋಚನೆಗೆ ಶ್ರಮಿಸಿದ ಮಹನೀಯರ ಪುಸ್ತಕಗಳು, ಮಾರ್ಕ್ಸ್‌ವಾದಕ್ಕೆ ಸಂಬಂಧಿಸಿದ ವೈಚಾರಿಕ ಸಾಹಿತ್ಯ, ರೈತರ, ಕಾರ್ಮಿಕರ ಸಮಸ್ಯೆಗಳ ಕುರಿತಾದ ಪುಸ್ತಕಗಳನ್ನು ಇಡಲಾಗಿತ್ತು. ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಗೊ. ರು. ಚನ್ನಬಸಪ್ಪ ಅವರು ನಮ್ಮ ಪುಸ್ತಕ ಮಳಿಗೆಗೆ ಭೇಟಿ ನೀಡಿದರು. ಯುವಕರಲ್ಲಿ ಮಾನವ ಮೌಲ್ಯಗಳು ಕುಸಿಯುತ್ತಿರುವ ಕುರಿತು ಕಳವಳವನ್ನು ವ್ಯಕ್ತಪಡಿಸಿದರು. ಯುವಕರಲ್ಲಿ ಉನ್ನತ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಬೆಳೆಸುವ ನಮ್ಮ ಪ್ರಯತ್ನವನ್ನು ಶ್ಲಾಘಿಸಿದರು.

ಮೇಲುಕೋಟೆ ಶಾಸಕರಾದ ಶ್ರೀ ದರ್ಶನ್ ಪುಟ್ಟಣ್ಣಯ್ಯ ಅವರು ನಮ್ಮ ಮಳಿಗೆಗೆ ಭೇಟಿ ನೀಡಿ ಪುಸ್ತಕಗಳನ್ನು ಖರೀದಿಸಿದರು ಹಾಗೂ ಒಂದು ಶಾಲೆಯ ಸುಮಾರು 75 ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಡಿಸಿದರು. ಉನ್ನತ ವಿಚಾರಗಳನ್ನು, ಮೌಲ್ಯಗಳನ್ನು, ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಪುಸ್ತಕಗಳ ಬಗ್ಗೆ ಜನರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿ ಬಹಳಷ್ಟು ಜನರು ಪುಸ್ತಕಗಳನ್ನು, ಖರೀದಿಸಿದರು.



Published by: K.Radhakrishna on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120. Website: www.sucicommunist.org EDITOR: K.RADHAKRISHNA